4127

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥



ವಿಶ್ವಜ್ಯೋತಿ

...ಗ ಭದ್ರ

...7

...ನಾಧೀಶ್ವರ

ಡಾ॥ ಶ್ರೀ. ಜಂ. ಜೇ. ವಿ.

YA
೨

ವಿಶ್ವಜ್ಯೋತಿ

ವೀರಭದ್ರ



ಸೂರ್ಯ ಸಿಂಹಾಸನಾಧೀಶ್ವರ

ಡಾ॥ ಶ್ರೀ ಜ. ಚ. ನಿ.



ಪ್ರಕಾಶಕರು :

ಶ್ರೀ ವೀರಭದ್ರೇಶ್ವರ ಅಷ್ಟಸಹಸ್ರೋತ್ಸವ

ಸಮಿತಿ, ನರಗುಂದ.

ಜಿಲ್ಲಾ. ಧಾರವಾಡ.



ಮೊದಲ ಮುದ್ರಣ ೧೯೬೬

★

೨೮೦೦ ಪ್ರತಿಗಳು

★

೧೦೦೦ ಪ್ರತಿಗಳವೆಚ್ಚ ನಿರ್ವಾಹಕರು
ಶ್ರೀ ಎಮ್. ಕೆ. ನಾಗಠಾಣ
ಶ್ರೀ ವೀರಭದ್ರೇಶ್ವರ ಪ್ರಿಂಟಿಂಗ ಪ್ರೆಸ್
ನರಗುಂದ. ಜಿಲ್ಲಾ :- ಧಾರವಾಡ

★

ಬೆಲೆ : ೨-೫೦

★

★

ಮುದ್ರಕರು : ಎಮ್. ಕೆ. ನಾಗಠಾಣ.
ಶ್ರೀ ವೀರಭದ್ರೇಶ್ವರ ಪ್ರಿಂಟಿಂಗ ಪ್ರೆಸ್, ನರಗುಂದ
ಫೋನ ನಂ. ೮೮.

ಶ್ರೀ.ಶ್ರೀ.ಶ್ರೀ. ಜ್ಞಾನ ಸಿಂಹಾಸನಾಧೀಶ್ವರ
ವಾರಣಾಸಿ-(ಕಾಶಿ) ೧೦೦೮ ಜಗದ್ಗುರು
ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ
ಸನ್ನಿಧಿಗೆ ಸ್ವಂ. ಭಕ್ತರಾಗಿ
೨೩-೧೨-೮೭




ಸೂರ್ಯ ಸಿಂಹಾಸನಾಧೀಶ್ವರ

ಡಾ|| ಶ್ರೀ ಜ. ಚೆ. ನಿ.


ಸಂಚಾಲಕರ ಶಿವರಿಂದ ಶಿವಪ್ಪಶಾಸ್ತ್ರಿ

[illegible]
[illegible]
[illegible]
[illegible]


ಕಡಪಾ ಜಿಲ್ಲೆಯ
ರಾಯಚೋಟಿಯ



ಶ್ರೀ ವೀರಭದ್ರದೇವರು.



ಸಂಸ್ಮರಣೀಯ ಶರಣರಾದ



ಲಿಂ. ಶ್ರೀ ಶರಬಸಪ್ಪ ಗಂಗಪ್ಪ ನಾಗಠಾಣ
ನರಗುಂದ.




ಸಂಸ್ಮರಣೀಯ ಶರಣೆಯರಾದ



ಲಿಂ. ಶ್ರೀಮತಿ ನಿಂಗವ್ವ ಕೋಂ। ಕರಬಸಪ್ಪ ಸಾಗಶಾಣ
ನರಗುಂದ.



ದಾನಿಗಳಾದ ದಂಪತಿಗಳು



ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀಮತಿ ಸಿದ್ದಮ್ಮ ನಾಗಠಾಣ
ನರಗುಂದ.

ಮೊದಲು ಮಾತು

ವೀರಶೈವ ಇದೊಂದು ಹೆಮ್ಮರ. ತೀರ ಹಳೆಯ ಮರ, ಅನಾದಿ ಕಾಲದ ಹೆಮ್ಮರ. ರುದ್ರ-ಭದ್ರರು ಉತ್ಪಾದಿಸಿದ ಮತ, ಅನಾದಿ ವೀರಶೈವ ಜನಕ ಶಿವ, ಆದಿ ವೀರಶೈವ ಜನಕ ವೀರಭದ್ರ, ಇಂತಿದ್ದರೂ ಬಸವಣ್ಣನವರ ಕಾಲಕ್ಕೆ ಹುಟ್ಟಿತೆಂದು ಹಲವರು ಹೇಳುವರು. ಮತ್ತು ಆಚಾರ್ಯರ ಕಾಲದ್ದೆಂದು ಹೇಳುವರು. ಈ ಹೇಳಿಕೆ ಸರಿಯಲ್ಲ. ಬಸವಣ್ಣನವರ ಕಾಲದ ಆಧುನಿಕ ವೀರಶೈವ ವೃಕ್ಷವು ಫಲವಾಗಿ ನಿಂತ ಮರ, ಹಣ್ಣು ಬಿಟ್ಟಾಗಲೇ ಮರ ಹುಟ್ಟಿರಲಾರದು; ಹುಟ್ಟದು. ಅದರಂತೆ ಆಚಾರ್ಯರ ಕಾಲದ ಬಗೆಗೂ ಹೇಳಬಹುದು. ಅದಕ್ಕೆ ಮುನ್ನವೇ ಮರ ಹುಟ್ಟಿ ಬೆಳೆದಿರಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. 'ಕಾಳಿ ಕಣ್ ಕಾಣದ ಮುನ್ನ'-ವೀರಶೈವವಿತ್ತು-ಅನಾದಿ ಕಾಲದಲ್ಲಿ! ಅದನ್ನು ವೀರಭದ್ರನು ಪುನಶ್ಚೇತನಗೊಳಿಸುವನು ಆದಿಕಾಲದಲ್ಲಿ! ಇದರಿಂದ ವೀರಭದ್ರನು ಆದಿಕಾಲದ ವೀರಶೈವದ ಮೂಲಪುರುಷನು. ಇದಕ್ಕೆ ಶಿವಾಗಮ ಪುರಾಣಗಳ, ಸಾಕ್ಷಿಯುಂಟು.

೨ನೆಯದಾಗಿ ವೀರಭದ್ರನು ಯಜ್ಞ ಕ್ರಾಂತಿಕಾರನು. ಹಿಟ್ಟು ತುಪ್ಪಗಳನ್ನು ಸುಡುವ, ಪ್ರಾಣಿವಧೆಗೆ ಅವಕಾಶವನ್ನು ಕಲ್ಪಿಸಿದ್ದ ಯಜ್ಞಗಳನ್ನು ನಿರೋಧಿಸುವ ಕ್ರಾಂತಿಗೆ ವೀರೇಶನು ಪ್ರಪ್ರಥಮವಾಗಿ ನಾಂದಿ ಹಾಡಿದನು. ಭಾರತದ ಕ್ರಾಂತಿಪಥದಲ್ಲಿ ಮೊದಲ ಮೈಲುಗಲ್ಲಾದನು. ದೃಪ್ತರಾದ ದೇವಗಣರನ್ನು ದಾರಿಗೆ ತಂದನು.

೩ನೆಯದಾಗಿ ವಿಷ್ಣು ನೇತ್ರಾರ್ಚಿತನಾಗಿ 'ಕಣ್ಣಡಿಕ'ನೆಂದು ಖ್ಯಾತನಾಗಿದ್ದನು. ಬರಬರುತ್ತ ಕನ್ನಡಿಗನೆನಿಸುವನು; ಕನ್ನಡಿಗರ ಮೂಲಪುರುಷನಾಗುವನು; ಕರ್ನಾಟಕದ ಪ್ರಾಂತದೇವತೆಯಾಗಿ ದೀಪ್ತಿಗೊಂಡನು; ನಾಡಿನಾದ್ಯಂತ ಆರಾಧ್ಯನಾದನು. ವೀರೇಶನ ಮಂದಿರಗಳಿಲ್ಲದ ಊರುಗಳಿಲ್ಲ, ತೀರ್ಥ ಕ್ಷೇತ್ರಗಳಿಲ್ಲ.

೪ನೆಯದಾಗಿ ವೀರೇಶನು ಆರ್ಯ, ದ್ರಾವಿಡ ಸಮನ್ವಯಾಚಾರ್ಯನು. ಆರ್ಯರ ಅನೀತಿ ಅನ್ಯಾಯ, ಅನಾಚಾರಗಳ ಮೇಲೆ ದಡಿಯನ್ನು ಎತ್ತಿದಾತನು. ಅವರ ದ್ವೇಷ-ಮತ್ಸರಗಳನ್ನು ಸೆದೆಬಡಿದಾತನು. ದ್ರಾವಿಡರಿಗೆ ಧಾರ್ಮಿಕ

ಸಂಸ್ಕಾರವಿತ್ತು ಸುಸಂಸ್ಕೃತರನ್ನಾಗಿಸಿದಾತನು, ಆರ್ಯರು ದ್ರಾವಿಡರು ಪರಸ್ಪರ ಕೂಡಿಬಾಳುವಂತೆ ಅನುಗ್ರಹಿಸಿದಾತನು.

ಜನೆಯದಾಗಿ ಅಹಂಕಾರ ಅಧಿಕಾರಗಳಿಗೆ ಒಳಗಾಗದವನು. ಸ್ವಾರ್ಥ ಸಂಕುಚಿತತೆಗಳಿಗೆ ಸೋಲದವನು, ಸಮಾಜವಾದಿಯಾಗಿ. ಮಾನವತಾವಾದಿಯಾಗಿ ಜನಜೀವನವನ್ನು ಉತ್ತಮಗೊಳಿಸಿದಾತನು. ಅವಕ್ಷನಾದ ದಕ್ಷನನ್ನು, ನರರಿಗೆ ಸಿಂಹನಂತಿದ್ದ ನರಸಿಂಹನನ್ನು ಶಿಕ್ಷಿಸಿ ಜನದ ಬಾಳಿಗೆ ನೆಮ್ಮದಿಯನ್ನುಂಟು ಮಾಡಿದನು. ಎಲ್ಲರು ಭಾವಿಸಿರುವಂತೆ ವೀರೇಶನು ಆಕಾಶದೇವನಲ್ಲ ಎಲ್ಲರಂತೆ ಈ ಲೋಕದಲ್ಲಿ ಅವತರಿಸಿ ಜನತೆಯ ಜೀವನಕ್ಕೆ ವೀರ ಚೇತನವನ್ನು ತುಂಬಿದಾತನು.ಹೊಸ ತಿರುವನ್ನು. ಹೊಸ ಆಯಾಮವನ್ನು ತಂದಾತನು. ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಇರುತ್ತಿದ್ದ ಅಶಿವನನ್ನು ಅಳ್ಳಗಳೆದು ಶಿವಭಾವವನ್ನುಂಟು ಮಾಡಿದಾತನು.

ವೀರೇಶನು ವೇದ ಪೂರ್ವಕಾಲ. ಆತನು ಆಗಿಹೋಗಿ ಇಂದಿಗೆ ಸುಮಾರು ಎಂಟು ಸಾವಿರ ವರ್ಷಗಳಾಗಿವೆ. ಆದರೂ ಆತನದೇ ಆದ ಸತ್ ಸಂಸ್ಕೃತಿ ತೇಜೋವಂತ ವೃತ್ತಿ ಇಂದಿಗೂ ಜನಜೀವನದಲ್ಲಿ ಜೀವಂತವಾಗಿ ನೆಲೆನಿಂತಿವೆ. ಶ್ರದ್ಧೆ ನಿಷ್ಠೆಗಳು ಅಚ್ಚಳಿಯದಿವೆ. ಆತನ ಆ ವೀರ ಪ್ರವಾಹವು ಪುರವಂತರ ರೂಪದಲ್ಲಿ ಇಂದಿಗೂ ಅವಿಚ್ಛಿನ್ನವಾಗಿ ಹರಿದು ಬಂದು ಜೀವಂತವಾಗಿ ನಿಂತಿದೆ. ಜ್ವಲಂತವಾಗಿ ಬೆಳಗುತಿದೆ. ವೀರಧ್ವಜ, ವೀರವಾದ್ಯಗಳಾದ ಡೊಳ್ಳು, ಸಮ್ಮಾಳ ಕಹಳೆ, ಕರಡಿವಾದ್ಯ, ಮೊದಲಾದವು ಆತನೆ ಸೃಜಿಸಿದ ವೀರತನದ ಸಾಂಸ್ಕೃತಿಕ ಕುರುಹುಗಳು, ವೀರಕಲೆಗಳು.ಪುರವಂತರು ವೀರಾವೇಶದಿಂದ ವೀರವೇಷದಿಂದ ವೀರ ನೃತ್ಯಗಳನ್ನೆಸಗುತ್ತ, ವೀರಕೃತ್ಯಗಳನ್ನೆಸಗುತ್ತ ವೀರಧ್ವನಿಗಳನ್ನು ಮಾಡುತ್ತ, ವೀರವಾಕ್ಯಗಳನ್ನು ಉದ್ಘೋಷಿಸುತ್ತ ಉತ್ಸವಗಳಲ್ಲಿ ಉತ್ಸಾಹವನ್ನು ತುಂಬುತ್ತಾರೆ. ವೀರೇಶನ ಹೆಸರಿನಲ್ಲಿ ಗುಗ್ಗಳಸೇವೆ ಮಂಗಳಕಾರ್ಯಗಳಲ್ಲಿ ಸಾಗಿಬರುತ್ತಿದೆ. ಕುರಿಯನ್ನು ಬ್ರಹ್ಮ ಶಿವನನ್ನಾಗಿಸಿದ ಸರ್ವಾದರ್ಶ ಶ್ರೇಯಸ್ಸು ವೀರೇಶನದು. ಕುರುಬರಾದಿಯಾಗಿ ಎಲ್ಲ ಕೋಮಿನವರು ಆತನ ಶಿಷ್ಯರು,ವೀರೇಶನ, ಶಿಷ್ಯಪ್ರವಾಹ ಸಣ್ಣದೇನಲ್ಲ.

ಇವನ್ನೆಲ್ಲ ಇಂದು ನಾವೆಲ್ಲ ಮರೆತು ಕುಳಿತಿದ್ದೇವೆ. ವೀರೇಶನ ಮೂಢ ಸಂಪ್ರದಾಯದಲ್ಲಿ ವೀರತನದ ವಿಸ್ಮೃತಿಯಲ್ಲಿ ಕನ್ನಡತನದ ನಿರಭಿಮಾನದಲ್ಲಿ ಸಾಗಿ ಬರುತ್ತಿದೆ. ಇವು ತೊಲಗಿ ಆತನ ಆ ವಿಶಾಲ ಮನೋಭಾವ, ವಿಶುದ್ಧ ಜಾಗ್ರತಭಾವ, ಸಮನ್ವಯ ಭಾವ, ಆತನ ಕನ್ನಡತನದ ಕೆಚ್ಚು, ಕ್ರಾಂತಿ-ಘನೋದ್ದೇಶ, ಅಧಿಕಾರಕ್ಕೆ ಆಶಿಪಡದೆ ಅನ್ಯಾಯಕ್ಕೆ ಆಶಿಸದೇ, ದ್ವೇಷಾಸೂಯೆಗಳಿಗೆ ಪಾಲುಮಾರದೆ ಇರುವಿಕೆ, ಯಜ್ಞಯಾಗಾದಿಗಳನ್ನು ನಿರೋಧಿಸುವಿಕೆ, ಇವೆ ಮುಂತಾದವುಗಳ ಪುನಶ್ಚೇತನಕ್ಕೆ ಪ್ರಯತ್ನಿಸುವುದೇ, ಮತ್ತು ಆತನ ಆ ಜಾನಪದ ಕಲೆಗಳನ್ನು ಪ್ರವರ್ಧಿಸುವುದೇ, ವೀರಶೈವದ ಪುರಾತನತೆಯನ್ನು ಅರಿವುದೆ, ಆತನನ್ನು ಕನ್ನಡ ಮೂಲಪುರುಷನೆಂದು ತಿಳಿದು ಮನ್ನಿಸುವುದೇ, ಈ ಅಷ್ಟಸಹಸ್ರೋತ್ಸವದ ಧ್ಯೇಯವಾಗಿದೆ.

ಡಾ. ಶ್ರೀ ಜ. ಚ. ನಿ.

—— ——

.... ಪರಿಚಯ ....

ಬದುಕಿನ ಬಹು ಕ್ಷೇತ್ರದಲ್ಲಿ ಸಾಂಸ್ಕೃತಿಕ ಪ್ರೇಮವನ್ನು ಹರಡಿ ನಾಡಿಗರ ಹೃದಯದಲ್ಲಿ ನಂದದ ನಂದಾದೀಪವಾಗಿರುವ ವ್ಯಕ್ತಿಯೇ ನರಗುಂದದ ಶ್ರೀ ಮಲ್ಲಿಕಾರ್ಜುನಪ್ಪ ಕರಬಸಪ್ಪ ನಾಗಠಾಣ. ಅವರು ನರಗುಂದದ ಶ್ರೀ ವೀರಭದ್ರೇಶ್ವರ ಅಚ್ಚುಕೂಟದ ಒಡೆಯರು. ಶ್ರೀ ವೀರಭದ್ರೇಶ್ವರ ಅಚ್ಚುಕೂಟ ಅದು ಅವರ ಸೇವಾಭಿಮಾನದ ಸತ್ಕಸದನ. ಅದು ಜನ್ಮ-ವೆತ್ತಿದ ಎಂಟನೆಯ ವರ್ಷದಲ್ಲಿಯೇ ಶ್ರೀ ವೀರಭದ್ರೇಶ್ವರನ ಅಷ್ಟ ಸಹಸ್ರೋತ್ಸವ ನಾಡಿನಲ್ಲಿ ನಡೆದಿದೆ. ಈ ಉತ್ಸವದಲ್ಲಿ ತಮ್ಮ ಪಾಲಿನ ಭಕ್ತಿಯ ಸೇವೆ ಸಲ್ಲಬೇಕೆಂಬುದೇ ಶ್ರೀ ಮಲ್ಲಿಕಾರ್ಜುನ ಕರಬಸಪ್ಪ ನಾಗಠಾಣರ ಇಚ್ಛೆ. ಕನ್ನಡಿಗರ ಕುಲದ ದೇವರಾದ ಶ್ರೀ ವೀರಭದ್ರೇಶ್ವರನ ಹೆಸರು ಹೊತ್ತ ಈ ಅಚ್ಚುಕೂಟ ಮುದ್ದಾದ ಮುದ್ರಣಕ್ಕೆ ಹೆಸರಾಗಿದೆ ಅಂತೆಯೇ ಕನ್ನಡಿಗರ ಸಾಹಿತ್ಯ ಕಣಜ ತುಂಬುವ ಅನೇಕ ಕೃತಿ ಪುಷ್ಪಗಳು ಈ ಅಚ್ಚುಕೂಟದಿಂದ ಅಚ್ಚಾಗಿವೆ; ಅಚ್ಚಾಗುತ್ತಲಿವೆ. ಇದು ಆನಂದನೀಯ; ಅಭಿನಂದನೀಯ.

ನರಗುಂದದ ಸಂಸ್ಮರಣೀಯ ಶರಣರಾದ ಕರಬಸಪ್ಪ ಹಾಗು ಸೌ. ನಿಂಗವ್ವ ಅವರ ವರ ಪುತ್ರರಾದ ಶ್ರೀ ನಾಗಠಾಣರು ತಮ್ಮ ತಾಯಿ-ತಂದೆಯವರನ್ನು ಕೃತಜ್ಞತೆಯಿಂದ ನೆನೆಯುವಂತೆ, ಕುಲ ದೇವರಾದ ಶ್ರೀ ವೀರಭದ್ರೇಶ್ವರನನ್ನು ಭಕ್ತಿಯಿಂದ ಅರ್ಚಿಸುತ್ತಾರೆ; ಆರಾಧಿಸುತ್ತಾರೆ. ಶ್ರೀ ವೀರಭದ್ರೇಶ್ವರನ ಕೃಪಾಪಾತ್ರರಾದ ಅವರು ತಮ್ಮ ತಾಯಿ-ತಂದೆಯವರ ಪುಣ್ಯ ಸ್ಮರಣೆಗಾಗಿ 'ವಿಶ್ವಜ್ಯೋತಿ ವೀರಭದ್ರ' ಈ ಕೃತಿಯನ್ನು ಅಚ್ಚು ಹಾಕಿದ್ದಾರೆ. ಅಲ್ಲದೆ ಈ ಹಿಂದೆ ಶ್ರೀ ಷ. ಬ್ರ. ಮುರುಘೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಕೊಣ್ಣೂರ, ಹಿರಿಯಮಠ ಅವರಿಂದ ವಿರಚಿತವಾದ 'ಹಿತಮಾರ್ಗೋಪದೇಶ'ವನ್ನು ಅಚ್ಚುಗೊಳಿಸಿದ್ದಾರೆ. ಅಭಿಮಾನದ ಹಾಗು ಭಕ್ತಿಯ ಸೇವೆಯಿಂದ ತಮ್ಮನ್ನು ಸಾರ್ಥಕ ಸೇವೆಗೆ ಸಮರ್ಪಿಸಿಕೊಂಡಿದ್ದಾರೆ. ವೀರಶೈವ ದಾರ್ಶನಿಕ ಸಾಹಿತ್ಯ ಸಾಮ್ರಾಟರಾದ

ಡಾ ಶ್ರೀ ಜ.ಚ.ನಿ. ಯವರ ಸಿದ್ಧಹಸ್ತದಿಂದ ಇಳಿದು ಬಂದ 'ವಿಶ್ವಜ್ಯೋತಿ ವೀರಭದ್ರ' ಈ ಕೃತಿಯನ್ನು ಅಚ್ಚುಗೊಳಿಸುವಲ್ಲಿ ಆತ್ಮ ಶ್ರೀಯೊಂದಿಗೆ ವೀರ ಶ್ರೀಯನ್ನು ಭದ್ರಶ್ರೀಯನ್ನು ತೋರಿಸಿದ್ದಾರೆ; ತೋರಿದ್ದಾರೆ.

ಶ್ರೀ ಮಲ್ಲಿಕಾರ್ಜುನಪ್ಪ ನಾಗತಾಣ ಅವರ ಕೈಯಲ್ಲಿ ಕೆಲಸಸೋತಿ-ತಲ್ಲದೆ ಕೆಲಸದ ಕೈಯಲ್ಲಿ ಅವರೆಂದೂ ಸೋಲರು. ಸೋಲರಿಯದ ವೀರರಾದ ಅವರು ಆಂಧ್ರ ಪ್ರದೇಶದ ಕಡಪಾ ಜಿಲ್ಲೆಯ ರಾಯಚೋಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ತಮ್ಮ ತಾಯಿ-ತಂದೆಯವರ ಸವಿ ನೆನಹಿಗಾಗಿ ಒಂದು ಸೇವಾ ಸದನ ಕಟ್ಟಿಸಿ ವೀರಸಂಸ್ಕೃತಿಯನ್ನು ತೋರಿಸಿದ್ದಾರೆ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬಂತೆ ಶ್ರೀ ಮಲ್ಲಿಕಾರ್ಜುನಪ್ಪನವರ ಧರ್ಮಪತ್ನಿಯವರಾದ ಶರಣೆ ಸಿದ್ಧಮ್ಮನವರ ಸೇವೆಯೂ ಈ ಪುಣ್ಯಕಾರ್ಯದಲ್ಲಿ ಸಂದಿದೆ. ಈ ದಾನಿದಂಪತಿಗಳ ಬಹುಮುಖ ಸೇವೆಯ ನರುಗಂಪು ಪಿಡುಗಾಲವೂ ನಾಡಿನಲ್ಲಿ ಉಳಿದಿದೆ' ಉಳಿಯುತ್ತಿದೆ.

ಸರಸ ಸಜ್ಜನಿಕೆಯ ಮಧುರ ಹೃದಯದ ಧರ್ಮಾಭಿಮಾನಿ ಶ್ರೀ ಎಮ್. ಕೆ. ನಾಗತಾಣರ ಮಕ್ಕಳಾದ ಕರಬಸಪ್ಪ ಹಾಗು ಚನ್ನಪ್ಪ ಅವರು ತಮ್ಮ ತಾಯಿ-ತಂದೆಯವರ ಆದರ್ಶವನ್ನೇ ತಮ್ಮ ಬಾಳಿನ ಗುರಿಯನ್ನಾಗಿರಿಸಿಕೊಂಡು ಮುಂದುವರೆದಿದ್ದಾರೆ. ನಡೆ ನುಡಿಗಳಿಂದ ಚೆನ್ನಾದ ಅವರು ಸಕಲರ ಲೇಸಿಗಾಗಿ ಬದುಕುವ ಸತ್ಯ ಸಂಕಲ್ಪ ಮಾಡಿದ್ದಾರೆ. ಪರಸ್ಪರ ಗೌರವ ವಿಶ್ವಾಸಗಳಿಂದ ಲೇಸಿಗರಾಗಿ ಬದುಕುವ ಶ್ರೀ ನಾಗತಾಣರ ಮನೆತನ ಅದು ತನ್ನ ಅಪಾರ ಪ್ರಭಾವ ಗೌರವ ಮುಂದುವರೆಯಿಸಿಕೊಂಡು ಹೋಗುವುದರಲ್ಲಿ ಶ್ರೀ ವೀರಭದ್ರೇಶ್ವರನ ಕೃಪಾರಕ್ಷೆ ಅವರಿಗೆ ಬೆನ್ನಾಸರೆಯಾಗಿದೆ; ಬೆಂಗಾವಲಾಗಿದೆ.

ನರಗುಂದ —ಎ. ಎಸ್. ಹೂಗಾರ ಎಂ. ಎ., ಬಿ. ಇಡಿ.

೮-೧೨-೧೯೭೭ ದಂಡಾಪೂರ; ನರಗುಂದ.

ಪ್ರಕಾಶಕರ ನುಡಿ

ಸಮಾಜದಲ್ಲಿರುವುದು ಎರಡೇ ವರ್ಗ. ಒಂದು ಶೋಷಣೆ ಮಾಡುವವರದು. ಇನ್ನೊಂದು ಶೋಷಣೆಗೆ ಒಳಗಾಗುವವರದು. ಈ ಶೋಷಣೆಯೆನ್ನುವದು ಆರ್ಥಿಕವಾಗಿಯಾಗಲಿ, ರಾಜಕೀಯವಾಗಿಯಾಗಲಿ, ಧಾರ್ಮಿಕವಾಗಿಯಾಗಲಿ, ಇನ್ನಾವುದೇ ರಂಗದಲ್ಲಾಗಲಿ ತನ್ನ ಪ್ರಭಾವ ಬೀರಿರುತ್ತದೆ. ಮಾನವನ ಇತಿಹಾಸವನ್ನು ಪ್ರಾಚೀನ ಕಾಲದಿಂದಲೂ ಅವಲೋಕಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ವ್ಯಕ್ತವಾಗಿ ಯಾಗಲಿ ಅವ್ಯಕ್ತವಾಗಿಯಾಗಲಿ ಬೌದ್ಧಿಕಜಾಣತನದ ಮರೆಯಲ್ಲಾಗಲಿ,ಹಲವಾರು ರೂಹುಧಾರಿಯಾಗಿ ಇದ್ದು ನಡದೇ ಇದೆ. ಇದಕ್ಕೆಲ್ಲ ಮಾನವನಲ್ಲಿರುವ ಸ್ವಾರ್ಥವೊಂದೇ ಕಾರಣವಾಗಿದೆ. ಕಾಲಕಾಲಕ್ಕೆ ಈ ಪ್ರವೃತ್ತಿ ಕುರಿತು ಅನೇಕ ಹೋರಾಟಗಳು ನಡೆದುದುಂಟು.

ಆದರೆ ಅವೆಲ್ಲ ಇತಿಹಾಸದ ಗರ್ಭದಲ್ಲಿ ಮುಸಗಿ ಹೋಗುವಂತೆ ತಾಂತ್ರಿಕ ಜಾಣತನ ಉಪಯೋಗಿಸಿ,ವಾಸ್ತವಿಕತೆಗೆ ಬಣ್ಣ ಬಳಿದು,ವಿಕೃತ ವಿಚಾರಗಳ ಪ್ರಭಾವ ಬೀರಿದ್ದುದು ಕಂಡು ಬರುತ್ತದೆ.

ನಾವಿಂದು ಕಾಣುತ್ತಿರುವ ಅಸಮಾನತೆ, ಅತೃಪ್ತಿ, ಅವಿಚಾರ, ಅಶಾಂತಿಗೆ ಮೂಲ ಕಾರಣ ಅವೈಧಾನಿಕವಾದ ಬದುಕು ಹಾಗೂ ಧಾರ್ಮಿಕ ಭಾವನೆಗಳು. ಇವನ್ನೆಲ್ಲ ತೊಡೆದು ಶಾಂತಿಗೆ ಅವಶ್ಯವಾದ ವೈಧಾನಿಕ ಧರ್ಮ ಹಾಗೂ ಸಮೃದ್ಧ ಬದುಕನ್ನು ಬದುಕಬೇಕಾಗಿದೆ. ಇದು ಒಂದು ಹೋರಾಟದಿಂದ ಕ್ರಾಂತಿಯಿಂದ ಸಾಧಿಸಬೇಕಾದ ಸಾಧನೆ. ಇದು ಈ ಹಿಂದೆ ಮಾನವೇತಿಹಾಸದಲ್ಲಿ ಎಂದಾದರೂ ನಡೆದಿದೆಯೇ? ಎಂದು ಸಿಂಹಾವಲೋಕಿಸಿದರೆ ಎಂಟು ಸಹಸ್ರ ವರ್ಷಗಳ ಪೂರ್ವದಲ್ಲಿಯೇ ಶ್ರೀವೀರಭದ್ರೇಶ್ವರನು ಎಲ್ಲ ಅನಿಷ್ಟಗಳನ್ನು ತೊಡೆದು ಹಾಕಿ ಸಮಾಜಕ್ಕೆ ನೆಮ್ಮದಿಯ ಬದುಕನ್ನು ದೊರಕಿಸಿಕೊಟ್ಟನು ಶಾಂತಿಯ ಜೀವನವನ್ನು ನೀಡಿದನು.

ಅಂದಿನ ಅವನ ಸಾಧನೆ ಅಮೋಘವಾದುದು,ಅಲೌಕಿಕವಾದುದು,ಅಸಮಾನವಾದುದು, ಅತಾರ್ಕಿಕವಾದುದು. ಆದರೆ ಅವನ ಸಾಧನೆಗಳ ವಾಸ್ತವಿಕ

ತೆಯನ್ನು ಸ್ವಾರ್ಥಮಯವಾದ ಬೌದ್ಧಿಕ ದಿವಾಳಿಯ ಶಾಬ್ದಿಕ ಧರ್ಮಲಂಪಟರು ಕತ್ತಲೆಯಲ್ಲಿಟ್ಟು ತಮ್ಮ ಸ್ವಾರ್ಥಸಾಧನೆಯ ಘೋಷಣೆ ನಡೆಸಿದುದರಿಂದಲೇ ಇಂದು ಜಗತ್ತಿನಲ್ಲಿ ಅನೀತಿ, ಭ್ರಷ್ಟಾಚಾರ, ಅಶಾಂತಿಗಳಾದಿಯಾಗಿ ಮಾನವನ ಬದುಕಿನಲ್ಲಿ ತಾಂಡವವಾಡುತ್ತಿವೆಯಷ್ಟೇ ಅಲ್ಲ ಅಧರ್ಮದ ರೂಪವೇ ಧರ್ಮವೆನಿಸಿದೆ.

ಅದನ್ನು ಮನದಂದು ಪರಮಪೂಜ್ಯ ನಿಡುಮಾಮಿಡಿ ಸೂರ‍್ಯ ಸಿಂಹಾಸನಾಧೀಶ್ವರ ಶ್ರೀಶೈಲ ಶ್ರೀ ಜ ಪ. ಡಾ. ಚನ್ನಬಸವರಾಜ ಶಿವಾಚಾರ‍್ಯ ಮಹಾಸ್ವಾಮಿಗಳು ಗೂಳೂರು ಸಂಸ್ಥಾನ. ಅವರ ಆಶೀರ್ವಾದ ಹೊತ್ತು ನಮ್ಮ ಈ ಸಮಿತಿ ಭಾರತದ ಪ್ರಪ್ರಥಮ ಕ್ರಾಂತದರ್ಶಿ ವೀರೇಶನ ಅಷ್ಟ ಸಹಸ್ರೋತ್ಸವ ಆಚರಿಸುವ ನಿರ್ಧಾರದೊಂದಿಗೆ ರೂಪತಾಳಿತು. ನಾಡಿನ ವಿವಿಧ ಭಾಗಗಳ ಜನ ನಮ್ಮೊಡನೆ ಸಹಕರಿಸುವ, ಹುರುಪು ಹುಮ್ಮಸ್ಸುಗಳೊಂದಿಗೆ ಕಾರ್ಯಭಾಗಿ ಯಾಗುವ, ಆಶ್ವಾಸನೆ ನೀಡಿದರು. ತನ್ನಿಮಿತ್ತವಾಗಿ ಶ್ರೀಕ್ಷೇತ್ರ ಎಡೂರಿನಿಂದ "ವೀರ ಜ್ಯೋತಿ" ಹೊರಟು, ನಾಡಿನ ವಿವಿಧ ಭಾಗಗಳಲ್ಲಿ ಸಂಚರಿಸಿ, ಶ್ರೀಕ್ಷೇತ್ರ ಗೊಡಚಿಗೆ ಆಗಮಿಸುವುದು. ಗೊಡಚಿಯಲ್ಲಿ ಉತ್ಸವದ ಅಂಗವಾಗಿ ವಿವಿಧ ಸಭೆ-ಸಮ್ಮೇಲನಗಳು ನಡೆಯುವವು. ಎಲ್ಲೆಡೆಗೆ ಶ್ರೀವೀರೇಶನ ಸೈದ್ಧಾಂತಿಕ ಕ್ರಾಂತಿಯ ತತ್ವಗಳ ಕಂಪು ಹರಡಿ, ನಾಡಿನ ಜನ ಜೀವನಕ್ಕೆ ನೆಮ್ಮದಿ, ಶಾಂತಿಗಳನ್ನು ತಂದರೆ ನಮ್ಮ ಶ್ರಮಸಾರ್ಥಕವೆಂದು ಭಾವಿಸುತ್ತೇವೆ.

ಉತ್ಸವದ ಅಂಗವಾಗಿ ಒಂದು ವಿಶೇಷ ಗ್ರಂಥ ಪ್ರಕಟಿಸುವ ಉದ್ದೇಶದಿಂದ ನಿಡುಮಾಮಿಡಿ ಸೂರ‍್ಯ ಸಿಂಹಾಸನಾಧೀಶ್ವರ ಶ್ರೀಶೈಲ ಶ್ರೀ ಜ. ಪ. ಡಾ. ಚನ್ನಬಸವರಾಜ ಶಿವಾಚಾರ್ಯ ಮಹಾಸ್ವಾಮಿಗಳು ಗೂಳೂರು ಸಂಸ್ಥಾನ. ಅವರನ್ನು ವಿನಂತಿಸಿಕೊಳ್ಳಲು ಅವರು ಈ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಈ ಗ್ರಂಥದಿಂದ ಶ್ರೀಗಳು ನಮ್ಮ ಸಮಿತಿಯ ಕಾರ್ಯಗಳಿಗೆ ಕಳಸವಿಟ್ಟಿದ್ದಾರೆ. ಸಮಿತಿಯ ಉತ್ಸವದ ಉದ್ದೇಶದ ಸಮಗ್ರ ದರ್ಶನ ಈ ಗ್ರಂಥದಿಂದ ದೊರೆಯಬಲ್ಲುದು. ಅದಕ್ಕಾಗಿ ಸಮಿತಿಯು ಶ್ರೀಗಳ ಪದತಲಕ್ಕೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಸಮಿತಿಯ ಉದ್ದೇಶವರಿತು ರಾಯಚೋಟಿಯ ಶ್ರೀವೀರಭದ್ರೇಶ್ವರನ ಪರಮಭಕ್ತರಾದ ನರಗುಂದದ ಶ್ರೀವೀರಭದ್ರೇಶ್ವರ ಮುದ್ರಣಾಲಯದ ಒಡೆಯರಾದ ಶ್ರೀ ಮಲ್ಲಿಕಾರ್ಜುನಪ್ಪ ಕರಬಸಪ್ಪ ನಾಗಠಾಣ ಇವರು ತಮ್ಮ ಮಾತಾ-ಪಿತೃಗಳ ಸ್ಮರಣೆಗಾಗಿ ಒಂದು ಸಾವಿರ ಪ್ರತಿಗಳನ್ನು ಉಚಿತ ಅಚ್ಚುಹಾಕಿ ಕೊಡುವುದಾಗಿ ತಿಳಿಸಿ ಅದರಂತೆ ಅಚ್ಚುಹಾಕಿ ಕೊಟ್ಟಿದ್ದಾರೆ. ಶ್ರೀ ವೀರಭದ್ರೇಶ್ವರನು ಅವರ ಉದಾರತನಕ್ಕೆ ಅನಂತ ಕೃಪೆಮಾಡಲೆಂದು ಆಶಿಸಿ ಸಮಿತಿ ತನ್ನ ಕೃತಜ್ಞತೆ ಸೂಚಿಸುತ್ತದೆ.

ಸಮಿತಿಯ ಕಾರ್ಯಗಳಲ್ಲಿ ಸಹಕರಿಸಿ, ನೆರವಿತ್ತು ಕಾರ್ಯಭಾಗಿಗಳಾದ ಹಲವಾರು ಜನರಿಗೆ, ಆ ವೀರಭದ್ರೇಶ್ವರನು ಅನಂತ ಆಶೀರ್ವಾದಗಳನ್ನು ನೀಡಲೆಂದು ಆಶಿಸಿದ್ದೇವೆ.

ಎಡೂರ — ರಾಜಶೇಖರಪ್ಪ. ಗು. ಹೊಸಕೇರಿ

ದಿ ೧೩-೧೨-೧೯೬೭ — ನರಗುಂದ.

ಕಾರ್ಯಾಧ್ಯಕ್ಷರು

ಶ್ರೀ ವೀರಭದ್ರೇಶ್ವರ ಅಷ್ಟಸಹಸ್ರೋತ್ಸವ

ಸಮಿತಿ

– ಪರಿವಿಡಿ –

———

೧೦. ವೀರಗುಡಿ ಇಂದಿನ ಅಧರ ಗುರಿನುಡಿ.

ಭಾರತೀಯತೆಯ ಬಲವನ್ನು ಬೆಳಸಿ ಬಾನೆತ್ತರಕ್ಕೆ ಹಾರಿಸುವುದೆ ಇಂದಿನ ನಮ್ಮ ವೀರಗುಡಿಯ ಹೊಸ ನೋಟ; ಹೊಸ ಪಾಠ. ಮಾನವೀಯ ಶಕ್ತಿ ಮೈಗೂಡಿ ಬರಬೇಕು; ಮನಗೂಡಿ ಬರಬೇಕು. ಅಕ್ರಿಯತೆ, ಅನಾಚಾರ, ಅವಿಚಾರ, ನವನಾಗರಿಕತೆಯ ನೆಪದಲ್ಲಿ ಬೆಳೆವ ಅನಾಗರಿಕತೆ ಇವೇ ಇಂದಿನ ನಿಷಿದ್ಧ ಯಜ್ಞಗಳು. ಇವನ್ನು ನಿರೋಧಿಸುವುದೆ ವೀರಭಕ್ತರ ಧ್ಯೇಯ; ವೀರಗುಡಿಯ ದರ್ಶನ.

ಭಾರತೀಯರ ಅಭ್ಯುದಯ-ಶ್ರೇಯಗಳನ್ನು ರೂಪಿಸುವ ಕಾರ್ಯಗಳಲ್ಲಿ ನೂತನ ಔನ್ನತ್ಯಗಳಿಗೆ ವೈಶಾಲ್ಯಗಳಿಗೆ ಏರುವುದೆ. ವೀರಗುಡಿಯ ಏರಿಸುವಿಕೆ. ಇದರಲ್ಲಿ ನಿಜವಾದ ನಿಷ್ಠೆಯಿಂದ ದೃಢವಾದ ವಿಶ್ವಾಸದಿಂದ ಬಾಳಿನಲ್ಲಿ ಮುನ್ನಡೆವುದೆ ನಮ್ಮ ಧ್ಯೇಯ. ಪ್ರತಿಯೊಬ್ಬರು ಪ್ರಕೃಷ್ಟ ಪಥದಲ್ಲಿ ಪ್ರಗತಿಶೀಲರಾಗಬೇಕು; ಆದರ್ಶ ಧ್ಯೇಯವಾದಿಗಳಾಗಬೇಕು; ವಿಶುದ್ಧ ಜೀವನದಲ್ಲಿ ವಿಶ್ವವಿಶಾಲ ಸಾಮಾಜಿಕ ಜೀವನದಲ್ಲಿ ಮುನ್ನಡೆದು ವಿಜಯಶೀಲರಾಗಬೇಕೆಂಬುದೆ ಈ ಉತ್ಕ್ರಾಂತಿಯ ಉದ್ದೇಶ.

ಇಂದು ಭಾರತದಲ್ಲಿ ಆರ್ಯ-ದ್ರಾವಿಡ ಎಂಬ ಭೇದ ಉಳಿದಿಲ್ಲ. ಹಲವರ ಭಾವದಲ್ಲಿ ಮಾತ್ರ ಉಳಿದಿರಬಹುದು. ಆದರದು ಉಪಯುಕ್ತವಲ್ಲ. ಉಪಲಕ್ಷಿಸಬೇಕಿಲ್ಲ. ನಾವೆಲ್ಲ ಭಾರತೀಯರು; ಮಾನವತಾವಾದಿಗಳು- ಆಗಲು ಅಪೇಕ್ಷಿಸುತ್ತೇವೆ. ಅಪೇಕ್ಷೆ ಆಳಪಟ್ಟು ಇಂದಿನ ವಿಶ್ವದ ಇತಿಹಾಸದಲ್ಲಿ ನವಯುಗವನ್ನು ನಿರ್ಮಿಸಲು ವೀರವ್ರತಿಗಳಾಗಬಯಸುತ್ತೇವೆ. ಬಡತನ ಹೇಡಿತನ "ಬಿರುಕುತನ" ಮೇಲುಕೀಳುತನಗಳಿಂದ ವಿಮೋಚನೆಯಾಗಬೇ-ಕೆಂದು ಬಯಸುತ್ತೇವೆ. ವೀರೇಶನಂತೆ ಅಧಿಕಾರಕ್ಕೆ ಆಶಿಸದೆ, ಅನ್ಯಾಯ ಅನೀತಿಗಳನ್ನು ಸಹಿಸದೆ ವರ್ತಿಸುವ ಸದವಕಾಶವು ಲಭಿಸುವಂತಾಗಲೆಂದು ಆಶಿಸುತ್ತೇವೆ. ಲಭಿಸಿದರೆ ಹೆಮ್ಮೆ ಪಡುತ್ತೇವೆ.

ಇಂದಿಗೆ ಎಂಟು ಸಾವಿರ ವರ್ಷಗಳ ಹಿಂದೆಯೇ ವೀರೇಶನು ಸಮಾಜವಾದಕ್ಕೆ ಶ್ರಮಿಸಿದನು. ಸಮತಾವಾದಕ್ಕೆ ಶ್ರಮಿಸಿದನು. ಆರ್ಯ ದ್ರಾವಿಡರ

ಸಮನ್ವಯಕ್ಕೆ ಹೋರಾಡಿದನು; ಹಲವಾರು ಸಲ ಉಗ್ರವಾಗಿಯೇ ಹೋರಾಡುವ ಪ್ರಸಂಗವೊದಗಿತು. ಅದೇ ಆತನ ಸತ್ವ ಪರೀಕ್ಷೆಯ ನಿಕಷವಾಯಿತು. ರುದ್ರಗಣ ವೀರಗಣ ಶಿವಗಣ ದೇವಗಣರ ಜೀವನಗಳನ್ನು ಅಭ್ಯುತ್ಥಾನಗೊಳಿಸಿದನು. ಶೈವೀಭಾವದ ಸತ್ ಸಮಾಜದ ಭವ್ಯಸೌಧವನ್ನು ರೂಪಿಸಿದನು. ಸಮಾಜವಾದಿ ಜೀವನ ಪಥವನ್ನು ತೋರಿದನು. ಸಮಾಜಕ್ಕೆ ಕಂಟಕವಾಗಿ ಯಾರೂ ಬಾಳಬಾರದು. ಆಶೆ, ಅಧಿಕಾರ ದಾಹ, ಸ್ವಾರ್ಥ, ದುರಹಂಕಾರ, ದುರಭಿಮಾನ, ದುರ್ವಿನಿಯೋಗಗಳಿಗೆ ಅವಕಾಶವಿರಬಾರದು. ನೈಜವಾದ ಮಾನವೀಯವಾದ, ನ್ಯಾಯವಾದ ಆಶಾವಾದ, ಸಹಜವಾದ ಮನೋಭಾವಗಳಿರಬೇಕು. ಸಚ್ಚಾರಿತ್ರರ ಸಂಗಾತಿತನವಿರಬೇಕು. ರಚನಾತ್ಮಕವಾದ ವೈಯಕ್ತಿಕ ವಿಕಾಸವಾದ, ಸಾಂಸ್ಕೃತಿಕವಾದ ಸಾಮಾಜಿಕವಿಕಾಸವಾದ ವೀರೇಶನದು. ತಾನು ಕೈಕೊಂಡ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿ ಜನತೆಯ ಕ್ಷೇಮವನ್ನು ಕಾಪಾಡುತ್ತಿದ್ದನು.

'ಸಹನಾವವತು ಸಹನೌ ಭುನಕ್ತು' ಇದು ವೀರೇಶನ ಜೀವನ ಪಲ್ಲವಿ ಸ್ವಾರ್ಥ. ಆತನ ಜೀವನ ಜಲಧಿಯಲ್ಲಿ ಎಲ್ಲಿ ಹುಡುಕಿದರೂ ಸಿಕ್ಕದು. ಜಲಹೇಗೆ ಜಗತ್ತಿನ ಹಿತಕ್ಕಾಗಿ ಇರುವುದೋ ವೀರೇಶ ಹಾಗಿದ್ದನು. ಸಾಮಾಜಿಕರ ಏಳ್ಗೆಯೆ ಆತನ ಏಳ್ಗೆ! ಮದ ಮತ್ಸರಗಳ ಯಾರಲ್ಲಿಯೂ ಎಲ್ಲಿಯೂ ಇರಬಾರದು ಭ್ರಷ್ಟಾಚಾರ ಅದೆಷ್ಟೂ ಸಲ್ಲದು. ಶಿಷ್ಟಾಚಾರದಿಂದಿರಬೇಕು. ವಿದ್ವೇಷ, ವಿಭೇದಭಾವ ಅಂದರೆ ವಿಭಜನ ಮಾಡುವಿಕೆಗಳಿರಬಾರದು. ವಿಮುಖರೂ ವಿಮನಸ್ಕರೂ ಆಗಿರಬಾರದು. ಹಸುವಿನಿಂದ ಯಾರೂ ಬಳಲಬಾರದು. ಹಸಿವನ್ನು ನೀಗಿಸುವ ಆಹಾರ ದ್ರವ್ಯಗಳನ್ನು ಯಾವ ಕಾರಣದಿಂದಲೂ ನಷ್ಟಗೊಳಿಸಬಾರದು. ಬಡತನದಿಂದ ಬೇಯಬಾರದು. 'ಸಹವೀರ್ಯಂಕರವಾವಹೈ' ಇದು ಆತನ ಆ ವೀರಧ್ವಜದ ಉದ್ದೇಶ. ವಿಷಣ್ಣತೆಗೆ ಯಾರೂ ಒಳಗಾಗದೆ ವೀರಶ್ರೀಯಿಂದ ಕೂಡಿರಬೇಕು. ವೀರವಂಶರಾಗಿರಬೇಕು. ವೀರರಸಭರಿತರಾಗಿರಬೇಕಲ್ಲದೆ ವಿರಸರಾಗಿ ವಿಹ್ವಲರಾಗಿ ವಿಹರಿಸಬಾರದು ವಿಸ್ರಸ್ತತೆಯಿಂದ ಕೂಡಿದ್ದ ವಿಷಾದ ಧ್ವನಿ ಎಲ್ಲಿಯೂ ಯಾವಲ್ಲಿಯೂ ವಿಸ್ಫೋಟವಾಗಕೂಡದು. ಆದರೆ ವೀರೇಶನು ಅದನ್ನು ಅದೆಷ್ಟೂ

ಸಹಿಸುತ್ತಿರಲಿಲ್ಲ. ಇದ್ದಲ್ಲಿಗೆ ಹೋಗಿ ತನ್ನ ಪರಾಕ್ರಮದಿಂದ ಪರಿಹರಿಸುತ್ತಿದ್ದನು. 'ಮಾ ವಿದ್ವಿಷಾಹ ವೈ' ಎಂಬುದೇ ಆತನ ಉಸಿರು ಸರ್ವತೋಮುಖವಾದ ಭದ್ರತೆಯನ್ನು ಕಾಪಾಡುವುದೆ ಆತನ ಆ ವೀರತನದ ವಿಶಿಷ್ಟ ವೃತ್ತಿ; ವಿಶುದ್ಧ ವೃತ್ತಿ, ಶೈವೀಭಾವಕ್ಕಾಗಿ ಶಾಂತಿಗಾಗಿ ಸುಖಸಮೃದ್ಧಿಗಾಗಿ ತನ್ನ ಪ್ರಾಣವನ್ನು ಪಣವಿಟ್ಟಾದರೂ ಹೆಣಗುತ್ತಿದ್ದನು. ಪಾಶವೀ ವೃತ್ತಿಗಳನ್ನು ಖಂಡಿಸುತ್ತಿದ್ದನು. ಪಶುತ್ವವನ್ನಾಗಲಿ ಪತಿತ್ವವನ್ನಾಗಲಿ ಸಹಿಸುತ್ತಿರಲಿಲ್ಲ. ಪರಮಾರ್ಥ ವೃದ್ಧಿ ಪದಾರ್ಥ ಸಮೃದ್ಧಿಗಳನ್ನು ಬಯಸುತ್ತಿದ್ದನು. ವೀರಕಲೆಗಳನ್ನು ವೆಗ್ಗಳಿಸುತ್ತಿದ್ದನು. ವಿಷಮತೆಯನ್ನು ಹೋಗಲಾಡಿಸುತ್ತಿದ್ದನು. ಅಂತೆಯೇ ಆತನು ಅಷ್ಟೊಂದು ಪರಾಕ್ರಮಿಯಾಗಿದ್ದರೂ ಶಿವನಲ್ಲಿ ಶಿವದಲ್ಲಿ ವಿಶ್ವಸ್ತನಾಗಿದ್ದನು. ವಿಶ್ವರಕ್ಷಣ ಕಾರ್ಯದಲ್ಲಿ ವಿಶ್ರಾಂತಿಯಿಲ್ಲದೆ ಶ್ರಮಿಸುವುದರಲ್ಲಿ ವಿಶ್ರುತನಾಗಿರುವನು. ವಿವಿಧ ಕೋಮಿನವರಿಗೂ ವಂದ್ಯನಾಗಿರುವನು. ಸ್ವಾರ್ಥಕ್ಕಾಗಿ ಯಾರನ್ನೂ ವಿರೋಧಿಸುವವನಲ್ಲ; ಶೋಷಿಸುವವನಲ್ಲ. ವಿಲೋಭನವೆಂಬರೆ ಆಗದು. ವಿಲಾಸವೆಂದರಾಗದು. ತನಗಾಗಿ ಯಾರೊಡನೆಯೂ ವಿರಸಭಾವವನ್ನು ತಳೆಯುವವನಲ್ಲ. ಶಿವತ್ವಕ್ಕೆ ವಿರೋಧವಾದರೆ ಸಹಿಸುವವನಲ್ಲ. ವಿಭುವಾಗಿಯೊ ಪ್ರಭುವಾಗಿಯೊ ಮೆರೆಯಬೇಕೆಂಬ ಮನಸಿಗನಲ್ಲ. ಅತ್ಯೈಶ್ವರ್ಯದಿಂದ ಅಲಂಕಾರಗಳಿಂದ ಅಟ್ಟಹಾಸ ಮಾಡುವವನಲ್ಲ. ಶ್ರೀಮಂತಿಕೆಯಿಂದ ಸಡಗರಿಸುವವನಲ್ಲ. ಯಾವುದಕ್ಕೂ ಕಳವಳಿಸುವವನಲ್ಲ. ತಳಮಳಿಸುವವನಲ್ಲ. ಆತನಲ್ಲಿ ಚಿತ್ತಕ್ಷಿಪ್ತತೆ ಚಿಂತೆಗಳಿರಲಿಲ್ಲ. ತಾನಾಗಿ ತನಗಾಗಿ ಬೇರೆ ಯಾರಿಗೂ ಯಾವ ಬಗೆಯಲ್ಲಿಯೂ ಉಪದ್ರವಗಳನ್ನು ತಂದೊಡ್ಡುತ್ತಿರಲಿಲ್ಲ. ವಿಪ್ಲವಿಸುತ್ತಿರಲಿಲ್ಲ. ಸ್ವಾರ್ಥದ ಸೆಣಸಾಟವೆಂಬರೆ ಆಗದು. ಕಪಟ, ವಿಕಟಗಳು ಆತನ ಬಳಿ ಸುಳಿಯವು. ಜೊಳ್ಳುತನ ಪೊಳ್ಳುತನಗಳನ್ನು ಸಹಿಸುತ್ತಿರಲಿಲ್ಲ. ಹರಟೆಯ ಮಾತುಗಳಿಗಿಂಬಿರಲಿಲ್ಲ. ಹೊಲ್ಲದ ಕೆಲಸಗಳನ್ನು ಕೈಕೊಳ್ಳುತ್ತಿರಲಿಲ್ಲ. ಹೊಲ್ಲಮೆ ಆತನಿಗೆ ಸಲ್ಲದು. ಅನ್ಯಾಯವನ್ನು ಕಳೆಯಲು ಕಾಳಗಕ್ಕೆ ಇಳಿಯುತ್ತಿದ್ದನು. ಇಳಿದು ಹಣಿದಾಡುತ್ತಿದ್ದನು. ಕಲಿತನದಿಂದ ಕಾದುತ್ತಿದ್ದನು. ಕಳ್ಳತನದಿಂದ ಬಂದು ಎದುರಾಳಿಯನ್ನು ಇರಿಯುತ್ತಿರಲಿಲ್ಲ. ಕುಹಕತನದಿಂದ ಕಾಡುತ್ತಿರಲಿಲ್ಲ.

ಸಚ್ಚಾರಿತ್ರ್ಯನ್ನು ಪೀಡಿಸುತ್ತಿರಲಿಲ್ಲ. ಆರಾಧಕರನ್ನು ಕಡೆಗಣಿಸದೆ ಇರು ತ್ತಿರಲಿಲ್ಲ. ಎಲ್ಲರಲ್ಲಿ ಹದುಳತೆಯನ್ನು ಹಬ್ಬಿಸುವುದೆ ಆತನ ಮಣಿಹ. ಅದಕ್ಕಾಗಿಯೆ ತನ್ನ ವೀರಧ್ವಜವನ್ನು ಎತ್ತಿ ಹಾರಿಸಿದ; ವೀರತನವನ್ನು ಬಳಸಿದ; ಹಲವು ಬಗೆಯಲ್ಲಿ ಹಂಚಿದ. ಆತನ ಆ ಜೀವಂತ ವೀರಗುಡಿ ಗಿದ್ದ ವಿಶುದ್ಧ ಗುರಿಗಳಿವು; ನಿರಿಗಳಿವು-

ಇಷ್ಟೆ ಅಲ್ಲ, ಇನ್ನೂ ಆಲಿಸಿ.

ಮರ್ತ್ಯಕ್ಕೆ ಮಾನವೀಯ ವೀರತ ಅಗತ್ಯ. ಜೀವನ ಮರಣಗಳಿಗಾಗಿ ಅಂಜಬಾರದು; ಅಳುಕಬಾರದು. ಧರ್ಮ ಬೇಕು; ಧರ್ಮದ ಅತಿರೇಕಬೇಕಿಲ್ಲ. ದೃಢಿಷ್ಟ ಶಿಷ್ಟ ದುಡಿಮೆ ಅರಿಮೆ ಒಲುಮೆ ನಲುಮೆಗಳು ಬಾಳು ಬಾಳಿಗೂ ಇರಬೇಕು ಉಕ್ಕಿನಂತಹ ಮೈ, ಕಲ್ಲುಸಕ್ಕರೆಯಂತಹ ಎದೆ, ಬಿಚ್ಚು ಮನ, ಬಗ್ಗಡವಾಗದ ಬಗೆ ಇದ್ದಾಗಬೇಕು. ಬಡತನವನ್ನು ಎದುರಿಸುವ ಕ್ರಿಯಾಶಕ್ತಿಬೇಕು; ಕಾರ್ಯದಕ್ಷತೆಬೇಕು. ಅಜ್ಞಾನವನ್ನು ಓಡಿಸುವ ಜ್ಞಾನಶಕ್ತಿ ಬೇಕು, ಆರು ಹಗೆಗಳನ್ನು ಪ್ರತಿಭಟಿಸುವ ಸದಿಚ್ಛಾಶಕ್ತಿಬೇಕು. ಸಾವನ್ನು ಗೆಲುವ ಶ್ರದ್ಧೆಬೇಕು ಆತ್ಮ ಪ್ರಗತಿಯನ್ನು ಸಾಧಿಸುವ-ಗುರಿಗೆ ಸಲುವ ಶಿವಪಥದ ನಿಷ್ಠೆ ಬೇಕು. ನ್ಯಾಯ-ನೀತಿ ರೀತಿಗಳನ್ನು ಶೋಷಿ ಸುವ ನರ-ಸಿಂಹರನ್ನು ಎದುರಿಸುವ ಶರಭ ಶಕ್ತಿವಂತರುಬೇಕು ಸತ್ಯ ಧರ್ಮವಂತರು ಬೇಕು; ಧೈರ್ಯವಂತರುಬೇಕು, ಉತ್ಸಾಹವಂತರ ಬೇಕು. ಉತ್ಥಾನಾತ್ಮರುಬೇಕು.

ವೀರಪಥದಲ್ಲಿ ಸಾಗದೆ ಯಾವ ಕಾರ್ಯ ಸಾಗದು, ಕಂಟಕ ರಹಿತ ಜೀವನ ಕೈಗೂಡದು, ಶಕ್ತಿಯುಕ್ತಿಗಳು ಜೀವನ ಮೌಲ್ಯಗಳು. ಇವೆರಡೂ ಇಲ್ಲದ ಬಾಳು ಬಾಳಲ್ಲ. ಸಿಡಿಲುಗಳಂತೆ ಬಂದೆರಗುವ ಜೀವನ ಸಮಸ್ಯೆ ಗಳನ್ನು ಕೆಚ್ಚೆದೆಯಿಂದ ನುಚ್ಚು ನೂರಾಗಿಸಿ ಚದುರಿಸಿ ತಣ್ಣಗಾಗಿಸುವ ತರಂಗ ಬಲಬೇಕು.

'ಧೀರತೆಯೆ ಜೀವನ, ಅಧೀರತೆಯೆ ಮರಣ' ಇದು ವೀರೇಶನ ಜೀವನ ಸಂದೇಶ. ಬಾಳಿನ ಎಲ್ಲ ಬಗೆಯ ಅಕಿಂಚನತೆಯನ್ನು ಇಲ್ಲದಂತೆ ಮಾಡಿ

ವುದು ತ್ರಿವಿಧ ವೀರತನ. ಅಮೃತತ್ವವನ್ನು ಅಳವಡಿಸುವುದು. ಬಾಳನ್ನು ಕೊರತೆಯಿಲ್ಲದಂತೆ ರೂಪಿಸುವ ಮೂಲಭೂತ ಸಂಪತ್ತು ವೀರತನ. ನಾವೆಲ್ಲ ವೀರಪುತ್ರರು. ನಮ್ಮ ಭವಿಷ್ಯವನ್ನು ಭಾಗ್ಯಶಾಲಿಯಾಗಿ ರೂಪಿಸಿಕೊಳ್ಳಲು ವೀರತನದಿಂದ ಎದ್ದು ನಿಲ್ಲಬೇಕು. ಧೀರತನದಿಂದ ಮುನ್ನಡೆಯಬೇಕು. "....ಧೀರಾಃ....ಅಮೃತಾ ಭವಂತಿ" ಎಂದು ಕೇನೋಪನಿಷತ್ತು, "ಶ್ರೇಯೋ ಹಿ ಧೀರೋऽಭಿಪ್ರೇಯಸೋ ವೃಣೀತೆ...." ಎಂದು, "....ಧೀರೋ ಹರ್ಷ ಶೋಕೌ ಜಹಾತಿ" ಎಂದು, "ಅಥ ಧೀರಾ ಅಮೃತತ್ವಂ ವಿದಿತ್ವಾ ಧ್ರುವಮ ಧ್ರುವೇಷ್ವಿಹ ನ ಪ್ರಾರ್ಥಯಂತೇ" ಎಂದು ಕಠೋಪನಿಷತ್ತು, "ನಾಯ ಮಾತ್ಮಾ ಬಲಹೀನೇನ ಲಭ್ಯಃ...." ಎಂದು, "ಧೀರಾ ಯುಕ್ತಾತ್ಮಾನಃ ಸರ್ವ ಮೇವಾವಿಶಂತಿ" ಎಂದು ಮುಂಡಕೋಪನಿಷತ್ತು ನಿರೂಪಿಸಿವೆ ಈ ಯುಗದ ವೀರಪುರುಷರೆಂದು ವಿಖ್ಯಾತರಾದ ವಿವೇಕಾನಂದರು 'ನನ್ನ ನಚ್ಚಿನ ಧೀರ ಸುತರೆ!' ಎಂದು ಸಂಬೋಧಿಸಿ ಭಾರತೀಯರನ್ನು ವೀರರಾಗಿ ಬಾಳಲು ಬಗೆ ಬಗೆಯಲ್ಲಿ ಬೋಧಿಸಿದ್ದಾರೆ.

ವೀರೇಶನದು ಮಾನವೀಯತೆಯ ಹೋರಾಟ, ಅನೈತಿಕ ಅಪರಾಧಿ ಗಳೊಡನೆ ಘರ್ಷಣೆ, ನ್ಯಾಯಗಳಿಗಾಗಿ ಆಗ್ರಹ, ಸಮಾನತೆ–ಸಮರಸ ಭಾವಗಳಿಗಾಗಿ ಭದ್ರ ಶೌರ್ಯ. ಅಂದಿನ ವೀರೇಶನ ಆ ಸತ್ ಸಾಧನೆಯಿಂದ ದಕ್ಷಾದಿಗಳಲ್ಲಿರುವ ಅದಕ್ಷತೆ, ಅಹಂಭಾವ, ಮದ ಮತ್ಸರ, ದುರಭಿಮಾನ, ಮೇಲು ಕೀಳು ಕಲ್ಪನೆ, ಅನ್ಯಾಯ ಕಾರ್ಯಪ್ರವೃತ್ತಿ, ಅಸಹನೆ, ದ್ರಾವಿ ಡರು ದಸ್ಯುಗಳೆಂದು ಕಾಣುವ ಹೀನದೃಷ್ಟಿ ಕಾಣದಂತಾದವು ನ್ಯಾಯ ನೀತಿ ರೀತಿಗಳನ್ನು ಪುರಸ್ಕರಿಸುವ ನೂತನ ಚೈತನ್ಯ ಹಗೆಗಳಾದವರಲ್ಲಿ ಮೂಡಿ ಬಂದಿತು. ಯಜ್ಞದ ನೆಪದಲ್ಲಿ ವಿದ್ವೇಷಪೂರಿತ ವಿಧ್ವಂಸಕ ಕೃತ್ಯ ಗಳಿಗೆ ತೊಡಗಿದವರ ವಿರುದ್ಧ ವೀರೇಶನ ವೀರತನದ ಹೋರಾಟ, ಭದ್ರ ಮುಷ್ಟಿಯ ಏಟು. ಅವುಗಳಿಂದ ಅಂದಿನ ಜನರಲ್ಲಿ ಒಳ್ಳೆಯ ಪರಿಣಾಮ ವುಂಟಾಯಿತು. ನ್ಯಾಯ ಪಥದಲ್ಲಿ ಪಾದಾರ್ಪಣ ಮಾಡುವಂತಾಯಿತು. ವೀರೇಶನದು ಅಧಿಕಾರಾಪೇಕ್ಷೆಯಿಲ್ಲದ ಸತ್ಯಸಾಧನೆಯ ಸತ್ವಸಂಪನ್ನತೆ ! ಪಾವನ ಧಾರ್ಮಿಕ ಪಟುತ್ವ ! ಜನಹಿತ ಪ್ರಜ್ಞೆ ! ಶರಣಾಗತ ಕಾರುಣ್ಯ

ಹೃದಯ ! ವೀರೇಶನದು ದಕ್ಷಶೀಲ ವ್ಯಕ್ತಿತ್ವ. ರಕ್ಷಶಾಲಿ ಶಕ್ತಿತ್ವ. ಹೆಸರಿನಿಂದ ದಕ್ಷನೆನಿಸಿಯೂ ಅದಕ್ಷತೆಯ ಯಾಗಕ್ಕೆ ಇಳಿದುದರ ವಿರುದ್ಧ-ಮಾನವ ವಧೆಯ ವಿರುದ್ಧ ಜೀವನಾವಶ್ಯಕ ಪಡಿಪದಾರ್ಥಗಳ ನಾಶದ ವಿರುದ್ಧ ವೀರೇಶನ ಪ್ರತಿಭಟನೆ! ಪ್ರತಿಕ್ರಿಯೆ !!

ಹಿರಿಯ ದೇವತೆಗಳಿಗೆಲ್ಲ ತನ್ನ ಹೆಣ್ಣುಮಕ್ಕಳನ್ನಿತ್ತು ಅವರನ್ನೆಲ್ಲ ತನ್ನ ಕೈಕೆಳಗೆ ಇರಿಸಿಕೊಳ್ಳುವ, ಅವರಿಂದ ತನ್ನ ಸಿರಿ ಸಂಪತ್ತನ್ನು ಹೆಚ್ಚಿಸಿಕೊಳ್ಳುವ, ದುಷ್ಟ ಹವ್ಯಾಸಕ್ಕೆ ಬಿದ್ದು ದುರ್ಬುದ್ಧಿಗೊಳಗಾದ ದಕ್ಷನನ್ನು ಶಿಕ್ಷಿಸಿ ರಕ್ಷಿಸಿದ ಧೀರ ವೀರಭದ್ರ. ಕಾಮನನ್ನು ಶಿವನು ಸುಟ್ಟಿರುಹಿದ, ತಾರಕನನ್ನು ಕಾರ್ತಿಕೇಯನು ಸಂಹರಿಸುವನು. ದಕ್ಷನೆಯಾಗಾಗ್ನಿಯಲ್ಲಿ ಬಲಿಯಾದ ದಾಕ್ಷಾಯಣಿಗಾಗಿ ವೀರೇಶನು ದಕ್ಷನನ್ನು ಮೊದಲು ಸಂಹರಿಸಿ ಬಳಿಕ ಪ್ರಸೂತಿಯ ಪ್ರಾರ್ಥನೆಯಂತೆ ಬದುಕಿಸುವನು. ದಳ್ಳುರಿಯಲ್ಲಿ ಬೆಂದು ಹೋದ ದಾಕ್ಷಾಯಣಿಗೆ ಮುಂದೆ ಪರ್ವತರಾಜನ ಪುತ್ರಿಯಾಗಿ ಹುಟ್ಟಿ ಬರುವಂತೆ ಹರಸುವನು. ಅವಳು ಮತ್ತೆ ಪಾರ್ವತಿಯಾಗಿ ಬಂದು ಪರಮೇಶ್ವರನ ಕೈವಿಡಿದು ಬಾಳುವಳು. ಅವಳಿಂದ ಕಾಮ ಪ್ರೇಮವಾಗಿ ಪರಿಣಮಿಸಿತು; ಪಾವನತೆಯನುಳಿಸಿತು. ಇದೆಲ್ಲ ವೀರೇಶನ ವಿಶುದ್ಧ ಪ್ರಭಾವದಿಂದಾಯಿತು. ಮತ್ತಿಂದು ಆಗಬೇಕಾಗಿದೆ. ಇಂದಿನ ಕಾಮ ಪ್ರಚೋದನೆಯ ಲೌಕಿಕ ಆಕರ್ಷಣೆಗಳು ಅಶಾಶ್ವತಗಳು ಅನಂತ ದುಃಖ ಕಾತಕಗಳು ಎಂಬ ಪ್ರಜ್ಞೆ ಜನರಲ್ಲಿ ಮೂಡಿ ಬರಬೇಕಾಗಿದೆ. ನವೀನತೆಯಲ್ಲಿ ನವನಾಗರಿಕತೆಯಲ್ಲಿ ದಕ್ಷರೆಂದು ಹೇಳಿಕೊಳ್ಳುವವರಿಗೆಲ್ಲ ತಿಳಿಗಣ್ಣು ಮೂಡಿಬರಬೇಕಾಗಿದೆ. ದಿನದಿನವೂ ದಿಮ್ಮಿತ್ತಾಗಿ ಬೆಳೆಯುತ್ತಿರುವ ಅರ್ಥ ಕಾಮ, ಅಧಿಕಾರಕಾಮ, ಅಂಗಕಾಮಗಳ ದಹನವಾಗಬೇಕಾಗಿದೆ. ಅಂದು ಅಸುರೀಪ್ರವೃತ್ತಿಗಳ ಮೇಲೆ ದೈವೀಶಕ್ತಿ ತನ್ನ ಪ್ರಭಾವದಿಂದ ವಿಜಯವನ್ನು ಸಾಧಿಸುವಂತೆ ಇಂದೂ ಸಾಧಿಸಬೇಕಾಗಿದೆ; ಸಂಸ್ಥಾಪಿಸಬೇಕಾಗಿದೆ.

ಆದಿ ವೀರಶೈವ ಧರ್ಮ ವೀರಭದ್ರನಷ್ಟೇ ಪುರಾತನ. ಮಾನವೀಯ ನ್ಯಾಯಗಳಿಗಾಗಿ ಹೋರಾಡಿದ ಧರ್ಮ, ಸಮಾನತೆಗಾಗಿ ಸೌಹಾರ್ದ್ರತೆಗಾಗಿ

ಹೆಣಗಿದ ಶಿವಧರ್ಮ. ದಲಿತೋದ್ಧಾರಕ್ಕೆ ದ್ರಾವಿಡಾರ್‍ಯರ ಸಮಯನ್ವಕ್ಕೆ ಕಂಕಣ ಬದ್ಧವಾಗಿ ಕ್ರಾಂತಿ ಮಾಡಿದ ವೀರಮತ.

ಮೀಗಿಲಾಗಿ ಕರ್ನಾಟಕ ಸಂಸ್ಕೃತಿಗೆ ಸಾಹಿತ್ಯಕ್ಕೆ ಮೀಸಲಾಗಿ ಮಣಿಹ ಕೈಕೊಂಡ ಮಹಾಧರ್ಮ ಈ ದಿಶೆಯಲ್ಲಿ ಅನಾದಿ ಆದಿ-ಆಧುನಿಕ ವೀರಶೈವದ ಕೊಡುಗೆ ಅಪಾರ. ಆದಿ ವೀರಶೈವವನ್ನು ರೂಪಿಸುವಲ್ಲಿ ವೀರ ಭದ್ರನ ಪ್ರಭಾವ ಅಪ್ರತಿಮ; ಗೆಯ್ದ ಸಾಹಸ ಅಸೀಮ. ಕ್ಷುಲ್ಲಕ ಮತ್ತು ಕ್ಷಣಿಕ ಸ್ವಪ್ರಯೋಜನಗಳಿಗಾಗಿ ದಕ್ಷಾದಿಗಳು ಕೈಕೊಂಡ ದುರಾಕ್ರಮಣ ಗಳನ್ನು ದುಷ್ಕೃತ್ಯಗಳನ್ನು ಅಣಗಿಸಿದ ದಾರ್ಷ್ಟ್ಯ ವೀರೇಶನದು. ವಿಶುದ್ಧ ಬುದ್ಧಿಯಿಂದ ವಿಶಾಲಭಾವದಿಂದ ಬಾಳಗಲಿಸಿದ ವಿಖ್ಯಾತಿ ವೀರೇಶನದು. ಸ್ವಾರ್ಥ ಸಂಕುಚಿತಭಾವಗಳಿಂದ ಸೃಷ್ಟಿಸಿದ ವರ್ಣಾಶ್ರಮಗಳನ್ನು ಕುಲಪಂಥ ಗಳನ್ನು ವಿರೋಧಿಸಿ ಎಲ್ಲರನ್ನೂ ಮಾನವರನ್ನಾಗಿ ಕಂಡ ಮಹಾನುಭಾವ ವೀರಭದ್ರದೇವ. ಅಂತೆಯೆ ಆತನಿಗೆ ಎಲ್ಲ ಕೋಮಿನವರೂ ಶಿಷ್ಯರಾಗಿ ದ್ದಾರೆ. ಬೇರೆಯವರ ಶೋಷಣೆಗಳಿಗೆ ದುರಾಕ್ರಮಣಗಳಿಗೆ ಆಗಾಗ ಈಡಾ ಗುತ್ತಿದ್ದ ದುಸ್ಯುಗಳನ್ನು ದ್ರಾವಿಡರನ್ನು ದರಿದ್ರರನ್ನು ಬೆಂಗಾವಲಿಗರಾಗಿ ಉದ್ಧರಿಸುತ್ತಿದ್ದ ಮಹಾನುಭಾವರೆಂದರೆ ಒಬ್ಬ ರುದ್ರ; ಇನ್ನೊಬ್ಬ ವೀರ ಭದ್ರ. ಇವರಿಬ್ಬರನ್ನು ಬಿಟ್ಟರೆ ಮೂರನೆಯವರು ಯಾರೂ ಸಮಗೆ ಸಿಕ್ಕು ವುದಿಲ್ಲ ಆ ಕಾಲದಲ್ಲಿ! ಅನ್ಯಾಯ ಅಧರ್ಮ ಅನೀತಿ ಆಕ್ರಮಣಗಳು ನಡೆ ದರೆ ವೀರೇಶನಿಗೆ ಆಗುತ್ತಿರಲಿಲ್ಲ. ಕಿನಿಸು ಕೆಚ್ಚು ಛಲ ಮೂಡಿ ಬರುತ್ತಿ ದ್ದವು. ಕಳವು ಕೊಲೆ ಸುಲಿಗೆಗಳು ನಡೆದರೆ ಸಿಡಿದೇಳುತ್ತಿದ್ದನು. ಸೇಡು ತೀರಿಸಿಕೊಳ್ಳದೆ ಬಿಡುತ್ತಿರಲಿಲ್ಲ. ಒಣಗಿ ನಿಂತ ಮಾನವ ಮರಕ್ಕೆ ಹೊಸ ಚಿಗುರನ್ನು ಹೊಮ್ಮಿಸುತ್ತಿದ್ದನು. ಬತ್ತಿ ನಿಂತ ಸ್ನೇಹ ತೊರೆಗೆ ನವ ಪ್ರವಾಹವನ್ನುಂಟುಮಾಡುತ್ತಿದ್ದನು. ಬಡತನದಿಂದ ಬಡಕಲಾದ ದೇಹಕ್ಕೆ ಪುಷ್ಟಿ ತುಷ್ಟಿಗಳನ್ನು ತರುತ್ತಿದ್ದನು. ಸತ್ತು ಬಿದ್ದವರಿಗೆ ಪುನಃ ಪ್ರಾಣ ಪ್ರತಿಷ್ಠೆ ಮಾಡುತ್ತಿದ್ದನು. ವೀರೇಶನಿಗೆ ಅದೆಷ್ಟು ಕೋಪವಿತ್ತೋ ಅದಕ್ಕೂ ಹೆಚ್ಚು ಕಾರುಣ್ಯವಿತ್ತು. ಆತನ ಮೂರ್ತಿ ಶಿಲ್ಪದಿಂದ ಇದು ವ್ಯಕ್ತವಾಗು ತ್ತದೆ. ಆತನ ರುಂಡಮಾಲೆ ಆತನಿಗಿರುವ ಕ್ರೋಧ ಸಂಕೇತವಾದರೆ ಆತನ

ಅಕ್ಕಪಕ್ಕದಲ್ಲಿ ಆತನ ಅಭಯ ಹೊತ್ತು ನಿಂತ ದಕ್ಷಬ್ರಹ್ಮ ಪ್ರಸೂ ಯರು ಆತನ ಆ ಕಾರುಣ್ಯಪ್ರತೀಕರಾಗಿದ್ದಾರೆ.

ವೀರೇಶ, ವೀರಶೈವರು, ಕನ್ನಡಿಗರು ಬೇರೆ ಬೇರೆಯಲ್ಲ; ಎಲ್ಲರೂ ಒಗ್ಗೂಡಿದ ಒಂದು ಮಹಾಶಕ್ತಿ. ವೀರೇಶನೆಂದರೂ ವೀರಶೈವರೆಂದರೂ ಕನ್ನಡಿಗರೆಂದರೂ ಒಂದೇ! ಭಾರತೀಯ ಸಂಸ್ಕೃತಿಗೂ ಭಾರತೀಯರಿಗೂ ಆತ ಹೊರಗಾಗಿಲ್ಲ. ಆತನ ಆ ವಿಶಾಲವಾದ ಇತಿಹಾಸವನ್ನು ಅರಿಯದೆ ಸೀಮಿತಗೊಳಿಸುತ್ತಿದ್ದೇವೆ. ಅಂತಹ ಆ ವಿಶಾಲ ವಿಶಿಷ್ಟ ಶಕ್ತಿಯನ್ನು ವಿರೋಧಿಸುವ ಶಕ್ತಿ ಮತ್ತೊಂದಿರಲಿಲ್ಲ. ವರ್ಣಿಸುವ ಉಕ್ತಿ ಸಮಗಿಲ್ಲ. ಎಲ್ಲೆಲ್ಲಿಯೂ ಶಾಶ್ವತವಾದ ಶಿಲಾ ಶಿಲ್ಪಮೂರ್ತಿಯಾಗಿ ನಿಂತಿರುವ- ನಿಂತು ಆರಾಧಿಸಿಕೊಳ್ಳುತ್ತಿರುವ ಆ ವೀರೇಶನ ಹೆಸರು ಈ ಜಗತ್ತು ಜೀವಂತವಾಗಿ ಇರುವವರೆವಿಗೂ ಅಳಿಯದು.

ವೀರೇಶನು ತನ್ನ ಜೀವಿತ ಕಾಲದಲ್ಲಿ ಹೋರಾಡಿದ್ದು ಯಾವ ಜಾತಿಗಾಗಿಯಲ್ಲ; ಕುಲಪಂಥಕ್ಕಾಗಿಯಲ್ಲ; ಕನ್ನಡ ಕುಲಕ್ಕಾಗಿ, ಭಾರತೀಯ ಜನತೆಗಾಗಿ! ವೀರ ಪತಾಕೆಯ ಕೆಳಗೆ ಕರ್ತವ್ಯನಿಷ್ಠೆಯಿಂದ ಮಾನವ್ಯ ಶ್ರದ್ಧೆಯಿಂದ ಎಲ್ಲರೂ ಒಗ್ಗೂಡಿ ಬಾಳು ಬಾಳುವುದಕ್ಕಾಗಿ! ಪರಸ್ಪರ ಗೌರವ ವಿಶ್ವಾಸಗಳಿಂದ ಲೇಸಿಗರಾಗಿ ಬದುಕುವುದಕ್ಕಾಗಿ!

---

೨ ವೀರಶೈವಾವತಾರಿ ವೀರೇಶ್ವರ !

ಆರೇಳು ಸಾವಿರವರುಷಗಳ ಹಿಂದೆ ಭಾರತದಲ್ಲಿ ಆರ್ಯದ್ರವಿಡರ ಹೋರಾಟ ತಿಕ್ಕಾಟಗಳು ನಡೆದಿದ್ದವು. ದ್ರವಿಡರೇ ಕೀಳರೆಂಬ ಕಲ್ಪನೆ ಆರ್ಯರಲ್ಲಿ ಆವಿರ್ಭವಿಸಿತ್ತು. ಆಗಾಗ ಅಲ್ಲಲ್ಲಿ ಸೆಣಸಾಟ ಸಾಗುತ್ತಿತ್ತು. ದ್ರವಿಡರ ಮೇಲೆ ದ್ರವಿಡರ ಆಸ್ತಿ ಪಾಸ್ತಿಗಳ ಮೇಲೆ ದಾಳಿಯಾಗುತ್ತಿತ್ತು. ದ್ರವಿಡರ ಮನೆಹೊಲಗಳನ್ನು ಆಕ್ರಮಿಸಿಕೊಳ್ಳುವುದು, ದನಕರುಗಳನ್ನು ಹೊನ್ನು ಹೆಣ್ಣುಗಳನ್ನು ಕದ್ದೊಯ್ಯುವುದು, ಹುಲ್ಲು ಮನೆಗಳಿಗೆ ಕೊಳ್ಳಿ ಇಡುವುದು ಮೊದಲಾದ ಕ್ರೂರಕೃತ್ಯಗಳನ್ನು ಜರುಗಿಸುತ್ತಿದ್ದರು. ಅಸಹಾಯಕರಾದ ದ್ರವಿಡರ ದುಸ್ಥಿತಿಗೆ ತುದಿ ಮೊದಲಿರಲಿಲ್ಲ, ಆರ್ಯರಿಂದ ನಿರ್ವಾಸಿತರಾಗಿ ನಿರ್ಗತಿಕರಾಗಿ ನಿಂತಿದ್ದರು. ನಿಲ್ಲಲು ನೆಲವಿಲ್ಲ, ಉಣ್ಣಲು ಊಟವಿಲ್ಲ, ಉಡಲು ಉಡಿಗೆಗಳಿಲ್ಲ ಎಂಬಂತಾಗಿತ್ತು. ಹಾಗಿರುವಾಗ ಅವರನ್ನು ಉದ್ಧರಿಸಲು ಹುಟ್ಟಿ ಬಂದನು (ಅವತರಿಸಿದನು) ಮಹಾನುಭಾವನಾದ ಮಹಾ ಪರಾಕ್ರಮಿಯಾದ ವೀರಭದ್ರದೇವನು. ಸಾಮಾನ್ಯರೊಡನೆ ಸಾಮಾನ್ಯನಾಗಿದ್ದು ಸಾರ್ವಜನಿಕರ ಸಹಾಯಕ್ಕಾಗಿ ಶ್ರಮಿಸಿದನು. ಸಾಮಾಜಿಕರನ್ನು ಉದ್ಧರಿಸಿದನು, ಮಾನವೀಯತೆಯನ್ನು ಉಳಿಸಿದನು. ಆರ್ಯರಲ್ಲಿರುವ ಅನ್ಯಾಯ ಅಧರ್ಮಗಳನ್ನು ಎತ್ತಿ ತೋರಿಸಿದನು. ಜನ ಜೀವನಕ್ಕೆ ಬೇಕಾದ ಹಿಟ್ಟು ತುಪ್ಪ ಹಾಲು ಮೊಸರುಗಳನ್ನು ಸುಟ್ಟು ಹಾಳು ಮಾಡುವ, ಮತ್ತು ಪಶುವಧೆ ನರವಧೆಗಳನ್ನು ಮಾಡುವ ಯಜ್ಞಯಾಗಾದಿಗಳನ್ನು ನಿರೋಧಿಸಿದನು. ದುರ್ಜನರನ್ನು ದೌರ್ಜನ್ಯದಿಂದ ದಾರಿಗೆ ತರ-ಬೇಕೆಂಬುದನ್ನು ತೋರಿದನು. ಶರಣಾಗತರಾದ ಶತ್ರುಗಳನ್ನಾದರೂ ಸಂರಕ್ಷಿಸಬೇಕೆಂಬುವ ಕಾರುಣ್ಯರಸವನ್ನು ತೋರಿದನು. ಯಾವ ಅಧಿಕಾರಕ್ಕೂ ಆಸೆ ಮಾಡದೆ ಯಾವ ರಾಜ್ಯವನ್ನೂ ಕಟ್ಟದೆ, ಯಾರ ಕಿಂಚಿತ್ ಒಡವೆಗೂ ಆಶಿಸದೆ ಎಲ್ಲರನ್ನೂ ಸರಿಸಮಾನವಾಗಿ ಕಂಡನು. ಅಂದೆ ಸಮಾಜವಾದದ ಹೊಸ ಕ್ರಾಂತಿಗೆ ನಾಂದಿಯನ್ನು ಹಾಡಿದನು. ಆತನು ಮೈಯಿಂದ ಹೇಗೆ ವೀರನಾಗಿದ್ದನೋ ಮನಸ್ಸಿನಿಂದ ಹಾಗೆ ಭದ್ರನಾಗಿದ್ದ. ಆತನು ತನ್ನ ಬಾಳಿನುದ್ದಕ್ಕೂ ಪರರ ಹೊನ್ನು ಹೆಣ್ಣು ಮಣ್ಣುಗಳನ್ನು ಅದೆಷ್ಟೂ ಅದೆಂದೂ ಆಶಿಸಿದವನಲ್ಲ. ನಿರ್ವಾಸಿತರಿಗೆ ನೆಲೆಗಳನ್ನಿತ್ತು ನಿರ್ಗತಿಕರಿಗೆ ಗತಿಯನ್ನು

ಸ್ಥಿತಿಯನ್ನು ದಯಪಾಲಿಸಿದ. ದ್ರವಿಡ ಜನರನ್ನು ಆರ್ಯರ ದೌರ್ಜನ್ಯದಿಂ ಬಿಡಿಸಿ ಬಾಳುವಂತೆ ಬದುಕುವಂತ ಮಾಡಿದ. ಶರಣಾಗತರಾದ ಆರ್ಯಜನಾಂಗವನ್ನೂ ಅಂತಃಕರಣದಿಂದ ಆದರ್ಶವಾಗಿ ಕರುಣಿಸಿದ ದರ್ಪ ದುರಭಿಮಾನಗಳಿಂದ ಕೂಡಿದ ದಕ್ಷ ಮೊದಲಾದವರನ್ನು ದಾರಿಗೆತಂದು ಮಾನವೀಯತೆಯಿಂದ ಬಾಳುವಂತೆ ಮಾಡಿದ. ದ್ರವಿಡರ ಮುಂದಾಳುವಾದ ಶಿವನಿಗೆ ಸಹಾಯಕನಾಗಿ ಸೇನಾನಿಯಾಗಿ ಸೇವೆ ಸಲ್ಲಿಸಿದ. ಆದಿ ವೀರಶೈವ ಮತ ಸ್ಥಾಪಕನಾಗಿ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡು; ತನ್ನ ಬಾಳನ್ನು ಬೆಳಗಿಸಿದ. ತಾನು ಸ್ಥಾಪಿಸಿದ ವೀರಶೈವವನ್ನು ವಿಕಾಸಗೊಳಿಸಿದ; ವಿಜೃಂಭಿಸುವಂತೆ ಮಾಡಿದ; ಭಕ್ತಿಯಲ್ಲಿ ಶಕ್ತಿಯಲ್ಲಿ ವೀರ ಪರಂಪರೆಯನ್ನು ಉಳಿಸಿಕೊಂಡು ಬಂದ; ಬೆಳಸಿಕೊಂಡು ಬಂದ.

ಏಳು ಸಾವಿರ ವರುಷಗಳ ಹಿಂದೆ ಒಂದು ದಿನ; ಅಂದು ಮಂಗಳವಾರ: ಮಂಗಳೋದಯ ವಾರ. ಸೋಮಾರಿ ಜಗತ್ತು ಮಲಗಿ ಆದೇ ಎದ್ದಿತ್ತು. ಬಾನಿನಲ್ಲಿ ಭಾನು ಉದಯಿಸುತ್ತಿದ್ದನು. ತಮಸ್ಸು ತೊಲಗುತ್ತಿತ್ತು; ತೇಜಸ್ಸು ಏಳುತ್ತಿತ್ತು. ತಂಗಾಳಿ ತೀಡುತ್ತಿತ್ತು. ತಂಪು, ತುಂಬಿಗಳ ಹಕ್ಕಿಗಳ ನಾದದಿಂಪು ಹರಡಿತ್ತು. ಆಗ ಜೀವಂತ ಜ್ಯೋತಿ ವೀರಭದ್ರ ವಿಭೂತಿ ಜನಿಸಿತು.

ಹುಟ್ಟಿದಾಗಲೆ ಮಗುವಿನ ಮೈಯಲ್ಲಿ ಅಗಾಧ ಕಸುವು, ಕಣ್ಣಲ್ಲಿ ಅಪೂರ್ವ ಕಳೆ, ತಲೆಯಲ್ಲಿ ಅಸದೃಶ ಮಿದುಳು, ಕೈ ಕಾಲುಗಳಲ್ಲಿ ಹೋಲಿಸಲಾಗದ ಕಲಿತನ ಎದ್ದು ತೋರಿದವು. ಕಣ್ಣಲ್ಲಿ ಕಳೆ, ತಲೆಯಲ್ಲಿ ಮಿದುಳ ಮಿಗಿಲಾಗಿ ತೋರಿದ್ದರ ಕಾರಣದಿಂದಲೊ ಏನೊ ವೀರೇಶನು ಕಣ್ಣಲ್ಲಿ ಹುಟ್ಟಿದ, ತಲೆಯ ಜಟೆಯಿಂದ ಜನಿಸಿದ ಎಂದು ಹೇಳುವವಾಡಿಕೆ ಹಬ್ಬಿದೆ. ಅದಿರಲಿ, ವೀರೇಶ ವೀರನಾಗಿಯೆ ಬೆಳೆದ; ವೀರ ಕೀರ್ತಿಯನ್ನೆ ಬೆಳಗಿದ. ತನ್ನ ಆ ವೀರತನದಿಂದ ವಿಶ್ವಕಲ್ಯಾಣವನ್ನೆ ಎಸಗಿದ. ವಿಶಾಲವಾದ ಸಾಮಾಜಿಕ ಕ್ರಾಂತಿಯನ್ನೆಸಗಿದ. ಮಾನವರಲ್ಲಿ ಸರ್ವಸಮಾನತೆಯನ್ನು ತಂದ ಪ್ರಪಂಚಕ್ಕೆ ಆದರ್ಶವಾದ ಪವಾಡವನ್ನು ಮಾಡಿದ. ವೀರಭದ್ರ ವಿಶ್ವವಿಖ್ಯಾತನಾದ.

ಆಗ ಶಿವಲೋಕದವರಿಗೂ ದೇವ ಲೋಕದವರಿಗೂ ಆಗದು. ಶಿವನ ಉತ್ಕರ್ಷವನ್ನು ಸಹಿಸದಾದರು ದೇವಗಣರು. ಆತನ ಆ ಯಾಜ್ಞಾಧಿಪತ್ಯವನ್ನು ಕಿತ್ತುಕೊಳ್ಳಲು, ಆತನನ್ನು ಅವಮಾನಗೊಳಿಸಲು ಸನ್ನಾಹ ಮಾಡಿದರು. ಒಂದು ಯಜ್ಞವನ್ನು ಹೂಡಿದರು. ಯಜ್ಞಕ್ಕೆ ಅಧ್ಯಕ್ಷನಾಗುವ ದಕ್ಷತೆಯುಳ್ಳ ಹಾಗು ಹಕ್ಕುಳ್ಳ ಶಿವನನ್ನು ಆಹ್ವಾನಿಸದೆ ಹೋದರು ಯಜ್ಞಕ್ಕೆ ಮುಖ್ಯನನ್ನಾಗಿ ದಕ್ಷನನ್ನು ನಿಲ್ಲಿಸಿದರು. ದಕ್ಷನ ಮಗಳೂ ಶಿವನ ಮಡದಿಯೂ ಆದ ದಾಕ್ಷಾಯಣಿಯನ್ನು ಯಜ್ಞಾಗ್ನಿಗೆ ಆಹುತಿಗೊಡುವರು. ಇದನ್ನು ಸಹಿಸದೆ ಶಿವನು ತನ್ನ ಸೇನಾನಿಯದೂ ವೀರಭದ್ರನನ್ನು ಕಳುಹುವನು. ಎಷ್ಟೋ ಪರಿಯಲ್ಲಿ ಬುದ್ಧಿ ಹೇಳಿದರೂ ಕೇಳದೆ ಕಾಳಗಕ್ಕೆ ಕೆರಳಿ ನಿಂದ ದಕ್ಷಾದಿಗಳನ್ನು ವೀರೇಶನು ಸಂಹರಿಸಿ ಅವರವರ ಪತ್ನಿಯರ ಪ್ರಾರ್ಥನೆಯಂತೆ ಅವರನ್ನೆಲ್ಲ ಮರಳಿ ಬದುಕಿಸುವನು. ಇಲ್ಲಿದೆ ವೀರೇಶನ ವಿಚಿತ್ರ ವಿಶಿಷ್ಟ ಶಕ್ತಿ ! ದಿವ್ಯದೀಪ್ತಿ !!

ವೀರೇಶನ ಹೊಡತಕ್ಕೆ ಹತವೀರ್ಯನಾದ ವೈಕುಂಠದ ವಿಷ್ಣು ತಲೆ ತಪ್ಪಿಸಿಕೊಂಡುಓಡಿಹೋಗುವನು. ಮುಂದೆಂದಾದರೂ ತಾನೂ ವೀರೇಶನ ಕೋಪಕ್ಕೆ ಖಡ್ಗಕ್ಕೆ ತುತ್ತಾಗಬೇಕಾಗುವುದೆಂದು ಬಗೆದು ತನ್ನ ತಲೆಯನ್ನು ಉಳಿಸಿಕೊಳ್ಳಲು ಆತನ ಅನುಗ್ರಹ ಪಡೆಯಲು ನಿತ್ಯ ಸಾಸಿರ ತಾವರೆಗಳ ನೋಂಪಿಯಿಂದ ವೀರೇಶನನ್ನು ಆರಾಧಿಸುವನು ಒಂದುದಿನ ಒಂದು ತಾವರೆ ಕಡಿಮೆಯಾಗಲು ತನ್ನ ಕಣ್ಣ ಕಮಲವನ್ನೆ ಕಿತ್ತು ವೀರೇಶನ ಪಾದಾಂಗುಷ್ಠದ ಮೇಲಿರಿಸುವನು. ಅದರಿಂದ ವೀರೇಶನು 'ಕಣ್ಣಡಿಗ'ನೆಂದು ಹೆಸರಾಗುವನು. ಆತನ ಅನುಯಾಯಿಗಳು ಕನ್ನಡಿಗರೆಂದು ಹೆಸರಾಗುವರು. ಇದರಿಂದಾಗಿ ವೀರಭದ್ರನು ಕನ್ನಡದ ಮೂಲಪುರುಷನು.

ಆತನಿಗೆ ವೀರ ಶಿವನೆಂತಲೂ ಹೆಸರಿದ್ದಿತು. ಭದ್ರಪದ ದಶರ್ಾಯ ವಾಚಿಶಿವಪದ. ವೀರಭದ್ರನೆಂದರೂ ವೀರಶಿವನೆಂದರೂ ಒಂದೆ! ಆ ವೀರಶಿವನಿಂದಾದ ಮತ.ವೀರಶೈವ ಮತ ಶಿವನು ಈ ಹೊಲಬಿನಲ್ಲಿ ಆತನ ನೆರವಾಗಿದ್ದುದರಿಂದ ಇಬ್ಬರ ಹೆಸರೊಂದಾಗಿ ವೀರಶೈವವಾಗಿರಲು ಸಾಕು. ಈ ಊಹೆಗೂ ವೀರೇಶನೇ ಪ್ರಧಾನನು. ಆದ್ದರಿಂದ ಹೇಗೆ ನೋಡಿದರೂ ಆದಿ ವೀರಶೈವ ಸಂಸ್ಥಾಪಕನು ವೀರಭದ್ರದೇವನೆ ಆಗುವನು.

ವೀರೇಶನು ತನಗಾಗಿ ಎಲ್ಲಿಯೂ ಹೋರಾಡಿಲ್ಲ. ಜೀವನದುದ್ದಕ್ಕೂ ಜನತೆಗಾಗಿ ಹೋರಾಡಿದ ಜನತಾವಾದಿ. ಆತನ ಆ ಪ್ರತಿಭಾನ್ವಿತ ಪ್ರಭಾವ ಜನತೆಯ ಮೇಲಾಯಿತು. ಆದರಿಂದಾಗಿ ಎಲ್ಲ ಜಾತಿಯ ಜನ ಆತನಿಗೆ ಶಿಷ್ಯರಾಗಿದ್ದಾರೆ. ಆತನ ಶಿಷ್ಯಸಂಪತ್ತು ಅಪಾರ. ಆತನ ದೇವಸ್ಥಾನಗಳು ಅಪಾರ. ಆತನ ದೇವಾಲಯಗಳಿಲ್ಲದ ಊರಿಲ್ಲ, ಕ್ಷೇತ್ರವಿಲ್ಲ. ತಿರುಪತಿಯ ತಿಮ್ಮಪ್ಪನ ದೇವಸ್ಥಾನ, ಗದಗಿನ ವೀರನಾರಾಯಣನ ದೇವಸ್ಥಾನಗಳು ವೀರಭದ್ರನವೆ ! ಇದರಿಂದ ವೀರಭದ್ರದೇವನ ಸ್ಥಾನ ಮಾನಗಳು ಎಂತಹ ವೆಂಬುದು ಎಲ್ಲರಿಗೂ ಸುಸ್ಪಷ್ಟವಾಗುತ್ತದೆ.

ವೀರೇಶನ ಯಶೋ ನೇಸರನಿಗೆ ಈ ನಡುವೆ ಮೋಡ ಮುಸುಗಿತ್ತು. ಈಗ ಆ ಮೋಡ ಚದರಿದೆ. ಮರಳಿ ವಿರೇಶ ಭಾಸ್ಕರ ಬೆಳ್ಗಂಬೆಳಗುತ್ತಾನೆ.

ವೀರಭದ್ರನಿಗೆ ವಿಜಯವಾಗಲಿ; ವೀರಭದ್ರನ ಕೀರ್ತಿ ವಿಜೃಂಭಿಸಲಿ ! ಏಳಿರಿ, ಎದ್ದೇಳಿರಿ ವೀರಮತಾನುಯಾಯಿಗಳೇ, ವೀರಪಥದಲ್ಲಿ ಸಾಗೋಣ ! ಭದ್ರವಾದ ಬಾಳನ್ನು ಬಾಳೋಣ !! ಭಾವೈಕ್ಯದಲ್ಲಿ ಬದುಕೋಣ !!!

ಸಿರಿಗನ್ನಡಂ ಏಳ್ಗೆ ! ಶಿವ ಮತಂ ಬಾಳ್ಗೆ !!



ವೀರೇಶನ ವೀರಸಂಸ್ಕೃತಿಯ ಕುರುಹುಗಳು

೩ ವೀರೇಷನ ವೀರಚಾರಿತ್ರ

ವೀರಭದ್ರೇಶನ ಈ ವೀರಚಾರಿತ್ರ ಪ್ರಚಾರ ವೀರಶೈವ ಇತಿಹಾಸದಲ್ಲಿನ ಒಂದು ಪರಿವರ್ತನದ ಹಂತ. ಇದು ಇಂದು ವಿಲಕ್ಷಣವಾಗಿ ಕಂಡಂತಾದರೂ ವಾಸ್ತವಿಕ ವೀರಶೈವದ ಹಳಮೆಯನ್ನು ಸಾರುತಿದೆ. ವೀರೇಶನ ಚಾರಿತ್ರ; ಜೊತೆಗೆ ಕನ್ನಡದ ಹಳಮೆಗೂ ಕಾರಣವಾಗಿದೆ. ಆರ್ಯ-ದ್ರವಿಡ ಸಮನ್ವಯಕ್ಕೆ ಸೀಮಾಪುರುಷನಾಗಿದ್ದಾನೆ. ಈ ದಿಸೆಯಲ್ಲಿ ಆತನ ಆ ಸಾಹಸ ಸಾಮರ್ಥ್ಯಗಳು ಆದರ್ಶವಾದವುಗಳಾಗಿವೆ. ಆತನವೇ ಆದ ಡೊಳ್ಳು-ಸಮ್ಮೇಳಾದಿ ಸೃಜನಾತ್ಮಕ ವಾದ್ಯಗಳ ಕೊಡುಗೆ ಹಿರಿದಾಗಿದೆ; ಕಲಾಪೂರ್ಣವಾಗಿದೆ. ತ್ರಿಶೂಲಾದಿ ಲೋಹಾಸ್ತ್ರಗಳು ಆತನಿಂದ ಆರಂಭವಾಗಿವೆ. 'ವೀರಗಾಸೆ'ಯ ಧಾರಣ ಆತನ ಶೂರ ಸಂಸ್ಕೃತಿಯನ್ನು ಸಾಟುವ ಮಾಧ್ಯಮ. ಇದು ಅಂದಿಗೆ ಸೀಮಿತವಾಗದೆ ಇಂದಿಗೂ ನಡೆದುಕೊಂಡು ಬರುತಿದೆ. ಅಗ್ನಿಕುಂಡಗಳ ರಚನೆ ಅಗ್ನಿಯ ಮೇಲೆ ಹೆಜ್ಜೆಗಳನ್ನಿಟ್ಟು ದಾಂಟುವಿಕೆ ವೀರಭದ್ರೇಶ್ವರನ ಅನುಯಾಯಿಗಳಲ್ಲಿ ಇಂದಿಗೂ ಸಾಗುತ್ತಿವೆ. ಗುಗ್ಗುಳ ಹೊರುವಿಕೆ ಮದುವೆಯ ಮುನ್ನ ಜರಗುತ್ತದೆ. ಪುರವಂತರು ವೀರ ಘೋಷಣೆಗಳನ್ನು ಮಾಡುವಿಕೆ, ಮೊನಚಾದ ಅಸ್ತ್ರಗಳನ್ನು ಕೆನ್ನೆ ಕೊರಳು ಕಣ್ಣುರೆಪ್ಪೆಗಳಿಗೆ ಹಾಕಿಕೊಳ್ಳುವಿಕೆ, ತೆಂಗಿನ ಕಾಯಿಗಳನ್ನು ತಲೆಗೆ ಹೊಡೆದು ಒಡೆಯುವಿಕೆ, ಇವೆಲ್ಲ ಆ ವೀರಾವೇಶದ ಕುರುಹುಗಳಾಗಿವೆ.

ದಕ್ಷಾದಿಗಳನ್ನು ಅವರವರ ಪತ್ನಿಯರ ಪ್ರಾರ್ಥನೆಯಂತೆ ಮರಳಿ ಬದುಕಿಸಿದ ಮಹಾಕರುಣಾಶಾಲಿ ವೀರೇಶ. ಯಜ್ಞಯೋಗಗಳಿಂದಾಗುವ ಎಲ್ಲ ಬಗೆಯ ಮಾಲಿನ್ಯವನ್ನು ತೊಳೆದು ಹಾಕಿದನು ವೀರೇಶನು. ಅಕ್ರಿಯೆ ಅವಗುಣಗಳನ್ನು ಬಿಡಿಸಿದನು. ಯಜ್ಞದಲ್ಲಿ ಸುಡುವುದರಿಂದ ಜನತಗೆ ಆಗುವ ಆಹಾರ ಅಭಾವವನ್ನು ನಿಲ್ಲಿಸಿದನು. ಇದರಿಂದಾಗಿ ಸಾರ್ವಜನಿಕರ ಮೆಚ್ಚುಗೆಯನ್ನು ಪಡೆದನು. ಜನತೆಯ ಜೀವನ ಸಮಸ್ಯೆಗಳನ್ನು ಬಿಡಿಸಿದನು. ದೇವಗಣರ ದರ್ಪವನ್ನು ಅಡಗಿಸಿದನು. ಜನರ ಬದುಕಿನ ಎಲ್ಲ ಬಗೆಯ ಅಂಗಗಳನ್ನು ಸಾಂಗಗೊಳಿಸುವನು.

ಶಿವನಲ್ಲಿ ವೀರ ಪಟ್ಟವನ್ನು ಅಂದರೆ ಸೇನಾಧಿಪತ್ಯವನ್ನು ವಹಿಸು ವನು. ವೀರ ಮುದ್ರಿಗಳನ್ನು ಧರಿಸಿದವನು ನಾಲ್ಕು ಹಸ್ತಗಳಲ್ಲಿ ನಾಲ್ಕು ಬಗೆಯ ವೀರಾಯುಧಗಳನ್ನು ಹಿಡಿದಿರುವವನು. ಆತನ ನೆಗೆತಕ್ಕೆ ನೆಲ ಬಿರಿ ಯಿತು. ಆದಿಶೇಷನ ಹೆಡೆ ಬಗ್ಗಿತು; ಆವೆಯ ಬೆನ್ನು ಚಿಪ್ಪು ಪುಡಿಯಾ ಯಿತು. ಆತನು ಅಬ್ಬರಿಸಿ ಉರಿಯಲು ಗಿರಿಗಳು ನಡುಗಿದವು, ತಿರೆ ತಿರುಗ ತೊಡಗಿತು. ಆಕಾಶ ಅದುರಿತು; ತಾರೆಗಳು ಉದುರಿದವು. ವೀರಕುಲಾಧೀಶ ನೆಂದು, ವೀರ ಶಿಖಾಮಣಿಯೆಂದು ವೈರಿ ಕೋಲಾಹಲನೆಂದು ಹಲಗೆಯ ಕಡುಗಲಿಯೆಂದು ಕಲಿವೀರನೆಂದು ಹೆಸರಾಂತನು.

ವೀರಗಚ್ಚೆ ಹಾಕಿ, ವೀರ ಕಂಕಣವನ್ನು ಕೈಯಲ್ಲಿ ಕಟ್ಟುವನು. ವೀರ ಗಚ್ಚೆ ವೀರೇಶನಿಂದ ಬಂದ ಉಡಿಗೆಯ ಬಗೆ! ಇದನ್ನು 'ವೀರಗಾಸೆ' ಎಂದೂ ಹೇಳಲಾಗುತ್ತದೆ. ಇದನ್ನು ಇಂದಿಗೂ ವೀರರು ಉಡುತ್ತಾರೆ. ಕಾರ್ಯ ಸೂಚಕವಾಗಿ ವೀರಕಂಕಣ, ನಾಗಪಾಶಗಳನ್ನು ಬಿಲ್ಲು ಬಾಣ ತ್ರಿಶೂಲ ಗದೆಗಳನ್ನು ಧರಿಸಿದನು. ವೀರಾಸನ ವೀರೇಶನು ಕುಳಿತುಕೊಳ್ಳುವ ರೀತಿ ಯನ್ನು ಉಳಿಸಿಕೊಂಡು ಬಂದ ಒಂದು ಆಸನ. ಕಲಿತನದ ಕುರುಹಿಗಾಗಿ ವೀರ ಗಲ್ಲುಗಳನ್ನು ರಚಿಸಿ ನೆಡುವ ಸಂಪ್ರದಾಯವಿದೆ. ವೀರಗಾಥಗಳನ್ನು ಉಗ್ಗ ಡಿಸುವ ಸಂಪ್ರದಾಯವೂ ಆತನದೆ ಆಗಿದೆ. ಕಾಳಗಕ್ಕೆ ಹೊರಡುವ ಮುನ್ನ ವೀರರಿಗೆ ವೀರತಂಬುಲ ಕೊಡುವ ಸಂಪ್ರದಾಯ ವೀರೇಶನ ವೀರತನದ ನೆನ ಹಿಗಾಗಿ ನಡೆದು ಬರುತಿದೆ.

ವೀರೇಶನನ್ನು ಶಿವದೂಷಕ ಗಜ ಕಂಠೀರವನೆಂದು ಮದ ಮರ್ದನ ನೆಂದು ತಿಮಿರ ದಿವಾಕರನೆಂದು ವನಸಿಧಿ ಮಥನ ಮಹಾಮಂದರನೆಂದು ವೀರಗಣರಾದ ವೀರಗಾಸೆಯವರು ಉಗ್ಗಡಿಸುವರು.

ವಿಶ್ವರೂಪಿ ಮತ್ತು ವಿಶ್ವವ್ಯಾಪಿಯಾದ ವಿನಾಯಕನಿಗಿಂತ ವಿಶಿಷ್ಟನಾದ ವನು ವೀರಭದ್ರನು. ಅನಂತ ಬಲ ಸಮನ್ವಿತನು. ವಿಶ್ವಾಧಿಕ ವಿಕ್ರಮ ಶಾಲಿಯು. ಈತನ ಒಲ್ಬದ ಮುಂದೆ ಇನ್ನಾರ ಬಲವೂ ಇಲ್ಲ; ನಿಲ್ಲುವುದಿಲ್ಲ. ಅದರಿಂದ ಈತ ವೀರಕುಲಾಧೀಶ್ವರನೆಂದು ವಿಶ್ವವಿಖ್ಯಾತನಾಗಿದ್ದಾನೆ.

ಸಪ್ತ ಮಾತೃಕೆಯರ ಕೂಡ ವೀರಭದ್ರಸ್ವಾಮಿಯನ್ನು ಗಣಪತಿಯನ್ನೂ ಇರಿಸಿ ಆರಾಧಿಸುತ್ತಾರೆ. ಇದರಿಂದ ವೀರೇಶನ ಶಕ್ತಿ ಸಾಮರ್ಥ್ಯಗಳು ಆದರಣೀಯವಾದವುಗಳೆಂಬುದು ಅಭಿವ್ಯಕ್ತವಾಗುತ್ತದೆ. ಪ್ರಭುತ್ವಕ್ಕೆ ಲೋಭಿಸಿದವನಲ್ಲ. ನರರ ಸುರರ ಹಕ್ಕು ಬಾಧ್ಯತೆಗಳಿಗೆ ಲೋಪಬಂದರೆ ಸಹಿಸುವವನಲ್ಲ. ಮಾನವತಾವಾದಿಯಾಗಿರುವಲ್ಲಿ ಆತ ನಿಸ್ಸೀಮ. ನರವಧೆಯಿಂದ ನರ ರಕ್ತ ಮಾಂಸಗಳ ಸವಿಗಂಡು ನರ ಹತ್ಯದಲ್ಲಿ ನಿರತನಾದ ನಿಜಕ್ಕೂ ನರರಿಗೆ ಸಿಂಹಸ್ವಪ್ನದಂತಿದ್ದ ನರಸಿಂಹನನ್ನು 'ಶರಭ ಸಾಳ್ವಾವತಾರ'ದಿಂದ ಶಿಕ್ಷಿಸಿ ನರರನ್ನು ರಕ್ಷಿಸಿದ ಮಾನವಪ್ರೇಮಿ

ವೀರಶೈವ ಸನಾತನ ಶ್ರೀ ಮಂತ ಸಂಸ್ಕೃತಿಯ ಪ್ರತೀಕ ವೀರಭದ್ರ. ಕನ್ನಡ ಕಲಾಭವನ ಬುನಾದಿಯೂ ಆಗಿದ್ದಾನೆ. ತನ್ನ ತಂದೆ ರುದ್ರದೇವನು ಮೊದಲು ಮಾಡಿದ ದ್ರವಿಡಾರ್ಯರ ಸಮನ್ವಯವನ್ನು ಮುಂದುವರಿಸಿದಾತನು. ಯಾಜ್ಞಿಕ ಕ್ರಾಂತಿಗೆ ನಾಂದಿ ಹಾಡಿದವನು. ಹೀಗಿದ್ದರೂ ಆತನ ಸ್ಥಾನ ಮಾನಗಳು ಅಂದಿರುವಂತೆ ಇಂದಿಲ್ಲವಾದುದೇಕೆ ? ಆತನ ಸ್ಥಾನ ಮಾನಗಳ ವ್ಯಾಪ್ತಿ ಮತ್ತು ದೀಪ್ತಿ ಸಣ್ಣವಲ್ಲ; ಸೀಮಿತವಲ್ಲವೆಂಬುದನ್ನು ಓದುಗರು ಗಂಭೀರವಾಗಿ ಗಮನಿಸಬೇಕೆಂದು ಹೇಳುವುದೇ ನಮ್ಮ ಗುರಿಯಾಗಿದೆ. ಆತನಿಗಿರುವ ಆ ಚಾರಿತ್ರಕ ಸತ್ಯಗಳನ್ನು ಎತ್ತಿ ಹಿಡಿಯುವುದೆ ನಮ್ಮ ಕಾರ್ಯವಾಗಿದೆ. ಅವು ಸಜೀವವಾಗಿವೆಯಾದರೂ ಸ್ವೋಜ್ವಲವಾಗಿ ಅಭಿವ್ಯಕ್ತಿಗೊಂಡಿಲ್ಲ; ಅಭಿವ್ಯಕ್ತಿಗೊಳ್ಳುವಂತೆಸಗುತ್ತಿಲ್ಲ, ಸಂಶೋಧಿಸಿ ಸಾರುತ್ತಿಲ್ಲ. ಇದು ನಮ್ಮ ನಿಷ್ಕ್ರಿಯತೆಯ ದ್ಯೋತಕವಾಗಿದೆಯಲ್ಲದೆ ಆತನ ಆ ಸಂಸ್ಕೃತಿಗೆ ಕೊರತೆಯೇನಿಲ್ಲ. ಅದನ್ನು ಅಂದಿಗೆ ಆಚರಣೆಗೆ ತಾರದೆ ಸಾಹಿತ್ಯ ಮಾಧ್ಯಮದಲ್ಲಿ ಪ್ರಸರಣಗೊಳಿಸದೆ ಕಡೆಗಣಿಸಿ ಬಾಳುತ್ತಿರುವುದರಿಂದ ಅರ್ವಾಚೀನತೆಯ ಅನುಚಿತ ಕಳಂಕಕ್ಕೆ ಗುರಿಯಾಗಬೇಕಾಗಿವೆ; ಆಗಿದೆ. ಆದರೆ ಸತ್ಯತೆಗೆ ಸನಾತನತೆಗೆ ಸಾವುಂಟೆ ? ಈ ಬಗೆಗಿನ ಅಲಕ್ಷ್ಯ, ಔದಾಸೀನ್ಯಗಳನ್ನು ಬಿಟ್ಟು ಲಕ್ಷ್ಯವನ್ನಿತ್ತು ಚಟುವಟಿಕೆ ಉತ್ಸುಕತೆಯಿಂದ ಸಂಶೋಧನ ಪ್ರಸರಣಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಇದೊಂದು ದಿಟ್ಟ ಹೆಜ್ಜೆ. ಇದಕ್ಕೆ ಬೇಕು ನಾಡಿಗರಾದ ನಿಮ್ಮೆಲ್ಲರ ನೆರವು

ವೀರೇಶನ ಅನುಯಾಯಿಗಳೆಲ್ಲರ ಸಹಕಾರ ಇಲ್ಲವಾದರೆ ಸನಾತನಸಚ್ಚರಿತ್ರದ ಬಗೆಗೆ ಸ್ವಾಭಿಮಾನ ಔನ್ನತ್ಯ ವ್ಯಕ್ತವಾದಂತಾಗುತ್ತದೆ. ಮತ್ತು ನಮ್ಮ ಸನಾತನ ಚಾರಿತ್ರೇತಿಹಾಸ ಸಾಹಿತ್ಯ ರೂಪಿತವಾಗದು; ಪ್ರಚಲಿತವಾಗದು ಪ್ರಚಾರಕ್ಕೆ ಬಾರದು. ಈ ದಿಸೆಯಲ್ಲಿ ಶಿವಾಗಮಸಾಹಿತ್ಯ ಪುರಾಣ ಸಾಹಿತ್ಯ ಗಳನ್ನು ಚನ್ನಾಗಿ ಸಂಶೋಧಿಸಬೇಕು. ಅಲ್ಲಿರುವ ವೀರೇಶನ ವೀರಾದರ್ಶ ಚರಿತ್ರೆಯನ್ನು ಹೆಕ್ಕಿ ತೆಗೆದು ಹೊಸಬೆಳಕಿಗೆ ಬರುವಂತೆ ಮಾಡಬೇಕು.

ಮಾರ್ಮಲೆತ ಮತ್ತು ಪ್ರತಿಗಾಮಿಯಾದ ಶತ್ರು ಶಕ್ತಿಯನ್ನು ವಿರೋಧಿ ಸುವ ವಾಮಕರ್ಮವನ್ನು ಪ್ರತಿಭಾನ್ವಿತವಾಗಿ ಪುರೋಗಾಮಿಯಾಗಿ ಪ್ರಕಾಶಿ ಸುವ ಸಾಮರ್ಥ್ಯ ಸಣ್ಣದೇನಲ್ಲ. ಬಂಡವಾಳವಾದಿಗಳು ದಕ್ಷ ಇಂದ್ರ ವಿಷ್ಣು ಮೊದಲಾದ ದೇವಗಣರು; ಸಮಾಜವಾದಿಗಳು ರುದ್ರ– ವೀರಭದ್ರ- ಚಂದ್ರಧರರು. ದಕ್ಷನಿಗೆ ತನಗೆ ಕೈತುಂಬ ಸಿರಿಯನ್ನು ಮೈತುಂಬ ಮಾನ ವನ್ನು ಶಿವನು ಕೊಡಲಿಲ್ಲೆಂದು ಬಗೆದು ಮತ್ಸರ ದ್ವೇಷಗಳಿಗೆ ಒಳಗಾ ಗುವನು. ಉಳಿದ ಅಳಿಯಂದಿರನ್ನು ಪೋಷಿಸಿ ಸಿರಿಯನ್ನು ತಂದು ತನ್ನ ಮನೆದುಂಬಿಕೊಂಡ ರುಚಿ ಆತನ ತಲೆಗೆ ಹಿಡಿದಿತ್ತು; ಮನಸ್ಸಿಗೆ ಮತಿಗೆ ಮುತ್ತಿಗೆ ಹಾಕಿತ್ತು ಅವುಗಳಿಂದ ಪ್ರಚೋದಿತನಾಗಿ ದಾರಿ ತಪ್ಪಿ ದ್ವೇಷ ಕಾರಿದನು; ದೂಷಣೆಗೆ ಮೊದಲು ಮಾಡಿದನು. ಯಜ್ಞಾಗ್ನಿಗೆ ಮಗಳನ್ನು ಆಹುತಿಗೊಂಡರೆ, ದ್ವೇಷದಳ್ಳುರಿಗೆ ತನ್ನನ್ನು ಆಹುತಿಗೀಡುಮಾಡುವನು ಮತ್ತು ವೀರೇಶನ ವೀರ ಖಡ್ಗಕ್ಕೆ ಆಹುತಿಯಾಗಿ ಆ ಬಳಿಕ ಆತನ ಕೃಪೆ ಯಿಂದಾಗಿ ಅರ್ಧ ಪಶುವಾಗಿ ಬಾಳುವನು. ಜೊತೆಗೆ ವೀರಭದ್ರದೇವನ ಸಮಾಜವಾದಕ್ಕೆ ಕ್ರಮದಿಂದ ಪರಿವರ್ತಿತನಾಗುವನು. ವಾಸ್ತವಿಕವಾದ ಮಾನವೀಯ ಪ್ರಕ್ರಿಯಾಶೀಲನಾಗುವನು. ಶೈವೀ ಜೀವಿಯಾಗುವನು, ಆತನೊಬ್ಬನು ಮಾತ್ರವಲ್ಲ, ಆತನ ಅನುಯಾಯಿಗಳಾದ ದೇವಗಣರೆಲ್ಲರೂ ಶೈವೀ ಸಮಾಜವಾದಕ್ಕೆ ಅಂಟಿಕೊಳ್ಳುವರು. ವಿರೋಧಾತ್ಮಕ ವೈಮನ ಸ್ಸನ್ನು ಬಿಟ್ಟು ವಿಧೇಯರಾಗಿ ಜೀವಿಸುವರು.

ಆ ವೀರ ಚೇತನ ವೀರೇಶ !

'ವೀರಶೈವ'ದ ಬಗೆಗೆ ವಿವಾದ ತಲೆಯೆತ್ತಿ ನಿಂತಿದೆ. ವೀರಶೈವ ಇಂದಿನದೆ? ಇತ್ತೀಚಿನದೆಂದು ಹಲವರರ ಹಲಬುತ್ತಾರೆ. ಇದಕ್ಕೆ ತುದಿ ಮೊದಲಿಲ್ಲ. ಬಸವಣ್ಣವರ ಕಾಲಕ್ಕಿರಲಿಲ್ಲ; ಬಸವಣ್ಣನವರಿಂದ ಈಚಿನದು ಇತ್ಯಾದಿ. ಇದು ಈಚಿನದಾಗಲು ಯಾವ ಒಂಡೂ ಕಾರಣವಿಲ್ಲ; ಯಾರೂ ತೋರಿಲ್ಲ. ಸುಮ್ಮನೇ ಇತ್ತೀಚಿನದೆಂದು ಹೇಳಿಬಿಟ್ಟರೆ ಆಗುವುದೆ? ಇತ್ತೀಚಿಗೆ 'ವೀರಶೈವ'ವನ್ನು ಬಳಕೆಗೆ ತಂದವರಾರು ? ತರಲು ಸಮರ್ಥರಾರು ? ಇವೆಲ್ಲ ಕೇಳಿಕೆಗಳಿಗೆ ಉತ್ತರಿಸಿದವರಾರು?

ಈ ದಿಸೆಯಲ್ಲಿ ಚಿಂತನ ಮಾಡುವಾಗ ನಮ್ಮ ಮುಂದೆ ಬಂದು ನಿಲ್ಲುತ್ತಾನೆ ಶ್ರೀ ವೀರಭದ್ರದೇವ! ಆತನೊಬ್ಬ ವೀರ ಚೇತನ; ಆತನದು ವೀರ ಪ್ರಭಾವ; ಅಂತೆಯೇ ಶೈವ ಪ್ರಭಾವ. ಆದಿ ವೀರಶೈವವನ್ನು ಪ್ರತಿಷ್ಠಿಸಿದ ಪ್ರತಿಭೆ.

ವೀರೇಶನು ಆದಿ ಕಾಲದ ಆದಿಜನಪ್ರಿಯವ್ಯಕ್ತಿ' ವ್ಯಕ್ತಿಮಾತ್ರನಲ್ಲ ಒಂದು ಮಹಾ ಶಕ್ತಿ. ಆತನು ಆಗಿ ಹೋದ ಬಳಿಕ ಬಹುದಿನಗಳ ಮೇಲೆ ಆತನ ಬಗೆಗೆ ಅನೇಕ ಆಗಮಗಳು, ಪುರಾಣಗಳು, ಕಾವ್ಯಗಳು, ಕಥೆಗಳು ಉಗ್ಗಡಿಸಿವೆ. ಹಾಗು ಹೀಗು ಚರಿತ್ರೆಯನ್ನು ಚಿತ್ರಿಸಿವೆ; ವೀರಗಾಸೆಯನ್ನು ಧರಿಸಿ ಆತನ ಆ ವೀರಶ್ರೀಯನ್ನು ಉಗ್ಗಡಿಸುವ ಸಂಪ್ರದಾಯ ಸನಾತನ ಕಾಲದಿಂದ ಸಾಗಿಬಂದಿದೆ. ಆತನ ಶಿಷ್ಯರಲ್ಲಿ ಕುರುಬರೂ ಇದ್ದಾರೆ. ಆತನೇ ಸೃಜಿಸಿದ ಡೊಳ್ಳುಗಳನ್ನು ಬಾಜಿಸುತ್ತಾರೆ. ಕುರಿಗಳನ್ನು ಕೊಲದವರಿಗೆ ಕುರಿದಲೆಯನ್ನಿತ್ತು ಕುರಿಗಳ ಔನ್ನತ್ಯಕ್ಕೆ ಕಾರಣವಾದ ಆತನ ಆ ಅಸಾಮಾನ್ಯ ಜೀವ ದಯಾಲುತ್ವವನ್ನು ಡೊಳ್ಳುಗಳ ಹೃದಯಸ್ಪರ್ಶಿಯಾದ ಧ್ವನಿಯಲ್ಲಿ ನಿನದಿಸುತ್ತಾರೆ. ವೀರಗಾಸೆಯಂತೆ ವೀರಗಚ್ಚೆ, ವೀರಕಂಕಣ, ವೀರಪಟ್ಟ, ವೀರಧ್ವಜ, ವೀರಕೇತು, ವೀರಮುಂಡಿ; ವೀರಮುದ್ರೆ, ವೀರಸೇಸೆಗಳು ರೂಢಿಯಲ್ಲಿ ಬಂದು ವೀರೇಶನ ವೀರಸಂಸ್ಕೃತಿಯನ್ನು ಉಗ್ಗಡಿಸುತ್ತವೆ. ವೀರರಸ ಅಲ್ಲಿಂದ ಇಲ್ಲಿಯವರೆಗೆ ಪ್ರವಹಿಸಿದೆ. ಇದೊಂದು ಕಾವ್ಯರಸವಾಗಿಯೂ ಅಂಗೀಕೃತವಾಗಿದೆ. 'ವೀರ' ಇದು ಕಾವ್ಯದ ನವರಸಗಳಲ್ಲಿ

ಒಂದಾಗಿದೆ. ರೌದ್ರರಸವೂ ಒಂದಾಗಿದೆಯೆಂಬುದನ್ನು ಇಲ್ಲಿ ನೆನೆಯಬೇಕು. ವೀರಭದ್ರ ರುದ್ರ ಪುತ್ರ. ರೌದ್ರನೆಂದೂ ಈತನಿಗೆ ಹೆಸರು. ರೌದ್ರ ಮತ್ತು ವೀರ ರಸಗಳಿಗೆ ಮೂಲ ಚೇತನನಾಗಿದ್ದಾನೆ. ವೀರಗಾಥೆ ವೀರಕಾವ್ಯಗಳಿಗೆ ಆಕರನಾಗಿದ್ದಾನೆ. ಅಂತೆಯೇ 'ವೀರಶೈವ'ಕ್ಕೂ ಮೂಲ ಪುರುಷನಾಗಿದ್ದಾನೆ. ಇವೆಲ್ಲವೂ ಮರದ ಬೇರು ಮಣ್ಣಿನ ಮರೆಯಲ್ಲಿರುವಂತೆ ಇದ್ದು ಹೋಗಿವೆ. ವೀರೇಶನೆ ಇವಕ್ಕೆಲ್ಲ ಮೂಲ ಪುರುಷ. ವೀರೇಶನ ವೀರ ವ್ಯಕ್ತಿತ್ವವನ್ನು ಆಮೂಲಾಗ್ರವಾಗಿ ಅರಿತವರು ವಿರಳ. ಆತನ ವ್ಯಕ್ತಿತ್ವ ಸಣ್ಣದಲ್ಲ; ಸವೆದು ನವೆದು ಹೋಗುವಂತಹದಲ್ಲ; ನವಿರೇಳಿಸುವಂತಹದು. ಸಾಹಸಮಯವಾದ ಆತನ ವೀರ ಚರಿತೆ ವಿಶ್ವ ವಿಖ್ಯಾತವಾಗಿದೆ. ಆತನ ಆ ವೀರ ಸಂಸ್ಕೃತಿ ವಿಶಾಲವಾಗಿ ಹಬ್ಬಿಕೊಂಡಿದೆ. ವೀರ ಚರಿತೆ ಚರಾಚರವನ್ನು ವ್ಯಾಪಿಸಿ ವಿಶ್ವವನ್ನೆ ಚಕಿತಗೊಳಿಸುತ್ತಿದೆ. ಆ ವೀರೇಶನ ಬಾಳಿನಲ್ಲಿ ಸೋಲೆಂಬುದಿಲ್ಲ. ತ್ರಿಕರಣಗಳಲ್ಲಿ ಆತನು ಸೋತಿಲ್ಲ.

ಶಕ್ತಿ ವೀರೇಶನ ಶರೀರ; ವೀರೇಶ ಆ ಶರೀರದ ಚೇತನ. ಆತ ಎಲ್ಲರಂತೆ ಶಕ್ತಿಯ ಅಂಶನಲ್ಲ. ಆತನ ಆ ಅಂಗಾಂಗಳಲ್ಲಿ ಶಕ್ತಿಯ ಪೂರ್ಣಾವತರಣ. ಆತನದು ಅಖಂಡ ಶಕ್ತಿ; ಅಲುಪ್ತ ಶಕ್ತಿ. 'ಶತರುದ್ರಾಧಿಪತಿ' ಎಂದು ಹೇಳುವುದರಲ್ಲಿದೆ ಆತನ ಚೇತನ ಪೂರ್ಣಶಕ್ತಿ; ಶಕ್ತಿಪೂರ್ಣ ಚೇತನ. ಅಪ್ರತಿಮ ವೀರರು ರುದ್ರರು. ಅಂತಹ ರುದ್ರರ ಅಧಿಪತಿ ವೀರೇಶ ಅಸಾಮಾನ್ಯ ವೀರ. ಆತನದು ಅಸಾಮಾನ್ಯ ಪೌರುಷ. ನಾರಸಿಂಹನನ್ನು ಸಂಹರಿಸಿದ ಪೌರುಷ. ವೈರಿಭಯಂಕರು; ಭಕ್ತಕಾರುಣ್ಯಕರ. ಆತ ಗಂಡುಗಲಿ ಆತನದು ಗಂಡುಗೆಲಸ. ಆತನ ಶರಭಾವತಾರವೆ ಇದಕ್ಕೆ ನಿದರ್ಶನ. ಆತ ಸಿಂಹ ಪರಾಕ್ರಮಿಗಳಿಗೆ ಶರಭ; ಬೃಹತ್ತಾಗಿ ಬಲಿಷ್ಠ.

ವೀರೇಶನದು ಕೇವಲ ಕಾಯಶಕ್ತಿಯಲ್ಲ; ಅದು ಅಂತಃಶಕ್ತಿ; ಆತ್ಮಶಕ್ತಿ. ಅದು ಆತನ ಕಾಯದಲ್ಲಿ ಕಾರ್ಯಗಳಲ್ಲಿ ಮುಮ್ಮಡಿ ಸೂರ್ಮಡಿಯಾಗಿ ಹೊಮ್ಮಿದೆ. ಸಾಮಾಜಿಕ ನೆಮ್ಮದಿಗೆ ಕಾರಣವಾಗಿದೆ. ಆತನ ಸಾಮರ್ಥ್ಯದ ಪ್ರಭಾವದಿಂದ ಶಾಂತಿ ನೆಲಸಿತು; ಪ್ರಗತಿಶೀಲವಾದ ಭಾವೈಕ್ಯದ ಬೆಳವಣಿಗೆಯಾಯಿತು. ಶೈವೀಸಂಸ್ಕೃತಿ ಪ್ರಗತಿಶೀಲವಾಯಿತು

ಆರ್ಯ-ದ್ರಾವಿಡ ಭೇದ ಅಣಗಿತು. ವೀರೇಶನ ಯಜ್ಞಕ್ರಾಂತಿಯು ಮಹತ್ಸಾಧ ನೆಯು ಬೃಹತ್ ಪರಿಣಾಮದ್ದಾಗಿದೆ; ಸಂಘಟನಾತ್ಮಕವಾಗಿದೆ; ಸಮಯಾತ್ಮಕ ವಾಗಿದೆ. ವೀರೇಶನ ಅರ್ಥಪೂರ್ಣ ಹೋರಾಟದಿಂದ ದ್ರಾವಿಡರು ಆರ್ಯರ ಅರ್ಥವಿಲ್ಲದ ಸ್ವಾರ್ಥಮಯವಾದ ದ್ವೇಷಾಸೂಯೆಗಳಿಂದಕೂಡಿದ ಹಿಂಸಾತ್ಮಕವಾದ ದಾಳಿಯಿಂದ ಮುಕ್ತರಾಗುವರು. ನೆಮ್ಮದಿಯಿಂದ ಬಾಳುವರು. ಸಹಕಾರ ದಿಂದ ವರ್ತಿಸುವರು ನೈತಿಕ ಪಥದಲ್ಲಿ ನಡೆವರು ಅಭಿವೃದ್ಧಿ ಅಭ್ಯುದಯಗಳತ್ತ ಸಾಗುವರು ಸತ್ಯಾಗ್ರಹವನ್ನು ಶತಶತಮಾನಗಳ ವರೆಗೆ ಸಾಗಿಸುತ್ತ ಜನ ತೆಯನ್ನು ಉದ್ಧರಿಸುವನು. ಯಜ್ಞಾಹುತಿಯನ್ನು ನಿಲ್ಲಿಸುವನು. ವೈರಿಗಳ ಶೋಷಣೆಯನ್ನು ಸಂಹರಿಸುವನು. ಸ್ವಾರ್ಥಭಾವ ಸಂಕೋಚಭಾವಗಳಿಲ್ಲದ ರಾಗ ದ್ವೇಷಗಳಿಲ್ಲದ ತನ್ನದೇ ಆದ ಒಂದು ಕಟ್ಟುಕಟ್ಟಳೆಯುಳ್ಳ ಹೊಸ ಸಮಾಜವನ್ನು ರೂಪಿಸುವನು. ನಡೆಯಂತೆ ಒಳ್ನುಡಿಯನ್ನೂ ರೂಪಿಸುವನು

ಯಜ್ಞಪ್ರಿಯರು ವೀರೇಶನನ್ನುಯಜ್ಞಧ್ವಂಸಿಯೆಂದು ಯಜ್ಞಾರಿಯೆಂದು ಕರೆವರು. ಆತನ ಆ ಸದುದ್ದೇಶವನ್ನು ಅರಿಯದಾದರು ತಮ್ಮದುರುದ್ದೇಶದ ದೃಷ್ಟಿಯಲ್ಲಿ ಕಂಡರು; ಕೆಡೆನುಡಿದರು. ವೀರೇಶನು ಅದಕ್ಕೆ ಕಿವಿಮನ ಗಳನ್ನು ಕೊಡದೆ ತನ್ನ ಅಪಾರ ಚೈತನ್ಯದಿಂದ ಜನತೆಗೆ ಒಳ್ಳೆಯ ಭವಿಷ್ಯ ವನ್ನು ರೂಪಿಸಿಕೊಡುವನು. ವಿಧಾಯಕ ಕಾರ್ಯಗಳನ್ನು ತೋರಿಸುವನು ಶ್ರೇಯೋಭ್ಯುದಯಗಳನ್ನು ಸಾಧಿಸುವ ಆರಾಧನೆಯನ್ನು ಬೋಧಿಸುವನು. ಲಿಂಗಪೂಜೆಯೆ ಉತ್ತಮ ಯಜ್ಞವೆಂದು ಹೇಳಿ ಅದರತ್ತ ಜನತೆಯ ಲಕ್ಷ್ಯ-ಗಳನ್ನು ಆಕರ್ಷಿಸುವನು.ಮಂಗಲಕರವಾದ ಮಹತ್ವಾಕಾಂಕ್ಷೆಯನ್ನು ಹೆಚ್ಚಿ ಸುವನು ಸತ್‌ಸಂಪ್ರದಾಯಕ್ಕೆ ಬುನಾದಿ ಹಾಕುವನು. ಗೆಲುವಿನಿಂದ ಗಂಭೀರ ತೆಯಿಂದ ಒಳ್ಳೆಯದರ ಏಳ್ಗೆಗೆ ಪರಸ್ಪರ ಸಹಕಾರದ ಬಾಳ್ವೆಗೆ,ಬಾಳಿನುದ್ದಕ್ಕೂ ಶ್ರಮಿಸುವನು ಸಾಧಿಸುವನು. ಅದಕ್ಕೆ ಧ್ಯೇಯುವಾದಿಯೆಂದೆನಿಸುವನು. ಆದರ್ಶ ಪುರುಷನೆಂದೆನಿಸುವನು. ಮಾನವೀಯ ವಾದಿಯಾಗಿ ಸಚ್ಚಾರಿತ್ರ-ವನ್ನು ವಿಶ್ವದಲ್ಲಿ ಉಳಿಸುವನು.

೫. ವೀರಭದ್ರ ದೇವನ ವೀರ ಮತ್ತು ವಿಶುದ್ಧ ಪ್ರಭಾವ !

ವೀರೇಶನ ಪ್ರಭಾವಕ್ಕೆ ಇಮ್ಮೊಗಗಳಿವೆ. ಒಂದು ವೀರ ಮುಖ; ನೇರವಾ ಜನಾಕರ್ಷಣೀಯವಾದಂತೆ ಮಲ್ಲ, ವಿಕ್ರಮ, ಧೀರ, ಶೂರ, ಬೀರ, ಶರಭ, ಗಂ ಬೇರುಂಡ ಇವೆ ಮೊದಲಾದ ಪರ್ಯಾಯ ಪದಗಳಿಂದಲೂ ಜನಾಕರ್ಷಣೀ ವಾಗಿದೆ. ಅಂತೆಯೇ ಭದ್ರ ಪದವು ನೇರವಾಗಿ ಅದೇ ಪದದಿಂದಲ್ಲದೆ ಶಿವ, ಮಂಗಲ, ಶುಭ ಮೊದಲಾದ ಪದಗಳಿಂದ ಆಕರ್ಷಣೀಯವಾಗಿದೆ.

ವೀರ, ಬೀರ, ಮಲ್ಲ, ವಿಕ್ರಮ ಈ ಹೆಸರಿನವರಿದ್ದಾರೆ. ಭದ್ರ, ಶಿವ, ಮಂಗಲ ಈ ಹೆಸರಿನವರೂ ಇದ್ದಾರೆ. ವೀರಭದ್ರ ಈ ಪೂರ್ಣ ಹೆಸರಿ ನವರೂ ಇದ್ದಾರೆ. ರಾಮಾಯಣ ಕಾಲದಿಂದಲೂ ಈ ಹೆಸರುಗಳು ಪ್ರಚಲಿ ವಾಗಿವೆ. ಜನರು ಉಪಯೋಗಿಸುತ್ತ ಬಂದಿದ್ದಾರೆ. ರಾಮಭದ್ರ, ಬಲಭದ್ರ, ವೀರಭದ್ರ, ಭದ್ರದೇವ ಈ ಹೆಸರುಗಳನ್ನು ನೆನೆಯಬೇಕು. ಮಲ್ಲ, ಮಲ್ಲಿಕಾರ್ಜುನ, ಮಲ್ಲಯ್ಯ, ಮಲ್ಲಿನಾಥ, ಯುದ್ಧಮಲ್ಲ, ರಣವಿಕ್ರಮ, ವಿಕ್ರಮ ವಿಕ್ರಮಾದಿತ್ಯ ಮೊದಲಾದ ಹೆಸರುಗಳನ್ನೂ ಗಮನಿಸಬೇಕು.

ಮಂಗಲಯ್ಯ, ಮಂಗಲರಸ, ಮಂಗಲಮ್ಮ, ಶಿವಯ್ಯ, ಶಿವಮ್ಮ ರಾಜ ಯ್ಯ, ರಾಜಣ್ಣ ಇವು ಭದ್ರ ಪದದ ಪರ್ಯಾಯ ನಾಮಗಳಾಗಿವೆ. ಇವೆಲ್ಲ ಹೆಸರು ಗಳಿಂದ ವೀರೇಶನು ಜನಪ್ರಿಯನೂ ರಾಜಾಧಿರಾಜನೂ ಆಗಿದ್ದಾನೆಂಬುದನ್ನು ಗಮನಿಸಬೇಕು. ಆತನ ಸರ್ವಸಮರ್ಥ ಮಾರ್ಗದರ್ಶನ ಶಕ್ತಿಯನ್ನು ಪ್ರಭಾವ ನ್ನು ನೆನೆಯಬೇಕು. ವೀರಪಥಕ್ರಾಂತಿಗೆ ವೀರೇಶನೆ ನಾಂದಿಯನ್ನು ಹಾಕಿ ವನು ಸ್ವಯಶೂರತನದಿಂದ ಸ್ವತಂತ್ರವಾಗಿಬಾಳಿದವರಲ್ಲಿ ಆತನೇ ಮುಮ್ಮೊ ದಲಿಗನು.

ದೇವಗಣರ ವಿರೋಧವನ್ನು ಎದುರಿಸಿದವರಲ್ಲಿ ಆತನೇ ಮೊದಲಿಗನು ಸರ್ವ ಶಿವಗಣರಿಗೆ ನವ ಚೈತನ್ಯವನ್ನು ನಿರತಿಶಯವಾಗಿ ಉದ್ದೀಪನಗೊಳಿ ದಾತನು. ವಿಜಯಶಾಲಿಗಳನ್ನಾಗಿಸಿದಾತನು ಭಲರೇ ರುದ್ರ...., ಎಂಬುದನ್ನು ಅಂದು ರಣಮಂತ್ರವನ್ನಾಗಿಸಿದವೀರಭದ್ರ, ಅದು ಅಂದಿನಂತೆಇಂದಿಗೂ ಯುಗ ಯುಗ ಕಲ್ಪಕಲ್ಪಾಂತರ ಪ್ರತಾಪಕ್ಕೆ ಪರಮ ಪರಿಣಾಮಕಾರಿಯಾಗಿನಿಂತಿದೆ. ಸಾಮಾಜಿಕ ಸಮತ್ವದ ಮಹಕ್ರಾಂತಿ ಕಾರಣವಾಗಿದೆ.

ಈಗಲೂ ಭಲರೇರುದ್ರ, ಭಲರೇವೀರ,ಎಂದುಕೂಗಿದೊಡನೆ ಪುರವಂತರಿಗೆ ಎಲ್ಲಿಲ್ಲದ ಸ್ಫೂರ್ತಿ ಶಕ್ತಿಗಳು ಉದಯವಾಗುತ್ತವೆ ಶಸ್ತ್ರಹಾಕಿಕೊಳ್ಳುವಹುಮ್ಮಸಸ್ಸುಹುಟ್ಟುತ್ತದೆ. ಶ್ರೋತೃಗಳ ಹೃದಯದಲ್ಲಿಯೂ ಅಪೂರ್ವ ಶಕ್ತಿಸಂಚಾರವಾಗುತ್ತದೆ. ಅಂದಿನಿಂದ ಇಂದಿನವರೆಗೂ ಅದು ತನ್ನ ಅಪಾರ ಪ್ರಭಾವವನು ಬೀರುತ್ತಬಂದಿದೆ ಮುಂದೆಯೂ ಬರುತ್ತದೆ.

ವೀರೇಶನ ತಂದೆ ಶ್ರೀರುದ್ರ;ಆತನನ್ನು ಕುರಿತು ವೇದಗಳು ಉದ್ಘೋಷಿಸಿವೆ. 'ಶ್ರೀರುದ್ರ' ಅದೊಂದು ಪೂಜೆಯಲ್ಲಿ ಪಠಿಸುವ ಪಾವನಗೀತವಾಗಿ ಪರಿಣಮಿಸಿದೆ. ತನ್ನದೇ ಆದ ಅಸ್ತಿತ್ವವನ್ನು ಉಳಿಸಿಕೊಂಡಿದೆ.ನಿತ್ಯ ಪಠಣದ ಮೂಲಕ ಜೀವಂತವಾಗಿದೆ.ಜೀವಭಾವವನ್ನು ಶಿವವಾಗಿಸುತ್ತದೆ-ಪಾವನತವು ಪ್ರೇರಣೆಯನ್ನೀಯುತ್ತದೆ; ಅರ್ಚನ ಕ್ಷೇತ್ರದಲ್ಲಿ ಅದರದೇ ಆದ ಅಪೂರ್ವ ಅಪ್ರತಿಮ ಪಾತ್ರತೆಯಿದೆ. ಮಂಗಲಮಯ ಮಹಾಮಂತ್ರವೆನಿಸಿದೆ. ಶ್ರೀರುದ್ರದ ನಮಕ ಚಮಕಗಳಲ್ಲಿ ಒಂದು ಬಗೆಯ ಶಬ್ದ ಶಯ್ಯೆಯಿದೆ.ಗಮನೀಯ ಗಮಕ ಯಮಕಗಳಿವೆ. ವಿಶ್ವದಲ್ಲಿ ಏನೆಲ್ಲವನ್ನೂ ವಿಶ್ವೇಶ್ವರನ ಸ್ವರೂಪವನ್ನಾಗಿ ಕಾಣುವ ದಿವ್ಯ ಹಾಗೂ ವಿಶಾಲಬಾವವಿದೆ. ಚರಾಚರವನ್ನುಶಿವವಾಗಿಕಾಣುವ ಕೈಮುಗಿಯಬಲ್ಲ ಭಕ್ತಿಭಾವವಿದೆ. ದೈವೀಶಕ್ತಿಯನ್ನು ಕಾಣಿಸುವ ಪ್ರತಿಭೆಯಿದೆ. ಮಾತಿನಲ್ಲಿ ಮಿಂಚು ಸಂಚರಿಸುತ್ತದೆ. ಜಾಡ್ಯತೆಯನ್ನು ತೊಲಗಿಸಿ ಜಾಗ್ರತಿಯನ್ನುಂಟು ಮಾಡುತ್ತದೆ; ಆ ರುದ್ರದೇವನಲ್ಲಿ ಭಾವ ತುಂಬಿ ಬರುತ್ತದೆ.ಆಕೆಚ್ಚಿಗೆ ನಮ್ಮ ನೆಚ್ಚುಎರಕಗೊಳ್ಳುತ್ತದೆ. ಅಗಾಧ ಶಕ್ತಿ ಆವಿರ್ಭವಿಸುತ್ತದೆ. ಆತನದು ಅಂತಹ ವೀರಶ್ರೀ ಮತ್ತು ಭದ್ರಶ್ರೀ!

---

೬. ಕ್ರಾಂತಿ ಪಥದಲ್ಲಿ ವೀರೇಶ !

ವೇದಗಳ ಪೂರ್ವಕಾಲ. ಭಾರತಕ್ಕೆ ಆರ್ಯರು ಬಂದ ಕಾಲ. ದ್ರಾವಿಡರು ಆರ್ಯರ ಒತ್ತಾಯಕ್ಕೆ ಚಿತ್ರಹಿಂಸೆಗಳಿಗೆ ಒಳಗಾದ ಕಾಲ. ವೀರೇಶನ ತಂದೆ ರುದ್ರನ ಪ್ರಾಬಲ್ಯ ಅಂದಿತ್ತು, ದ್ರಾವಿಡರ ಮುಂದಾಳುವಾಗಿಯೂ ಇದ್ದನು ರುದ್ರನು. ಅಸಹಾಯಕರಾದ ದ್ರವಿಡರು ರುದ್ರನಲ್ಲಿ ಬಂದು ಆರ್ಯರಿಂದ ತಮಗೊದಗಿದ ದುಸ್ಥಿತಿಯನ್ನು ದೂರಿಕೊಳ್ಳುವರು. ಕೇಳಿ ರುದ್ರದೇವನು ರೊಚ್ಚಿಗೇಳುವನು. ಅಪ್ರತಿಮ ಪರಾಕ್ರಮಿಯಾದ ರುದ್ರದೇವನು ಆರ್ಯರ ಮೇಲೆ ಬೀಳುವನು. ಅವರೊಡನೆ ಹೋರಾಡಿ ಅವರನ್ನು ಸದೆ ಬಡೆವನು. ಅದನ್ನು ವರ್ಣಿಸುವ ಈ ಋಕ್ಕುಗಳನ್ನು ಕೇಳಿ.

"ಮೃಡಾನೋ ರುದ್ರೋ ತನೋ ಮಯಸ್ಕೃಧಿ
ಕ್ಷಯದ್ವೀರಾಯ ನಮಸಾ ವಿಧೇಮ ತೇ ।
ಯಚ್ಛಂಚಯೋಶ್ಚ ಮನುರಾಯಜೇ ಪಿತಾ
ತದಶ್ಯಾಮ ತವ ರುದ್ರ ಪ್ರಣೀತೌ ।
ಮಾ ನೋ ಮಹಾಂತಮುತ ಮಾ ನೋ ಅರ್ಭಕಂ
ಮಾ ನ ಉಕ್ಷಂತಮುತ ಮಾ ನ ಉಕ್ಷಿತಂ ।
ಮಾ ನೋವ ಧೀಃ ಪಿತರಂ ಮೋತ ಮಾತರಂ
ಪ್ರಿಯಾ ಮಾ ನಸ್ತನುವಃ॥ ರುದ್ರ ರೀರಿಷಃ ।
ಮಾ ನಸ್ತೋಕೇ ತನಯೇ ಮಾ ನ ಅಯುಷಿ
ಮಾ ನೋ ಗೋಷು ಮಾ ನೋ ಅಶ್ವೇಷ ರೀರಿಷಃ ।
ವೀರಾನ್ಮಾ ನೋ ರುದ್ರ ಭಾವಿತೋ ವಧೀರ್ಹವಿಷ್ಮಂತೋ
ನಮಸಾ ವಿಧೇಮ ತೇ ।........."

ತೈತ್ತಿರೀಯ ಸಂಹಿತೆಯ ರುದ್ರಾಧ್ಯಾಯದ ಮಂತ್ರಗಳಿವು. ರುದ್ರದೇವನು ಮಾಡಿದ ಪ್ರತಿಕ್ರಾಂತಿಗೆ ದಾಳಿಗೆ ನಿರ್ವೀರ್ಯರಾದ ಆರ್ಯರ ಪ್ರಾರ್ಥನೆಯತೆಯಿಂದ ಪ್ರಾರ್ಥಿಸಿಕೊಂಡ ಮಂತ್ರಗಳಿವು. ಇವುಗಳಿಂದ ಅಂದಿನ ಪ್ರತಿಭಟನೆ ಅಭಿವ್ಯಕ್ತವಾಗುತ್ತದೆ. ವೈರಿಗಳ ಹಾವಳಿ ಪುಂಡಾಟಿಕೆ ದ್ರವಿಡರ ಮೇಲೆ ಆದುದನ್ನು ಅದಕ್ಕೆ ಪ್ರತಿಯಾಗಿ ಶ್ರೀರುದ್ರ ದೇವನು ಅವರ ಮೇಲೆ ಪ್ರತಿಭಟಿಸಿದುದನ್ನು ಇಲ್ಲಿ ಗಮನಿಸಬೇಕು.

ಅಸ್ಯರ ಸುಲಿಗೆಯನ್ನು ನಿಲ್ಲಿಸಿ ಶಾಂತಿ ಸ್ಥಾಪನೆಯನ್ನು ಶ್ರೀರುದ್ರನು ಮಾಡಿದನು. ಈ ಪಥದಲ್ಲಿ ಆತನ ವೀರ ಪುತ್ರನಾದ ವೀರಭದ್ರನೂ ಹೆಜ್ಜೆ ಹಾಕಿದನು- ಅನಿವಾರ್ಯವಾಗಿ ! ಯಜ್ಞದ ನೆಪದಲ್ಲಿ ಮತ್ತೆ ದ್ವೇಷಭಾವ ತಲೆ ಯೆತ್ತುವುದು. ಕೊಲೆ ಸುಲಿಗೆ ದೂಷಣೆ ಅವಮಾನಗಳು ನೊಡಲಾಗು- ವವು. ಉಂಡುತೃಪ್ತಿಪಡುವ ಪಡಿಪದಾರ್ಥಗಳನ್ನು ಯಜ್ಞಾಗ್ನಿಗೆ ಹಾಕಿ ಸು ಡುವಿಕೆ ನಡೆವುದು. ಅಭಕ್ಷ್ಯಭಕ್ಷಣ, ಅಸೇಯ ಪಾನಾದಿಗಳನ್ನುಮಾಡತೊಡ ಗುವರು. ಸನಾತನ ಸಾಮಾಜಿಕ ಕ್ರಮಗಳನ್ನು ಮೀರಿ ದಕ್ಷಾದಿ ದೇವಗಣ ರು ನಡೆಯತೊಡಗುವರು. ಅಧಿಕಾರದಾಹ, ಅಭಿಮಾನಮೋಹಗಳಿಗೆ ಒಳ ಗಾಗುವರು. ಅಸ್ಮಿತ ಅಭಿನಿವೇಶಗಳಿಗೊಳಗಾಗುವರು. ಕೀಳು ಕಲ್ಪನೆ ಕೀಳು ಕಾರ್ಯಗಳನ್ನು ಕೈಕೊಂಡು ದೇವತ್ವ ಜೀವನದಿಂದ ದೈತ್ಯಜೀವನಕ್ಕೆ ನುಗ್ಗಿ ಕುಗ್ಗಿ ಕೆಳಕ್ಕಿಳಿದಿದ್ದರು. ಆಗ ವೀರಭದ್ರೇಶ್ವರನು ತನ್ನ ಉತ್ಕ್ರಾಂತಿಯನ್ನು ಪ್ರಾರಂಭಿಸಬೇಕಾಯಿತು. ಕರ್ತವ್ಯದ ಉನ್ನತ ಶಿಖರಕ್ಕೇರಿ ಜಯಭೇರಿಯನ್ನು ನೊಳಗಿಸಬೇಕಾಗುವುದು. ಯಜ್ಞ ದ್ವೇಷಿಗಳನ್ನು ಸಂಹರಿಸಿ ಮರಳಿ ಸಂರಕ್ಷಿ ಸಬೇಕಾಯಿತು. ಪಶುಗಳಿಗಿಂತ ಅಧೋಗತಿಗಳಿದವರಿಗೆ ಪಶು ತಲೆಗಳನ್ನು ಕೊಡಬೇಕಾಯಿತು. ಪಶುಪತಿತ್ವವನ್ನು ಸೋಷಿಸಿಕೊಳ್ಳಬೇಕಾಯಿತು· ಸಾಮ್ರಾಜ್ಯವ್ಯಾಮೋಹಿಗಳಾದ ಶತ್ರುಗಳ ಕೋಳ್ಬಲವನ್ನು ತಗ್ಗಿಸಬೇಕಾ ಯಿತು. ಸಮಾಜವಾದವನ್ನು ಸಂಸ್ಥಾಪಿಸಬೇಕಾಯಿತು. ಶಾಂತಿಪ್ರಗತಿ ಯನ್ನು ಸಾಧಿಸಬೇಕಾಯಿತು.

ಪ್ರಚಂಡ ಕ್ರಾಂತಿಯನ್ನುಮಾಡಿ ವಿಶ್ವಮಾನ ವಿಜಯವನ್ನು ವೀರ- ಭದ್ರೇಶ್ವರನು ತನ್ನ ಪವಿತ್ರ ಧ್ಯೇಯದಿಂದ ಧೈರ್ಯಸ್ಥೈರ್ಯದಿಂದ ಸಂಪಾದಿಸು ವನು. ಸ್ಕತ್ಕೀರ್ತಿ ಪಾತ್ರನಾಗುವನು.

ಹಿಂಸಾತ್ಮಕ ಸಷ್ಪಾತ್ಮಕ ಮತ್ತು ದ್ವೇಷಾತ್ಮಕ ಯಜ್ಞಗಳನ್ನು ನಿರೋಧಿಸಿ ಅಹಿಂಸೆ ನ್ಯಾಯ ಮೈತ್ರಿಗಳನ್ನು ಸ್ಥಾಪಿಸುವುದು ವೀರೇಶನ ಕಾರ್ಯ. ವಿರೇಶನ ಕ್ರಾಂತಿ ಸಾಮಾಜಿಕ ಶಾಂತಿ ಸ್ಥಾಪನೆಗಾಗಿ ರಚನಾತ್ಮಕ ಕ್ರಾಂತಿಗಾಗಿ ಉದ್ಘೋಷಿಸುವುದೇ ವೀರಸೇನೆಯ ಜಪ ಮಂತ್ರವಾಯಿತು , ತಪಃಕಾರ್ಯವಾಯಿತು.

ಮತ್ತೊಂದು ಸಾಮಾಜಿಕ ಕ್ರಾಂತಿಯಾಗ ಬೇಕಾಗಿದೆ ಇನ್ನೊಂದು ಬ[illegible] ಯಲ್ಲಿ! ಒಡಕುತನವನ್ನು ಓಡಿಸಬೇಕಾಗಿದೆ. ಸ್ವಾಭಿಮಾನ ದುರಹಂಕಾ[illegible] ಗಳನ್ನು ದ್ವೇಷಮತ್ಸರಗಳನ್ನು ಸದೆಬಡೆಯಬೇಕಾಗಿದೆ. ಸಾಮ್ಯತೆ ಸಹ. ಕಾರಗಳು ಮೈದೋರಬೇಕಾಗಿದೆ. ದೌರ್ಬಲ್ಯಾಂಧಕಾರ ತೊಲಗಬೇಕಾಗಿದೆ. ಇದಕ್ಕಾಗಿ ಮರಳಿ ಆ ವೀರಭದ್ರಭಾನು ಉದಯಿಸಬೇಕಾಗಿದೆ. ಉದಯಿ- ಸುವ ಸಮಯ ಸನ್ನಿಹಿತವಾಗಿದೆ.

ಅದೋ ಅಲ್ಲಿ ನೋಡಿ! ಆ ಕ್ಷಿತಿಜದ ಮೇಲೆ ಆ ವೀರಭಾನು ಉದಯ ವಾಗಿದ್ದಾನೆ. ಆ ಬೆಳಕಿನಲ್ಲಿ ನಾವಿಂದು ಕಣ್ದೆರದು ಹೆಜ್ಜೆ ಹಾಕೋಣ. ಹೃ[illegible] ಯವನ್ನು ಹದಗೊಳಿಸೋಣ. ನಮ್ಮ ಆ ಪುರಾತನ ಪವಿತ್ರ ಸಂಸ್ಕೃತಿಯನ್ನ ಸಂರಕ್ಷಿಸೋಣ.

ಆ ವೀರೇಶನ ವೀರಕ್ರಾಂತಿ ಮತ್ತೆ ಮೊಳಗಲಿ,
ಅತನ ಆ ವೀರ ಸಂಸ್ಕೃತಿ ಸಮಸ್ಥಿತಿ ಸ್ಥಾಪಿತವಾಗಲಿ.
ಇಂದಿಗೂ ಮುಂದಕ್ಕೂ ಸ್ಥಿರವಾಗಿ ನಿಲ್ಲಲಿ.

---

೭ ಯಜ್ಞಕ್ರಾಂತಿ

ಋಗ್ವೇದ ಪೂರ್ವದಲ್ಲಿ ರುದ್ರದೇವನಿದ್ದನು. ಆತನಿಗೆ ಯಜ್ಞಾಧಿಪತ್ಯ ಗಾಥಾದಿಪತ್ಯಗಳು ಮೀಸಲಾಗಿದ್ದವು. ಅವು ಆತನ ಬಳಿಕ ಆತನ ಸ್ಥಾನಕ್ಕೆ ಬಂದ ಶಿವನಿಗೂ ಮೀಸಲಾಗಿದ್ದವು. ಇದನ್ನು ಸಹಿಸದ ದೇವಗಣರು ದಕ್ಷನನ್ನು ಮುಂದೆ ಮಾಡಿ ಅವರಿಂದ ಕಿತ್ತುಕೊಳ್ಳಲು ಪ್ರಯತ್ನಮಾಡಿದುದರ ಫಲವೇ ದಕ್ಷಯಜ್ಞ.

ಅವರ ಕಾಲದಲ್ಲಿ ಮಾಡುತ್ತಿದ್ದ ಯಜ್ಞ ಸ್ವರೂಪ ಪ್ರಾಕೃತಿಕವಾಗಿದ್ದಿತು. ಆ ಆ ಋತುಗಳಿಗೆ ತಕ್ಕಂತೆ ಮಾಡುತ್ತಿದ್ದರು. ಆ ಆ ಋತುಗಳಲ್ಲಿ ಕಲುಷಿತಗೊಳ್ಳುವ ಹವೆಯನ್ನು, ಹುಟ್ಟುವ ಬೇನೆಗಳನ್ನು ಶುದ್ಧವಿಸಿ ಆರೋಗ್ಯ ಬಡುವಂತೆ ಮಾಡುತ್ತಿದ್ದರು. ಆ ಆ ಋತುಗಳಿಗೆ ತಕ್ಕಂತೆ ಆ ಆ ಕಾಷ್ಟಗಳನ್ನು ತಂದು ಸುಡುವುದೆ ಅವರ ಯಾಜ್ಞಿಕ ವಿಧಿ ವಿಧಾನವಾಗಿದ್ದಿತು.

ದೇವಗಣರು ಆ ಯಜ್ಞ ಸ್ವರೂಪವನ್ನು ಬದಲಿಸಿದರು. ಭತ್ತ, ಅಕ್ಕಿ, ಯವ, ಶ್ಯಾಮುಕ, ನೀವಾರ, ಗೋದಿ, ಬೆಲ್ಲ, ಹಾಲು, ಎಳ್ಳು, ಅರಳು, ಹಿಟ್ಟು ತುಪ್ಪಗಳನ್ನು ಸುಡತೊಡಗಿದರು. ಅಲ್ಲದೆ ನಾಲಗೆಯ ಚಟಕ್ಕೆ ಬಿದ್ದು ಪಶುಗಳನ್ನು ಕೊಲ್ಲತೊಡಗಿದರು. ಇದಕ್ಕೆ ಬಲಿದಾನ ಬಲಿಸಮರ್ಪಣ ಎಂದು ಕರೆದರು. ಯಜ್ಞವೆಂದರೆ ಬಲಿದಾನ ಪೂಜೆ ಎಂದು ಅರ್ಥವಿಸಿದರು. ದೇವರ ಹೆಸರಿನಲ್ಲಿ ತಂತಮ್ಮ ಬಸಿರುಗಳನ್ನು ಹೊರೆಯತೊಡಗಿದರು, ಯಜ್ಞದ ನೆಪದಲ್ಲಿ ಪಶುವಧೆ ಮಾಂಸಭಕ್ಷಣಗಳು ಮೊದ-ಲಾದವು. ಯಜ್ಞದಲ್ಲಿ ಹಸುಗಳನ್ನು ಕೊಂದರೆ ಪಾಪವಿಲ್ಲೆಂದು ಹೇಳತೊಡಗಿದರಲ್ಲದೆ ಶಾಸ್ತ್ರಗಳನ್ನು ಬರೆದರು. ಅಗ್ನಿ ಯಜ್ಞ ದೇವತೆಯೆಂದೂ ಅಗ್ನಿಶಾಂತಿಗೆ ಬಲಿದಾನವೆಂದೂ ಹೇಳತೊಡಗಿದರು. ಯಜ್ಞಾಗ್ನಿಗೆ ಆಹುತಿ ಕೊಡುವವರು ಬ್ರಾಹ್ಮಣರಾಗಿರಬೇಕೆಂದು ಆ ಬ್ರಾಹ್ಮಣ್ಯ 'ಯಜ್ಞಸೂತ್ರ'ದಿಂದ ಅಥವಾ'ಯಜ್ಞೋಪವೀತ'ದಿಂದ ಬರುತ್ತದೆಂದೂ ಪ್ರತಿಪಾದಿಸಿ ಪ್ರತಿಪಾಲಿಸಿದರು. ಅರಳೆ, ಅತ್ತಿ, ಮಾವು,ಬನ್ನಿ,ಬಿಲ್ವ, ಖದಿರಮರ ದೇವದಾರು ಪಾಲಾಶ ಔದುಂಬರ ಸೋಮುಲತೆ ಮೊದಲಾದ ಕಟ್ಟಿಗೆಗಳ ಸುಡುವಿಕೆ ನಿಂತು ಹಿಟ್ಟುತುಪ್ಪಹಾಲು ಮೊಸರು ಜೇನು ಅನ್ನಗಳನ್ನು ಸುಡಲುಮೊದಲು

ಮಾಡಿದರು. ಇವನ್ನು ಹವಿ ಹವಿಸ್ಸು ಚರು ಹವ್ಯ ಎಂದು ಮುಂತಾಗಿ ಕರ
ಬೆಂಕಿಗೂ ಹಾಕಿ ತಾವೂ ಯಥೇಚ್ಛವಾಗಿ ತಿನ್ನುವ ಹವ್ಯಾಸಕ್ಕೆ ಒಳಪಟ್ಟ
ಅದಕ್ಕಾಗಿ ಅಗ್ನಿಯೆಂದರೆ ಬ್ರಾಹ್ಮಣ ಎಂದು ಅರ್ಥವಿಸತೊಡಗಿದರು.
ಠಾಗ್ನಿ ಶಾಂತಿಗಾಗಿ ಸ್ವಾಹಾ ಮಾಡಲಾಯಿತು. ಆ ಸ್ವಾಹಾ ಶಾಸ್ತ್ರ
ಅಗ್ನಿಯ ಹೆಂಡತಿಯೆಂದು ಕರೆದರು. ಹವಿಸನ್ನು ಸ್ವಾಹಾ ಮಾಡು(ನು
ವವಳು ಸಾಹಾ ದೇವಿಯಂತೆ! ಆಜ್ಯವನ್ನು ಆರ್ಜಿಸಿ ಉಣ್ಣಲು ಆಗ
ನೆಪದಲ್ಲಿ ತರಿಸಿ 'ಹೊರಗಿನ. ಅಗ್ನಿಗಷ್ಟು ಒಡಲೊಳಗಿನ ಅಗ್ನಿಗಷ್ಟು
'ಪ್ರಾಣಾಯ ಸ್ವಾಹಾ' ಎಂದು ಮಂತ್ರ ಹೇಳತೊಡಗಿದರು. ಈ ಸ್ವಾ
ಸಾಧನೆಗಾಗಿಯೇ ಕರ್ಮಕಾಂಡವನ್ನು ರೂಪಿಸಿದರು. ವೇದದಲ್ಲಿ ಯಜ್ಞ
ಮಂತ್ರಗಳನ್ನು ರಚಿಸಿದರು ಹಿಂಸಾತ್ಮಕ ನಷ್ಟಾತ್ಮಕ ಯಜ್ಞಗಳನ್ನು
ರ್ಧಿಸಿಕೊಂಡರು. ಋತ್ವಿಕರು ಋತಪಥವನು ಮೀರಿದರು.

ವೈದಿಕ ಈ ಕರ್ಮಕಾಂಡವನ್ನು ಪ್ರತಿಭಟಿಸಲು ಯಾರಿಂದಲೂ ಸ
ವಾಗಲಿಲ್ಲ. ಆ ವೀರೇಶನೊಬ್ಬನೇ ವಿರೋಧಿಸಲು ಸರ್ವಸಮರ್ಥನಾಗುವ
ಸೋಮರಸಯಜ್ಞ ಹವಿಸ್ಸಿನಯಜ್ಞಗಳನ್ನು ನಿಲ್ಲಿಸಿದನು. ಇವೆರಡ
ಸೋಮಯಜ್ಞ, ಹವಿಯಜ್ಞ ಎಂದು ಅವರು ಹೇಳುವರು. ಒಂದ
ಸೋಮರಸ ಪಾನಮಾಡಿ ದುರಾಚಾರಕ್ಕೆ ಅವಕಾಶವುಂಟಾಗುವು
ಇನ್ನೊಂದರಲ್ಲಿ ಜೀವನಕ್ಕೆ ಬೇಕಾದ ಪಡಿಪದಾರ್ಥಗಳ ನಾಶವಾಗುತ್ತ
ವೀರಭದ್ರನು ಈ ಶ್ರೌತಯಾಗಗಳನ್ನು ನಿಲ್ಲಿಸಿ ಗೃಹಯಜ್ಞಗಳನ್ನು ಜನ
ಬಳಕೆಗೆ ತಂದನು. ಪಾಕ ಮಾಡುವುದೆ ಗೃಹಯಜ್ಞ. ಶಿವಪೂಜೆಯಲ್ಲಿ ಧೂ
ದೀಪಗಳನ್ನು ಉಪಯೋಗಿಸುವುದೆ ಶಿವಯಜ್ಞ. ರುದ್ರರೂಪ ಅಗ್ನಿ
ಇದರಿಂದ ಸಂತೃಪ್ತಿಯಾಗುತ್ತದೆ. ಒಳ್ಳೆಯ ಅಡುಗೆಗಳನ್ನು ಮಾಡಿ ರು
ರೂಪರಾದ ಗುರು ಜಂಗಮರಿಗೆ ಅರ್ಪಿಸುವುದೇ ನಿಜವಾದ ಜೀವನಯಜ್ಞ
ವೀರಶೈವರ ವಿಶುದ್ಧಯಜ್ಞ.

ಬೆಳ್ಳಿಯನ್ನು ಹಳಿದು ಬಂಗಾರವನ್ನು ಹಡೆವತಂತ್ರ:
"ಸೋಽರೋದೀದ್ಯದರೋದೀತ್ತದ್ರುದ್ರಸ್ಯ ರುದ್ರತ್ವಂ
ಯದಶ್ರ್ವಶೀಯತ ತದ್ರಜಗ್‌ಂ ಹಿರಣ್ಯ ಮಭವತ್

ತಸ್ಮಾದ್ರಜತಗ್ಂ ಹಿರಣ್ಯಮದಕ್ಷಿಣ್ಯಮಶ್ರುಜಗ್ಂ
ಹಿ ಯೋ ಬರ್ಹಿಷಿ ದದಾತಿ ಪುರಾಸ್ಯ ಸಂವತ್ಸರಾತ್
ಗೃಹೇ ರುಂದತಿ, ತಸ್ಮಾತ್ ಬರ್ಹಿಷಿ ನ ದೇಯಂ,"
—ತೈ. ಸಂ. ೧-೫-೧

ಅದರ ಅರ್ಥವಿದು; ರೋದನ (ಅಳುವಿಕೆ) ಮಾಡಿದ್ದರಿಂದ ರುದ್ರನೆನಿಸಿ ದನು. ಆತನ ಆ ಕಣ್ಣೀರು ಬಿದ್ದು ಬೆಳ್ಳಿಯಾಯಿತು. ಅದರಿಂದಾಗಿ ಬೆಳ್ಳಿ ಯನ್ನು ಯಜ್ಞದಲ್ಲಿ ಪುರೋಹಿತರಿಗೆ ದಕ್ಷಿಣೆಯನ್ನಾಗಿ ಕೊಡಬಾರದು. ಕೊಟ್ಟರೆ ಒಂದು ವರುಷದೊಳಗಾಗಿ ಆತನ ಮನೆಯಲ್ಲಿ ಯಾರಾದರೂ ಸತ್ತು ಅಳುವ ಪ್ರಸಂಗವುಂಟಾಗುತ್ತದೆ. ಕಾರಣ ಯಜ್ಞದಾನಕ್ಕೆ ರಜತ ಅನರ್ಹ. ಎಂದು ಹೇಳಿ ಬಂಗಾರವನ್ನೆ ದಕ್ಷಿಣೆಯನ್ನಾಗಿ ಪಡೆಯು ತ್ತಿದ್ದರು.

ಇದೆಂತಹ ಅಸಂಗತ ಪ್ರಸಂಗ; ಅವಾಸ್ತವ ಸಾಧನ? ಕಣ್ಣೀರಿನಿಂದ ಬೆಳ್ಳಿಯಾಗಬಲ್ಲುದೆ? ಒಂದು ವೇಳೆ ಆಗುತ್ತದೆಯೆಂದರೆ ಅದನ್ನು ಕೊಟ್ಟರೆ ಯಾರಾದರೂ ಸಾಯಬಹುದೆ? ದಾನಕ್ಕೆ ಪದಾರ್ಥ ಮುಖ್ಯವೆ? ಕೊಡತಕ್ಕ ವನ ಹೃದಯ ಪ್ರಧಾನವೆ? ಭಕ್ತಿಯಿಂದ ಬೆಳ್ಳಿಯನ್ನು ಕೊಟ್ಟರೆ ತಪ್ಪೇನು? ಪದಾರ್ಥಕ್ಕಿಂತ ಭಕ್ತಿ ತ್ಯಾಗಗಳು ಮುಖ್ಯವಲ್ಲವೆ? ಒಳ್ಳೆಯ ಮನದಿಂದ ಏನನ್ನಿತ್ತರೂ ಒಳಿತೆ ಆಗಬಲ್ಲುದು; ಆಗುತ್ತದೆ. ಅದೂ ಸತ್ಪಾತ್ರ ದಾನ ವಾಗಬೇಕು.

ವೀರಶೈವರಲ್ಲಿ ಗುರು ಜಂಗಮರಿಗೆ ಅರ್ಪಣ ಮಾಡುವ ಒಳ್ಳೆಯ ಪದ್ಧತಿ ಬಂದಿದೆ. ಅವರಿಗೆ ಪ್ರಸಾದವನ್ನು ಅರ್ಪಿಸುವುದೆ ಪ್ರಾಸಾದಿಕ ಯಜ್ಞ. ಅರ್ಪಣವಾದ ಬಳಿಕ ಬೆಳ್ಳಿಯನ್ನೊ ಬಟ್ಟೆಬರಿಗಳನ್ನೊ ಭಿಕ್ಷವನ್ನೀಯ ಬೇಕು. ಅದಿದು. ಅಷ್ಟಿಷ್ಟು ಎಂಬ ನಿಯಮವೇನಿಲ್ಲ.

ಇನ್ನೊಂದು ಇಂತಹ ಅರ್ಥವಿಲ್ಲದ ಕಥನವನ್ನು ಕೇಳಿ:
"ಪ್ರಜಾಪತಿರ್ವಾ ಇದ ಮೇಕ ಆಸೀತ್
ಸೋಽಕಾಮಯತಪ್ರಜಾಃ ಪಶೂನ್ ಸೃಜೇಯೇತಿ

ಸ ಆತ್ಮನೋ ವಪಾಮುದಕ್ಖಿದತ್ತಾಮ್ ಗ್ನೌ ಪ್ರಾಗೃಹ್ಣಾತ್
ತತೋಽಜಸ್ತೂಪರಸ್ಸಮ ಭವತ್ತಗ್ಂ ಸ್ವಾಯೈ ದೇವತಾಯಾ
ಆಲಭತ ತತೋ ವೈ ಸ ಪ್ರಜಾಃ ಪಶೂನಸೃಜತ
ಯಃ ಪ್ರಜಾಕಾಮಃ ಪಶುಕಾಮಃ ಸ್ಯಾತ್ಸ ಏತಂ
ಪ್ರಾಜಾ ಪತ್ಯಮಜಂ ತೂಪರಮಾಲಬೇತ ಪ್ರಜಾಪತಿ
ಮೇವ ಸ್ವೇನ ಭಾಗಧೇಯೇ ನೋಪಧಾವತಿ
ಸ ಏವಾಸ್ಮೈ ಪ್ರಜಾಂ ಪಶೂನ್ ಪ್ರಜನಯತಿ||"

—ತೈ. ಸಂ ೨-೧, ೧-೪

'ಪ್ರಜಾಪತಿಯು ಪ್ರಜೆಗಳನ್ನು ಪಶುಗಳನ್ನು ಸೃಜಿಸಬಯಸಿ, ತ
ಒಡಲ ವಪೆಯನ್ನು ಒಗೆದು ತೆಗೆದು ಯಜ್ಞಾಗ್ನಿಯಲ್ಲಿ ಹೋಮ ಮಾ
ವನು. ಅದರಿಂದ ಆ ಬೆಂಕಿಯಲ್ಲಿ ಕೋಡಿಲ್ಲದ ಆಡು ಹುಟ್ಟಿವುದು. !
ಆಡಿನಿಂದ ಪ್ರಜರನ್ನು ಪಶುಗಳನ್ನು ಸೃಷ್ಟಿಸುವನು. ಅದರಿಂದಾಗಿ ಪ
ತಿಯನ್ನು ಹಸುಗಳನ್ನು ಬಯಸುವವರು ಕೋಡಿಲ್ಲದ ಆಡನ್ನು ಪಡೆ
ಬೇಕು. ಆ ಆಡು ಪ್ರಜರನ್ನು ಪಶುಗಳನ್ನು ಒದಗಿಸಬಲ್ಲುದು.'

ಇದು ಅರ್ಥವಾದದ ಉದ್ದೇಶವಂತೆ ! ಇದನ್ನು ನಂಬಲಾಗುತ್ತದೆಯೆ
ನರಮಾಂಸವನ್ನು ತಿನ್ನಬಯಸಿದವರು ಹೂಡಿದ ಕೂಟವಿದು; ಹಂಚಿ
ಯಿದು. ಈ ರೀತಿ ಯಜ್ಞಗಳು ಅಪಾಮಾರ್ಗದಲ್ಲಿ ಹೆಜ್ಜೆ ಹಾಕಿದ್ದವು. ಇ
ನ್ನೆಲ್ಲ ವಿರೋಧಿಸಿದನು ವೀರಭದ್ರದೇವನು. ಮಾನವೀಯತೆಗೆ ವಿರೋ
ವಾದುದನ್ನೆಲ್ಲ ನಿಲ್ಲಿಸುವನು. ಹೀಗೆಲ್ಲ ಆಡಿ ಮಾಡುವವರು ಆರ್ಯರೆ
ಬಲ್ಲರೆ? ದಿಟಕ್ಕೂ ಇಂಥವರೇ ಅನಾರ್ಯರಲ್ಲವೆ ? ಇದು ಮಾನವೀಯತೆ
ಪೂರ್ಣಾಹುತಿಯಲ್ಲವೆ ?

ಈ ಕ್ರೂರ ಕರ್ಮಕಾಂಡವನ್ನು ವಿರೋಧಿಸಿ ವಿರೋಧಿಸಿ ಧರ್ಮವನ್ನ
ಬೋಧಿಸಿದನು ವೀರಭದ್ರನು. ಭದ್ರಕ್ರಿಯೆಗಳನ್ನು ಮಾಡಲು ಪ್ರೇರೇಪಿ
ದನು.

ಸೋಮರಸಪಾನ ಮಾಡದೆ ಯಜ್ಞಗಳನ್ನು ಮಾಡುತ್ತಿರಲಿಲ್ಲ.ಯಾಜ್ಞಿಕರ ದುರ್ವ್ಯಸನಗಳಲ್ಲಿ ಇದೊಂದು ದಿನಕ್ಕೆ ಮೂರು ವೇಳೆ ಕುಡಿಯುತ್ತಿದ್ದರು. ನಿಶೆಯಲ್ಲಿ ತೂಗಾಡುತ್ತಿದ್ದರು. ಸೋಮರಸಕ್ಕೆ ಸವನ ಎಂದು ಕರೆಯುತ್ತಿದ್ದರು. ಈಗಿನವರು ಹಾಸಿಗೆ ಟೀ ಕಾಫಿ ಕುಡಿದಂತೆ ಅವರು ಪ್ರಾತಃ ಸವನವನ್ನು ಕುಡಿಯುತ್ತಿದ್ದರು. ಬಳಿಕ ಮಧ್ಯಾಹ್ನ ಕುಡಿಯುವುದಕ್ಕೆ ಮಾಧ್ಯಂದಿನ ಸವನವೆಂದು, ಸಂಜೆ ಕುಡಿಯುವುದಕ್ಕೆ ತೃತೀಯ ಸವನವೆಂದು ಹೆಸರುಗಳು. ಇದನ್ನು ತಯಾರಿಸುವವರು ಹೆಂಗಸರು. ಋತ್ವಿಕ್‌ರು ಇಂದ್ರಾದಿದೇವತೆಗಳು ಯಜಮಾನ ಎಲ್ಲರೂ ಕುಡಿಯುತ್ತಿದ್ದರು. ಅದರಲ್ಲಿ ಹಾಲು ಮೊಸರು ಹಿಟ್ಟು ಬೆರಸಿ, ಪರಿವಿಡಿದು ಗವಾಶಿರ, ದಧ್ಯಾಶಿರ, ಯವಾಶಿರ ಎಂದು ಹೆಸರಿಟ್ಟು ಕುಡಿಯುತ್ತಿದ್ದರು. ಇಂದ್ರನಿಗೆ ಮಾತ್ರ ಹಾಲು ಮೊಸರು ಹಿಟ್ಟುಗಳನ್ನು ಬೆರಸದೆ ಕುಡಿಸುತ್ತಿದ್ದರು. ಉನ್ಮಾದದಲ್ಲಿರುತ್ತಿದ್ದರು. ಹಾಗಿರುವಾಗ ರಸವನ್ನು ಅರೆವ ಚಚ್ಚುವ ಕಲ್ಲು ಗುಂಡುಗಳನ್ನು ಪ್ರಾರ್ಥಿಸುತ್ತಿದ್ದರು. ಇವೂ ಅವರ ದೇವತೆಗಳು,

"ಅಪಹತ ರಕ್ಷಸೋ ಭಂಗುರಾವತಃ
ಸ್ಕಭಾಯತ ನಿರ್‌ಋತಿಂ, ಸೇಧತಾಮತಿಂ |
ಆ ನೋ ರಯಿಂ ಸರ್ವವೀರಂ ಸುನೋತನ
ದೇವಾವ್ಯಂ ಭರತ ಶ್ಲೋಕ ಮದ್ರಯಃ || ೪ ||
—ಋ. ತೈ. ಸಂಹಿತೆ

'ಓ ಕಲ್ಲುಗಳೆ, ಕರ್ಮಕ್ಕೆ ವಿಘ್ನವನ್ನೊಡ್ಡುವ ರಕ್ಷಸರನ್ನು ಕೊಲ್ಲಿರಿ. ನಾಶಮಾಡುವ ನಿಕೃಷ್ಟ ದೇವತೆಗಳನ್ನು ದೂರ ಓಡಿಸಿರಿ, ದುಷ್ಟರನ್ನು ತಡೆಯಿರಿ. ನಮಗೆ ವೀರ ಸಂತತಿಯನ್ನು ಸಂಪತ್ತನ್ನು ದಯಪಾಲಿಸಿರಿ. ದೇವತೆಗಳನ್ನು ಸಂತೋಷಪಡಿಸುವ ಸ್ತೋತ್ರವನ್ನು ಸಂಪಾದಿಸಿರಿ.

ಇದು ಯಾಜ್ಞಿಕರ ಆರ್ಯರ ಪ್ರಾರ್ಥನೆ ಇಂತಹವುಅನೇಕ ಋಕ್ಕುಗಳಿವೆ. ಸೋಮರಸವನ್ನು ಅರೆವ ಗುಂಡುಗಲ್ಲುಗಳನ್ನು ಹೀಗೆ ಪ್ರಾರ್ಥಿಸಬೇಕಾದರೆ ಅವರು ಮತ್ತಮತಿಗಳೆ ಆಗಿರಬೇಕಲ್ಲವೆ? ಯಜ್ಞದ ನೆಪದಲ್ಲಿ ಕುಡಿವ

ತಿನ್ನುವ ಮತ್ತೋಕ್ತಿಗಳನ್ನಾಡುವ ದುರ್ವರ್ತನಗಳನ್ನು ನಿರೋಧಿಸುವವರು ರಕ್ಷಸರು ನಿಕೃಷ್ಟರು ನೀಚಮತಿಗಳು ಎಂದು ಕರೆವುದನ್ನು ಕಂಡರೆ ನಗು ಬಾರದಿರದು. ತಮ್ಮ ಸ್ವಭಾವಗಳನ್ನು ದುರಾಚಾರಗಳನ್ನು ದುರ್ಗುಣಗಳನ್ನು ಇನ್ನೊಬ್ಬರ ಮೇಲೆ ಹೊರಿಸುವುದು ಕುಡುಕರ ಸ್ವಭಾವ ತಾನೆ ?

ಈ ಮಂತ್ರದಲ್ಲಿ ಬರುವ 'ರಕ್ಷಸ' ಪದ ಗಮನಾರ್ಹವಾದುದು. ಯಜ್ಞಕ್ರಾಂತಿಕಾರರು ನಿಜವಾಗಿ ರಕ್ಷಸ್‌ರೆ ! ಅಂದರೆ ಕಾಪಾಡುವವರು. ಅವರು ರಾಕ್ಷಸರಲ್ಲ ಇತ್ತೀಚಿಗೆ ರಾ ಎಂದು ದೀರ್ಘವಾಗಿದೆ. ಮೊದಲು ಧ್ರಾವಿಡ ರಾಜರನ್ನು ರಕ್ಷಕರೆಂದು ಕರೆಯುತ್ತಿದ್ದರು. ಇದಕ್ಕೆ ಈ ಮಂತ್ರದ 'ರಕ್ಷಸ್'ಶಬ್ದವೆ ಸಾಕ್ಷಿ

"ದಿವಶ್ಚಿದಾ ವೋಽಮವತ್ತರೇಭ್ಯೋ ವಿಭ್ವನಾ ಚಿದಾಶ್ವಪಸ್ತರೇಭ್ಯಃ। ವಾಯೋಶ್ಚಿದಾ ಸೋಮರಭಸ್ತರೇ ಭ್ಯೋಽಗ್ನೇ ಶ್ಚಿದರ್ಚ ಪಿತುಕೃತ್ತರೇಭ್ಯಃ" ॥ ೫ ॥

'ಓ ಕಲ್ಲುಗಳೆ, ನೀವು ಭಾನುವಿಗಿಂತ ಬಲವುಳ್ಳವರು, ವಿಭ್ವನಿಗಿಂತ ಬೇಗ ಕೆಲಸ ಮಾಡುವವರು, ಗಾಳಿಗಿಂತ ವೇಗವಾಗಿ ಸೋಮರಸವನ್ನು ಹಿಂಡುವವರು, ಬೆಂಕಿಗಿಂತ ಮಿಗಿಲಾಗಿ ಅನ್ನವನ್ನು ಸಾಧಿಸತಕ್ಕವರು ಇದರಿಂದ ನಿಮ್ಮನ್ನು ಈ ಅಧ್ವರ್ಯುಗಳು ಹೊಗಳುತ್ತಿದ್ದಾರೆ.' ಅತಿಶಯವಾಗಿ ಕುಡಿದ ಅಧ್ವರ್ಯುಗಳೂ ಸಹ ಸೋಮಲತೆಯ ಸೊಪ್ಪನ್ನು ಕುಟ್ಟುವ ಕಲ್ಲು ಗುಂಡುಗಳನ್ನು ದೇವತೆಗಳೆಂದು ಭ್ರಮಿಸಿಯೋ ಭಾವಿಸಿಯೋ ಸ್ತುತಿಸುತ್ತಿದ್ದರಂತೆ !

"ಏತೇ ನರಃ ಸ್ವಪಸೋ ಅಭೂತನಯ
ಇಂದ್ರಾಯ ಸುನುಥ ಸೋಮಮದ್ರಯಃ ।
ವಾಮಂ ವಾಮಂ ವೋ ದಿವ್ಯಾಯ ಧಾಮ್ನೇ
ವಸು ವಸು ವಃ ಪಾರ್ಥಿವಾಯ ಸುನ್ವತೇ ॥ ೮ ॥

'ಕರ್ಮ ಕರ್ತೃಗಳಾದ ಕಲ್ಲುಗಳೆ, ನೀವು ಉತ್ತಮ ಕರ್ಮಪರರು. ಇಂದ್ರನಿಗಾಗಿ ಸೋಮರಸವನ್ನು ಕರೆವವರು. ನೀವು ಅತ್ಯವಶ್ಯವಾ

ಜೇಕಾಗುವ ಜೇಕೆನಿಸುವ ಧನವನ್ನು ದೇವಲೋಕದ ತೇಜಸ್ಸಿಗಾಗಿ ಉತ್ಪನ್ನ ಮಾಡಿರಿ. ಮತ್ತು ನೀವು ಈ ಭೂಮಿಯಲ್ಲಿ ಸೋಮರಸವನ್ನು ಹಿಂಡುವ ಯಜಮಾನನಿಗೆ ಎಲ್ಲ ಸಿರಿಯನ್ನು ಕೊಡಿರಿ.'

ಈ ಪ್ರಾರ್ಥನೆಗಳಲ್ಲಿರುವ ವಾಸ್ತವಿಕತೆ ಏನೆಂಬುದನ್ನು ಓದುಗರು ಅರಿಯಬೇಕು. ಈ ಯಜ್ಞ ಮಾಡುವ ಜನಕ್ಕೆ ಯಜ್ಞಗಳಿಗಿಂತ ಯಜ್ಞ ದೇವತೆಗಳಿಗಿಂತ ಋತ್ವಿಕ್ಕರಿಗಿಂತ ಸುರೆಯನ್ನು ತಯಾರಿಸುವ ಕಲ್ಲು ಗುಂಡು ಗಳೇ ಹೆಚ್ಚಿನ ಆರಾಧ್ಯ ದೇವರುಗಳಾಗಿರುವವು. ದೇವತೆಗಳಿಗೂ ಮರುತ್ತ ರಿಗೂ ಸೋಮ ಪಾನ ಮಾಡಿಸಿ, ಸ್ತುತಿಸಿ ಅವರಿಂದ ಹಣವನ್ನು ಸಂಪಾದಿಸು ವುದು- ಅವರ ಕೆಲಸ.

"ಸುಭಗಾನ್ನೋ ದೇವಾಃ ಕೃಣುತಾ ಸುರತ್ನಾನ್ ಅಸ್ಮಾನ್
ಸ್ತೋತೄನ್ಮರುತೋ ವಾವೃಧಾನಾಃ ।
ಅಧಿ ಸ್ತೋತ್ರಸ್ಯ ಸಖ್ಯಸ್ಯ ಗಾತ ಸನಾದ್ಧಿ
ವೋ ರತ್ನಧೇಯಾನಿ ಸಂತಿ ॥ ೮ ॥

'ಸುಭಗರೂ ದೇವಸ್ವರೂಪರೂ ಆದ ಮರುತ್ತರೆ, ಸ್ತುತಿಯಿಂದ ಸಂತೋಷಗೊಳ್ಳುವ ನೀವು ಸ್ತುತಿಕರ್ತರಾದ ನಮ್ಮನ್ನು ಅಪ್ರತಿಮ ಧನ ಸಂಪತ್ತುಳ್ಳವರನ್ನಾಗಿಸಿರಿ; ನಿಮಗೆ ಪ್ರಿಯರಾದ ನಮ್ಮ ಸ್ತುತಿಗೆ ಅಭಿ- ಮುಖರಾಗಿ ಬನ್ನಿರಿ. ನಿಮ್ಮಲ್ಲಿ ನಮಗೆ ಕೊಡಬೇಕಾದ ಸಂಪತ್ತುಗಳು ಬಹುಕಾಲದಿಂದಲೂ ಇವೆ.' ಇದು ಜನ್ನಿಗರ ಹೊನ್ನಿನಾಸೆ.

ಇಂದ್ರ ಇಂದ್ರಾಣಿ ಇವರ ಮಗ ವೃಷಾಕಪಿ ಇವರೆಲ್ಲರೂ ಯಜ್ಞದಲ್ಲಿ ಸೋಮರಸವನ್ನು ಕುಡಿದು ಜಗಳಾಡುವರು. ತಾಯಿಗೂ ಮಗನಿಗೂ ಆಗುತ್ತಿರಲಿಲ್ಲ. ತಂದೆಗೆ ಮಗನ ಮೇಲೆ ಮಮಕಾರ ಹೆಚ್ಚು ಇಂದ್ರಾಣಿ ಇಂದ್ರನ ಹೆಂಡತಿ ಯಜ್ಞಗಳು ನಡೆವಲ್ಲಿಗೆ ಹೋಗಿ ಕುಡಿಯುವಳು. ಮಗನು ತಂದೆಯ ಕುಡಿತಕ್ಕೆ ನೆರವಾಗಿದ್ದನು. ಹಾಲು ಮೊಸರು ಹಿಟ್ಟು ಸೇರದ ಸೋಮರಸವನ್ನೆ ಇವರು ಕುಡಿದು ಹೆಚ್ಚು ಉನ್ಮಾದದಲ್ಲಿರುತ್ತಿದ್ದರು.

ಮಾಂಸ ಭಕ್ಷಕರು ರಾಜ ಕುಟುಂಬದವರೆ ಹೀಗಿದ್ದ ಬಳಿಕ ಉಳಿಷ್ವ
ಮಾತೇನು? ಇವರು ನಿತ್ಯ ೧೫-೨೦ ವೃಷಭಗಳ ಅಂದರೆ ಹೋರಿಗ
ಬೇಯಿಸಿದ ಮಾಂಸವನ್ನು ತಿಂದು ಸೋಮರಸವನ್ನು ಮೇಲೆ ಕುಡಿಯುತ್ತಿ
ರಂತೆ! ಇಂದ್ರನು ತಿಂದು ಕುಡಿದು ಗೂಳಿಯಂತೆ ಜಾರಿಣಿಯರ ನಡುವೆ ಇ
ತ್ತಿದ್ದನಂತೆ! ಗಂಡ ಹೆಂಡರಲ್ಲಿ ಲೈಂಗಿಕ ಚರ್ಚೆ ನಡೆಯುತ್ತಿದ್ದಿತು. ಮಾ
ಸೋಮರಸಗಳ ಮಾತು ನಡೆಯುತ್ತಿತ್ತು. ಇವರು ಆರ್ಯರು, ಇವರು ಪಶು
ಗಳು ಎಂದು ವಿಂಗಡಿಸಿ ಭಿನ್ನದೃಷ್ಟಿಯಿಂದ ಕಾಣುತ್ತಿದ್ದರು. ಹೆಚ್ಚು
ತಿಂದು ಕುಡಿದು ಬಿದ್ದವರನ್ನು ಎಬ್ಬಿಸಿ ಹೆಂಡತಿ ಮನೆಗೆ ಕರೆದೊಯ್ಯುತ್ತಿ
ದ್ದಳು.

ಮನುವಿನ ಮಗಳಾದ 'ಪರ್ಶು' ಎಂಬವಳು ಒಂದು ಸಲಕ್ಕೆ ಇಪ್ಪತ್ತು
ಮಕ್ಕಳನ್ನು ಹಡೆದಳಂತೆ! ಹೀಗಿರುವಾಗ ಮನುವಂಶ ಬೆಳೆಯದೇನು?

ಇಂದ್ರ ಮತ್ತು ಆತನ ಹೆಂಡತಿ ಇಂದ್ರಾಣಿ ಇವರ ಈ ಬಗೆಯ ಸಂಭಾ
ಸೂಕ್ತಗಳನ್ನು ಸ್ನಾನದ ಸಮಯದಲ್ಲಿ ಉಳಿದವರು ಪಠಿಸುತ್ತಿದ್ದರಂತೆ
ಹೆಂಗಸರು ಹುಡುಗಿಯರು ಪಠಿಸಿದರೆ ಸೌಭಾಗ್ಯವನ್ನು ಪತಿ ಪುತ್ರರನ್ನು
ಪಡೆಯುವರಂತೆ!

"ಉಷ್ಣೋ ಹಿ ಮೇ ಪಂಚದಶ ಸಾಕಂ ಪಚಂತಿ ವಿಂಶತಿಂ |
ಉತಾಹ ಮದ್ಮಿ ಪೀವ ಇದು ಭಾ ಕುಕ್ಷೀ ಪೃಣಂತಿ ಮೇ
ವಿಶ್ವಸ್ಮಾದಿಂದ್ರ ಉತ್ತರಃ ||೧೪||"

ಇದು ಋುಗ್ವೇದ ಸಂಹಿತೆಯ ಎಂಟನೆಯ ಅಷ್ಟಕದ ನಾಲ್ಕನೆಯ
ಅಧ್ಯಾಯದ ಸೂಕ್ತ. ಇದರ ಅರ್ಥ ಹೀಗಿದೆ: 'ಯಜ್ಞಕರ್ತರು ನನಗಾಗಿ
(ಇಂದ್ರನಿಗಾಗಿ) ಹದಿನಯ್ದು ಮತ್ತು ಇಪ್ಪತ್ತು ಎತ್ತುಗಳನ್ನು ಅಡುಗೆ
ಮಾಡಿ ಅರ್ಪಿಸುತ್ತಾರೆ. ನಾನು ಅವುಗಳನ್ನು ತಿಂದು ಪುಷ್ಟನಾಗುತ್ತೇನೆ
ಅವು ನನ್ನ ಒಡಲಿನ ಎರಡು ಪಕ್ಕಗಳನ್ನೂ ತುಂಬುತ್ತವೆ. ಇಂದ್ರನಾದ
ನಾನು ವಿಶ್ವೋತ್ತರನು.' ಇದು ಆರ್ಯರು ಮಾಡುವ ಮಾಂಸಭಕ್ಷಣದ ಅತಿ-
ರೇಕವನ್ನು ಸ್ಪಷ್ಟವಾಗಿ ಸಾರಿದೆ.

ಉಭೋ ಭಯಾವಿನ್ನುಪ ಧೇಹಿ ದಂಷ್ಟ್ರಾ ಹಿಂಸ್ರಃ
ಶಿಶಾನೋऽವರಂ ಪರಂ ಚ |
ಉತಾಂತರಿಕ್ಷೇ ಪರಿ ಯಾಹಿ ರಾಜನ್ ಜಂಭೈಃ
ಸಂ ಧೇಹ್ಯಭಿ ಯಾತುಧಾನಾನ್ ||೩||

—ಋಗ್ವೇದ ಸಂಹಿತೆ.

'ಎರಡು ದವಡೆಯುಳ್ಳ ಅಗ್ನಿಯೆ, ನೀನು ಹಿಂಸಕನು. ನಿನ್ನ ದವಡೆಗಳೆರಡನ್ನು ಹರಿತಗೊಳಿಸು; ನಮ್ಮ ವೈರಿಗಳ ಮೇಲೆ ಪ್ರಯೋಗಿಸು; ಸಂಹರಿಸು, ಈ ಲೋಕವನ್ನು ಪರಲೋಕವನ್ನು ಸಂರಕ್ಷಿಸು. ಹೇ ರಾಜನೆ, ಅಂತರಿಕ್ಷದಲ್ಲಿರುವ ಅಸುರರನ್ನು ಎದುರಿಸು. ಅವರನ್ನು ತೀಕ್ಷ್ಣವಾದ ನಿನ್ನ ಹಲ್ಲುಗಳಿಂದ ಕೊಲ್ಲು, ಕಬಳಿಸು

ಇದು ಆರ್ಯರೆಂದನಿಸಿಕೊಳ್ಳುವ ಅನಾರ್ಯರ ಪ್ರಾರ್ಥನೆ. ಇದರಿಂದ ಅಗ್ನಿಯೂ ಒಬ್ಬ ಅವರೊಳಗಿನವನು. ಅವನಿಗೂ ಆಕೃತಿಯಿತ್ತು. ಕೋರೆದವಡೆಗಳಿದ್ದವು. ಕ್ರೂರನಾಗಿದ್ದನು. ಹಿಂಸಕನಾಗಿದ್ದನು. ನರಮಾಂಸ ಭಕ್ಷಕನಾಗಿದ್ದನು. ಎಂಬುದು ಸ್ಪಷ್ಟವಾಗುತ್ತದೆ.

ವೀರಗಣರು ಕ್ಷೀರಪಾನಿಗಳಾಗಿದ್ದರು. ಅದರಲ್ಲಿಯೂ ಗೋಕ್ಷೀರವನ್ನೆ ಪಾನಮಾಡುವ ಸಾತ್ವಿಕರು, ಇದನ್ನೂ ಸಹ ಸೋಮರಸಪಾಯಿಗಳಾದ ಆರ್ಯರು ಸಹಿಸುತ್ತಿರಲಿಲ್ಲ; ಕೇಳಿ:

"ಸಂವತ್ಸರೀಣಂ ಪಯ ಉಸ್ರಿಯಾಯಾಸ್ತಸ್ಯ
ಮಾಶೀದ್ಯಾತುಧಾನೋ ನೃಚಕ್ಷಃ |
ಪೀಯೂಷಮಗ್ನೇ ಯತಮಸ್ತಿತೃಪ್ಸಾತ್ತಂ
ಪ್ರತ್ಯಂಚಮರ್ಚ್ಚಿಷಾ ವಿಧ್ಯವರ್ಮನ್ ||೧೭||"

'ನರನನ್ನು ನೋಡಗಲಿತ ಅಗ್ನಿಯೆ, ಕರೆಯುವ ಕಪಿಲೆಯ ವರುಷದ ಹಾಲನ್ನು ಯಾತುಧಾನನು (ರಕ್ಷಸನು) ಕುಡಿಯದಂತಾಗಲಿ, ಅಸುರರಲ್ಲಿ ಯಾರಾದರು ಗೋವಿನ ಕ್ಷೀರದಿಂದ ತೃಪ್ತಿಯನ್ನು ಹೊಂದ ಬಯಸಿದರೆ ಕುಡಿ

ಯದಂತೆಸಗು. ಎದುರು ಬಿದ್ದರೆ ಆತನನ್ನು ನಿನ್ನ ತೇಜಸ್ಸಿನಿಂದ ಮಸ್ತ
ದಲ್ಲಿ ಹೊಡೆದು ಸಾಯಿಸು.'

ಆಕಳ ಹಾಲನ್ನು ಆರ್ಯರೆ ಕುಡಿಯಬೇಕು. ಬೇರೆಯವರು ಕುಡಿ
ಬಾರದು; ಬೂದುಗುಂಬಳವನ್ನು ಅವರೇ ತಿನಬೇಕು; ಕೃಷಿಕರು ಬೇ
ಯವರು ತಿನ್ನಬಾರದು. ತಿಂದರೆ ನರಕವಂತೆ! ಈ ವಾಡಿಕೆ ಈಗಲೂ
ಇದೆ. ಇಂತಹ ಅನ್ಯಾಯಗಳನ್ನು ಶೋಷಣೆಯನ್ನು ಪ್ರತಿಭಟಿಸಿದನು ವೀ
ಭದ್ರದೇವನು.

ಯುಗ ಯುಗಾಂತರಗಳ ಕ್ರಾಂತಿಯಲ್ಲಿ ವೀರೇಶನ ಯಜ್ಞಕ್ರಾಂ
ಮಾನವೇತಿಹಾಸದಲ್ಲಿ ಮೊತ್ತ ಮೊದಲನೆಯ ಕ್ರಾಂತಿ; ಮರೆಯದ ಕ್ರಾಂತಿ.
ಯಶಸ್ವಿಯಾಗಿ ಸಾಧಿಸಿದ ಮಹಾಕ್ರಾಂತಿ. ಕ್ರಾಂತಿ ಪಥದ ಮೇಲೆ ಅದು
ಅತ್ಯುಜ್ವಲ ಪ್ರಭಾವವನ್ನು ಬೀರಿದೆ; ಪ್ರಕಾಶವನ್ನು ಬೆಳಗಿದೆ. ಭಾರತದ
ಪುರಾತನ ಕ್ರಾಂತಿಯ ಸುವರ್ಣ ಪುಟಗಳನ್ನು ತೆರೆದರೆ ಸಿಕ್ಕುವ ಆದರ್ಶ
ಪ್ರಥಮ ಶೀಮಾಕ್ರಾಂತಿ ವೀರೇಶನದೆ! ಅಂದಿನ ಆ ಸಾಮಾಜಿಕ ಸಾಂಸ್ಕೃ
ತಿಕ ಧಾರ್ಮಿಕ ಕ್ಷೇತ್ರದಲ್ಲಿ ವೀರೇಶನು ಸಾಧಿಸಿದ ಕ್ರಾಂತಿ ಪ್ರಗತಿಗಳು ಅಪಾ
ವಾದವು. ಭಾರತದ ಚರಿತೆಯಲ್ಲಿ ವೀರೇಶನ ಯಾಜ್ಞಿಕಕ್ರಾಂತಿ ಸರ್ವಾದ್ಯ
ವಾಸುದು. ಆತನ ಆ ಪರಂಪರೆ ಅಂದಿಗೆ ನಿಲ್ಲಲಿಲ್ಲ. ಅದು ಹಾಗೆಯೆ
ಮುಂದುವರಿಯಿತು. ರಾಮ, ಬುದ್ಧರ ಕಾಲದವರೆಗೆ ಬೆಳಗಿತು. ಬುದ್ಧ
ದೇವನ ಕ್ರಾಂತಿಗೂ ಆದರ್ಶವಾಗಿ ನಿಂತಿತು. ಬಸವಣ್ಣನವರ ಉತ್ಕ್ರಾಂತಿಗು
ಆಧ್ಯರವಾಯಿತು. ಇಂದಿಗೂ ಆಗಿದೆ. ಅಂದಿಂದಿಗೂ ಉಜ್ವಲವಾಗಿದೆ.
ಊರೂರಿಗೂ ಕ್ಷೇತ್ರ ಕ್ಷೇತ್ರಕ್ಕೂ ವೀರೇಶನ ದೇವಮಂದಿರಗಳಿರುವವು
ಅಗ್ನಿ ಕುಂಡಗಳು ಜರಗುವವು. ಅಗ್ನಿಯನ್ನು ಮೆಟ್ಟಿ ದಾಟುವ ವೀರಕಾರ್ಯ
ಆಗಾಗ ನಡೆಯುವವು. ವೀರೇಶನ ವೀರಗಾನವನ್ನು ವೀರನೃತ್ಯವನ್ನು
ಮಾಡುವರು. ಆತನ ಆ ಅಸಾಧಾರಣ ಸಾಮರ್ಥ್ಯವನ್ನು ಅಸಾಮಾನ್ಯ ಗುಣ
ಗಳನ್ನು ಉಗ್ಗಡಿಸುವರು.

ವೀರಭದ್ರನು ಅಪ್ರತಿಹತ ವೀರನು, ಅಖಂಡ ವಿಜಯವಂತನು,
ವಿವೇಕವಂತನು, ವಿಶಿಷ್ಟ ಆಯುಧವಂತನು, ಓಜ ತೇಜವುಳ್ಳವನು, ವೀ

ಗಣ ವಿಶಿಷ್ಟನು, ಮಿಗಿಲಾಗಿ ಕರುಣಾಶಾಲಿಯೂ ಆಗಿದ್ದನೆಂದು ಪುರಾಣಗಳು ಪ್ರಶಂಸಿಸುತ್ತವೆ. ದಕ್ಷಬ್ರಹ್ಮನ ಮಾತಂತಿರಲಿ, ಇಂದ್ರ ಉಪೇಂದ್ರರು ಆತನ ಮುಂದೆ ನಿಲ್ಲರು. ಆತನ ಭುಜ ಬಲ ಅಂತಹದು. ಆತನ ಆ ಹಸ್ತಾಯುಧಗಳು ಅಂತಹವು. ದುರ್ಜನ ದುಷ್ಕಾರ್ಯಗಳ ದಮನದಲ್ಲಿ ಸಜ್ಜನ ಸತ್ಕಾರ್ಯಗಳ ಪೋಷಣದಲ್ಲಿ ಆತನನ್ನು ಸರಿಗಟ್ಟುವವರು ಬೇರೊಬ್ಬರಿಲ್ಲ. ವೀರ ಶ್ರೀಯಲ್ಲಿ ವೀರೇಶನನ್ನು ಮೀರುವವರಿಲ್ಲ. ಆತನದು ವಜ್ರದಂತಹ ಮೈ; ಹೂವಿನಂತಹ ಹೃದಯ ಅನ್ಯಾಯದ ಯಜ್ಞನಿರೋಧ ಕ್ರಾಂತಿಗೆ ನಾಂದಿಯನ್ನು ಹಾಡಿದ ಗೇಯಕಾರ.

ಶೈವಯಜ್ಞ ಅದೊಂದು ಜಡಕರ್ಮ ದಕ್ಷಾದಿ ದೇವಯಜ್ಞ ನಿಷಿದ್ಧ ಕರ್ಮ; ಹಿಂಸಾತ್ಮಕ ಕರ್ಮ. ಇವನ್ನು ನಿರೋಧಿಸಿ ಲಿಂಗಪೂಜಾರೂಪ ಯಜ್ಞವನ್ನು ವೀರ ಭದ್ರದೇವನು. ಪ್ರಚಾರಕ್ಕೆ ತರುವನು. ಲಿಂಗಪೂಜಾರೂಪಯಜ್ಞ ಜಡಕರ್ಮವಲ್ಲ; ನಿಷಿದ್ಧ ಕರ್ಮ ಮುನ್ನವೆ ಅಲ್ಲ. ಲಿಂಗಪೂಜೆಯಲ್ಲಿ ಉಪಯೋಗಿಸುವ ಧೂಪಾರ್ತಿಯೆ ಯಜ್ಞಕೊಂಡ ಧೂಪವನ್ನು ಹಾಕುವುದೆ ಹವ್ಯಕ್ರಿಯೆ ಇದಕ್ಕೆ ಹೊರತಾದ ಹವ್ಯಕ್ರಿಯೆಯನಾಚರಿಸರು.

"ಕೃತಯುಗ ಮೂವತ್ತೆರಡು ಲಕ್ಷವರುಷದಲ್ಲಿ ಹೋಮವನಿಕ್ಕುವಾಗ ಕುಂಜರನೆಂಬ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು. ತ್ರೇತಾ ಯುಗ ಹದಿನಾರು ಲಕ್ಷ ವರುಷದಲ್ಲಿ ಬ್ರಾಹ್ಮಣರು ಹೋಮವನಿಕ್ಕುವಾಗ ಮಹಿಷನೆಂಬ ಕರಿ ಎಮ್ಮೆಯ ಮಗನ ಕೊಂದು ಹೋಮನನಿಕ್ಕಿದರು. ದ್ವಾಪರ ಯುಗ ಎಂಟುಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ ಕುದುರೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು ಕಲಿಯುಗ ನಾಲ್ಕುಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ ಜಾತಿಯಾಡಿನ ಮಗ ಹೋತನ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು 'ಅಣೋರಣೀಯಾನ್ ಮಹತೋಮಹೀಯಾನ್' ಎಂದುದಾಗಿ ಸರ್ವಪ್ರಾಣಿದಯಾ ರಸವಿಲ್ಲದವರ ಉರಿಲಿಂಗಪೆದ್ದಿಗಳರಸ ಒಲ್ಲ ನವ್ವಾ!"

ಅಂದಿನ ಆ ಯಜ್ಞಕ್ರಾಂತಿ ಕಾಳವ್ವೆಯವರೆಗೂ ಹರಿದು ಬಂದಿದೆ. ಆನೆ ಕೋಣ ಕುದುರೆ ಕುರಿಗಳ ಕೊಲುವ ಯಾಜ್ಞಿಕರ ಆ ಆ ಯುಗದ

ಹಿಂಸಾ ಪ್ರವೃತ್ತಿಯನ್ನು ಎತ್ತಿ ಆಡಲಾಗಿದೆ. ಅಲ್ಲದೆ

"ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ
ಕುಲಜರೆಂದೆಂಬರು
ಶಿವಗೆ ಪಂಚಾಮೃತವ ಕರೆವ ಹಸುವ ತಿಂಬ ಮಾದಿಗ
ಕೀಳುಜಾತಿಯೆಂಬರು
ಅವರೆಂತು ಕೀಳುಜಾತಿಯಾದರು,
ಜಾತಿಗಳು ನೀವೇಕೆ ಕೀಳಾದಿರೋ ?........
ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ.

ಎಂದು ಅದೇ ಕಾಳವ್ವೆ ಗುರುದೇವಿ ಕೀಳಿ ಕ್ರಾಂತಿಕಹಳೆಯು ಊದಿದಾಳೆ.

——_—

೮ "ಕನ್ನಡದ ಮೂಲಪುರುಷ ಶ್ರೀ ವೀರಭದ್ರ".

'ಕನ್ನಡ' ಇದು ನಾಡು ನುಡಿಗಳೆರಡರ ಸಂಕೇತ ಇದರಿಂದಾಗಿ ಇದು ಒಂದು ಸಾಂಸ್ಕೃತಿಕ ವೈಶಿಷ್ಟ್ಯದಿಂದ ಕೂಡಿದೆ; ಪ್ರಾಚೀನವಾಗಿದೆ. ಪಂಚ ದ್ರಾವಿಡ ಭಾಷೆಗಳಲ್ಲಿ ಕನ್ನಡಕ್ಕೆ ಎರಡನೆಯ ಸ್ಥಾನ ಮೀಸಲಾಗಿದೆ.

ಮಾನವೀಯ ಜೀವನಕ್ಕೆ ನಾಡು-ನುಡಿಗಳು ಮಾಧ್ಯಮವಾಗಿವೆ. ಇವುಗಳ ಸಹಾಯವಿಲ್ಲದೆ ಜೀವನ ನಿರ್ವಹಣವಿಲ್ಲ. ನಾಡು ಸಗ್ಗವೆನಿಸಿದರೆ ನುಡಿ ಬ್ರಹ್ಮವೆನಿಸಿದೆ. ಒಂದು ಧೃತಿಯನ್ನು ತಂದು ಕೊಟ್ಟರೆ ಇನ್ನೊಂದು ದೀಪ್ತಿಯನ್ನುಂಟು ಮಾಡುತ್ತದೆ ಮಾನವ ವಿಕಾಸಕ್ಕೆ ನಾಡು-ನುಡಿಗಳೆರಡೂ ಆಧಾರವಾಗಿವೆ. ಇವೆರಡನ್ನೂ ಪ್ರತಿನಿಧಿಸುವ ಏಕೈಕ ಪದ ಕನ್ನಡ.

ಸಾಹಿತ್ಯಿಕ ಸನಾತನತೆ

ಕನ್ನಡಕ್ಕೆ ವೇದಕಾಲದಷ್ಟು ಪುರಾತನತೆಯಿದೆ. ಪ್ರಾದೇಶಿಕ ಹಾಗೂ ಸಾಹಿತ್ಯಿಕ ಸನಾತನತೆಯಿದೆ. ಇಂತಹ ಈ ನುಡಿಯ ನಿಚ್ಚಳವಾದ ತಿಳುವಳಿಕೆಯಾಗಬೇಕಾದರೆ ಇದರ ವಿಶ್ಲೇಷಣೆ ಅಗತ್ಯ ಕರ್‌ನಾಡು ಕರುನಾಡು, ಕಮ್ಮಿತುನಾಡು ಎಂದು ವಿಶ್ಲೇಷಿಸಿದ್ದಾರೆ. ಕರಿವಿಡಿಯ ಕಪ್ಪು ನಾಡು, ಎತ್ತರದ ನಾಡು, ಕಂಪಿನ ನಾಡು ಎಂದು ಅರ್ಥವಿಸಿದ್ದಾರೆ. ಹೀಗೆ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಬಿಚ್ಚಿದ್ದಾರೆ 'ಕರ್ಣೇ ಅಟತೀತಿ ಕರ್ಣಾಟ ಎಂದವರೂ ಉಂಟು 'ಕನ್ನಡ' ಪದಕ್ಕೆ ಇವು ಯಾವೂ ಸರಿಯಾದ ಬಿಚ್ಚುನುಡಿಗಳಲ್ಲ 'ಕನ್ನಾಡ' ಎಂಬುವರ ನಾಡು ಪದವನ್ನು ಉಳಿದರೆ ಮೊದಲಿನ 'ಕನ್'' ಎಂಬುದು ನಿಲ್ಲುವದು 'ಕನ್' ಎಂಬುದು ಜನಾಂಗ ವಾಚಕವೆಂದು ಹಲವರು ಹೇಳಿರುವುದುಂಟು ಕಣ್ಣರ ನಾಡೆಂದು ಪ್ರತಿಪಾದಿಸಿದ್ದುಂಟ ಇನ್ನುಳಿಯಿತು ಕಣ್ಣರೆಂದರೆ ಯಾರು ಎಂಬುದು ಇದನ್ನು ಮುಂದೆ ವಿವರಿಸಿ ಸೋಣ.

ಸಾಮಾನ್ಯವಾಗಿ ಎಲ್ಲ ಪ್ರಾಚೀನ ಪ್ರದೇಶಗಳ ಹೆಸರುಗಳು ಅಲ್ಲಲ್ಲಿಯ ಮೂಲ ಜನಾಂಗದಿಂದಲೇ ಬಂದವುಗಳೆಂದು ಬಿತ್ತರಿಸುತ್ತಾರೆ. ಈ ನಿಯತಿ

ಗನುಸರಿಸಿ ಕನ್ನಡವೂ ಒಂದು ಪ್ರಾಚೀನ ಪ್ರದೇಶವಾಗಿದೆ. ಇದರ ಕ್ಷ ಹೆಸರು ಇದರ ಮೂಲ ಜನಾಂಗದಿಂದಲೇ ಬಂದಿರಬೇಕೆಂದು ತಿಳಿದರೆ ತಪ್ಪಾಗಲಿಕ್ಕಿಲ್ಲ. ಮೂಲ ಜನಾಂಗಕ್ಕೆ ಮೂಲ ಪುರುಷನಾದವನೂ ಕಾರಣನಾಗುವುದು ಹೆಚ್ಚೇನಸಲ್ಲ

ತಮಿಳರು ತಮ್ಮ ನಾಡು ನುಡಿಗಳಿಗೆ ಅಗಸ್ತ್ಯನನ್ನು, ತೆಲುಗರು ತಮ್ಮ ನಾಡು ನುಡಿಗಳಿಗೆ ಕಣ್ವನನ್ನು ಮೂಲ ಪುರುಷರೆಂದು ಹೇಳುವಂತೆ ಕನ್ನಡಕ್ಕೂ ಒಬ್ಬ ಮೂಲಪುರುಷನಿರಬೇಕೆಂದು ಭಾವಿಸಿದರೆ ಆಶ್ಚರ್ಯವೇನಿಲ್ಲ ಕನ್ನಡಿಗರ ಮೂಲಪುರುಷ ಕನ್ನಡಿಗನಾದ ಶ್ರೀವೀರಭದ್ರನು. ಇವನೇ ಕನ್ನಡ ಮೂಲಪುರುಷನೆಂಬುದು ಮುಂದಿನ ವಿವರಣೆಯಿಂದ ವಿಶದವಾಗುತ್ತದೆ.

ವೀರಭದ್ರನ ಉಲ್ಲೇಖ

ದ್ರಾವಿಡರ ಮೂಲಪುರುಷರು ರುದ್ರ-ವೀರಭದ್ರರು. ವೀರಭದ್ರನು ರುದ್ರತನಯನು. ಶಿವನ ಸೇನಾನಿಯು, ಶಿವಾರಾಧಕನು, ಯಜ್ಞನಿರೋಧಕನು, ಹಿಂಸಾತ್ಮಕವಾದ, ಜೀವನಾವಶ್ಯಕವಾದ ಆಹಾರದ್ರವ್ಯ ವಿನಾಶಕವಾದ ಯಜ್ಞ ಯಾಗಾದಿಗಳು ನಡೆಯಕೂಡದೆಂದು ಪ್ರತಿ ಬಂಧಿಸಿದ ಪ್ರಾಚೀನ ಪ್ರಪ್ರಥಮ ಕ್ರಾಂತಿ ಪುರುಷನು ವೀರಭದ್ರನು. ವೇದಾಗಮಗಳಲ್ಲಿ ವೀರಭದ್ರನ ಉಲ್ಲೇಖವಿದೆ. ಈತನ ಕ್ರಾಂತಿಯಲ್ಲಿ ಭಾಗವಹಿಸಿದ ಈತನ ಅನುಯಾಯಿಗಳನ್ನೇ ರಾಕ್ಷಸರೆಂದು ಕರೆದು ಹೀಯಾಳಿಸಿಧರು.

ಅಚ್ಚ ಕನ್ನಡಿಗರು ವೀರಶೈವರೆಂದರೆ ತೆಗೆದು ಹಾಕುವ ಮಾತಲ್ಲ. ಪ್ರಾಚೀನ ಮತವಾದ ಶೈವದಲ್ಲಿ ವೀರಶೈವವು ವರಿಷ್ಟವಾಗಿದೆ. ಈ ವೀರಶೈವಕ್ಕೆ, ಈ ವೀರಶೈವರಿಗೆ ಮೂಲ ಪುರುಷನು. ವೀರಭದ್ರನು. ಕನ್ನಡಿಗರೆಂದರೂ ವೀರಶೈವರೆಂದರೂ ಒಂದೇ! ವೀರಶೈವರು ತಮನ್ನು ಕನ್ನಡಿಗರೆಂದೇ ಹೇಳಿಕೊಳ್ಳುತ್ತಾರೆ. ಇವರ ನುಡಿ ಕನ್ನಡ; ಇವರ ನಾಡು ಕನ್ನಡ. ಇದರಿಂದಾಗಿ ಇವರು ಕನ್ನಡಿಗರು.

ಕಂನಡಿಗ

'ಕನ್ನಡಿಗ' ಪದವು ಮತಸೂಚಕವೂ ಆಗಿದೆ. ಪರಾಶರಸ್ಮೃತಿಯಲ್ಲಿ

'ಕಂಮೆ, ಕಂನಡಿಗ, ಆಂಘ್ರ ದ್ರಾವಿಡರೆಂಬವರೆ ನಾಲ್ಕು ಜಾತಿಗಳು ಉಕ್ತವಾಗಿವೆ.' ಎಂದು ನಿಜಗುಣರು ತಮ್ಮ ವಿವೇಕ ಚಿಂತಾಮಣಿಯ ಪ್ರಥಮ ಪ್ರಕರಣದಲ್ಲಿ ಹೇಳಿದ್ದಾರೆ. ಆಂಧ್ರ, ದ್ರಾವಿಡ ಪದಗಳಂತೆ 'ಕಂನಡಿಗ' ಎಂಬುದೂ ಜನಾಂಗ ಸೂಚಕವೂ ಆಗಿದೆ ಎಂಬುದು ಗಮನಾರ್ಹವಾದುದು.

ಈ ಕಂನಡಿಗ ಅಥವಾ ಕನ್ನಡಿಗ ಪದೋತ್ಪತ್ತಿಗೆ ಮೂಲಪುರುಷ ಯಾರೆಂಬುದನ್ನು ಅರಿಯುವದೇ ಈ ಚಿಕ್ಕ ಬರಹದ ಪ್ರಯತ್ನವಾಗಿದೆ. ಕನ್ನಡದ ಐತಿಹಾಸಿಕ ಪ್ರಮಾಣದ ಕೊರತೆಯಿದೆ. ಆದರೂ ತೀರ ಕೊರತೆಯಿಲ್ಲ. ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ಪ್ರಾದೇಶಿಕವಾಗಿ, ಸಮಾಜಿಕವಾಗಿ ಇತಿಹಾಸದ ಬಗೆಗೆ ಆಗಷ್ಟು ಈಗಷ್ಟು ಸಂಶೋಧನೆಯ ಕಾರ್ಯವಾ-ಗಿದೆ. ಪ್ರಾಮುಖ್ಯ ಅಂಶಗಳ ಬಗೆಗೆ ಗಮನಾರ್ಹವಾಗಿ ಆಗಬೇಕಾದುದು ಬೇಕಾದಷ್ಟಿದೆ. ಕನ್ನಡದ ಬಗೆಗೂ ಕನ್ನಡಿಗರ ಬಗೆಗೂ ಈ ಮಾತು ಹೊರಗಲ್ಲ.

ಶಿವನು ಬಾಜಿಸಿದ ಡಮರುಗದ ಬಲಭಾಗದಿಂದ ಸಂಸ್ಕೃತವೂ ಎಡಭಾಗದಿಂದ ದ್ರಾವಿಡವೂ ಉತ್ಪತ್ತಿಯಾದವೆಂದು ಪುರಾತನ ತಮಿಳು ವೈಯಾಕರಣರ ಅಭಿಪ್ರಾಯ. ಆ ಶಿವನೇ ಸಂಸ್ಕೃತವನ್ನು ಪಾಣಿನಿಗೆ, ತಮಿಳನ್ನು ಅಗಸ್ತ್ಯನಿಗೆ ಬೋಧಿಸಿದನೆಂದು ಹೇಳುವರು.

ಕನ್ನಡದ ಅಧಿದೇವತೆ

ತಮಿಳು ಪ್ರಾಂತ್ಯಕ್ಕೆ ಸುಬ್ರಹ್ಮಣ್ಯನು ಅಧಿದೇವತೆ: ಕನ್ನಡಕ್ಕೆ ವೀರಭದ್ರನು ಅಧಿದೇವತೆಯಾಗಿದ್ದಾನೆ. ಕನ್ನಡ ನಾಡಿನಾದ್ಯಂತ ಆತನ ಬಹು ಪುರಾತನ ದೇವಾಲಯುಗಳಿವೆ ಆತನ ದೇವ ಮಂದಿರಗಳಿಲ್ಲದ ಪುಣ್ಯಕ್ಷೇತ್ರಗಳಿಲ್ಲ, ಪುಣ್ಯಾರಣ್ಯಗಳಿಲ್ಲ, ಪಳ್ಳಿ ಪಟ್ಟಣಗಳಿಲ್ಲ, ಕನ್ನಡಿಗರೆಲ್ಲರೂ ವೀರಭದ್ರನ ಭಕ್ತರು. ವೀರಭದ್ರನದೇ ಆದ ಒಂದು ಸಂಸ್ಕೃತಿ ಇದೆ; ಒಂದು ಸಾಹಿತ್ಯವಿದೆ. ಇಡೀ ದಕ್ಷಿಣ ಭಾರತವೇ ಈತನ ಸಂಸ್ಕೃತಿಗೆ ಒಳಗಾಗಿದೆ. ಹನುಮಂತ, ಶರಭ ಸಾಳ್ವ, ಮಡಿವಾಳ ಮಾಚಿ ತಂದೆ ಮಲ್ಲಯ್ಯ ಮೊದಲಾದವರು ವೀರಭದ್ರನ ಅವತಾರಗಳೆಂದು ಹೆಸರಾಗಿದ್ದಾರೆ, ಕನ್ನಡಿಗರೆನಿಸಿದ್ದಾರೆ.

ವೀರಭದ್ರನು ರುದ್ರನ್ನ ಕಣ್ಣಿನಿಂದ ಉದಯವಾದನೆಂದು ಹೇಳುವವು. ಆತನು ಕಣ್ಣುಳ್ಳವನಾಗಿದ್ದನು: ಕಣ್ಣೆಚ್ಚರಿಕೆಯಲ್ಲಿ ಅಡಿಯಿಡುತ್ತಿದ್ದನು. ಅದರಿಂದಾಗಿ ಆತನನ್ನು ಕನ್ನಡಿಗನೆಂದು ಕರೆಯುತ್ತಿದ್ದರು. ಇದಲ್ಲದೆ ಇನ್ನೂ ಒಂದು ಕಾರಣವಿದೆ.

.... ಕನ್ನಡಿಗರು ....

ಕಣ್ಣನ್ನು ಅಡಿಯಲ್ಲಿ ಮಾಡಿದಾತನು ಕಣ್ಣಡಿಕನು ಕಣ್ಣಅಡಿಕನು ಕಣ್ಣಡಿಕನು. ಹರಿಯ ನಯನವನ್ನು ಚರಣದಲ್ಲಿ ಧರಿಸಿದಾತನು ವೀರಭದ್ರನು. ದಕ್ಷನ ಯಜ್ಞಧ್ವಂಸ ಸಮಯದಲ್ಲಿ ಭಯಸಂತ್ರಸ್ತನಾದ ಹರಿಯು ವೀರಭದ್ರನನ್ನು ಒಲಿಸುವದಕ್ಕಾಗಿ ನಿತ್ಯ ಸಾವಿರ ತಾವರೆಗಳಿಂದ ಅರ್ಚಿಸುವ ವ್ರತವುಳ್ಳವನಾಗುವನು. ಒಮ್ಮೆ ಬಂದು ತಾವರೆ ಕಡಮೆಯಾಗುವದು, ಎಲ್ಲಿ ಹುಡುಕಿದರೂ ದೊರೆಯದಾಗುವದು. ಆಗ ಆತನು ತನ ಕಣ್ಣನ್ನೇ ಕಮಲವೆಂದು ಭಾವಿಸಿ ಕಿತ್ತು ವೀರಭದ್ರನ ಶ್ರೀ ಚರಣಕ್ಕೆ ಸಮರ್ಪಿಸುವನು ಅದನ್ನು ವೀರಭದ್ರನು ತನ್ನ ಚರಣಾಂಗುಷ್ಠದಲ್ಲಿ ಭಕ್ತನ ಭಕ್ತಿಯ ಕುರುಹಿಗಾಗಿ ಧರಿಸಿಕೊಳ್ಳುವನು. ಅದರಿಂದಾಗಿ ಆತನು 'ಕಣ್ಣಡಿಕ' ನೆಂದು ಹೆಸರಾಗುವನು ಆತನ ವಂಶೀಯರು ಕಣ್ಣಡಿಕರೆಂದೆನಿಸುವರು ಅವರೇ ಬರಬರುತ್ತ 'ಕನ್ನಡಿಗರು' ಎಂದೆನಿಸಿರಬೇಕು.

ಹೊಳೆವ ಜಡೆಯ ಮೇಲೆ ಎಳೆವೆಳಂದಿಗಳು,
ಫಣಿಮಣಿ ಕರ್ಣಕುಂಡಲದವ ನೋಡವ್ವ !
ರುಂಡಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳಿರವ್ವ!
ಗೋವಿಂದನ ನಯನ ಉಂಗುಟದ ಮೇಲಿಪ್ಪುದು
ಚನ್ನಮಲ್ಲಿಕಾರ್ಜುನ ದೇವನ ಚಿಹ್ನಕುರುಹವ್ವ!"

ಮಹಾದೇವಿಯಕ್ಕನ ಈ ಮಾತು ಮೇಲಿನ ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತಿದೆ. ರುಂಡ ಮಾಲೆಯ ಕೊರಳವ ವೀರಭದ್ರನಲ್ಲದೆ ಇನ್ನಾರು! ಆತನ ಉಂಗುಟದ ಮೇಲೆ ಗೋವಿಂದನ ನೇತ್ರವಿದೆಯಂತೆ ಅಂತೆಯೇ ವೀರಭದ್ರನು ಕಣ್ಣಡಿಕನು

— ಕಣ್ಣಡಿಕ-ಕನ್ನಡಿಗ —

ಕಣ್ಣಡಿಕ-ಕನ್ನಡಿಗ ಈ ಎರಡು ನುಡಿಗಳು ಹೆಚ್ಚು ಹಳೆಯ ವಾಕು-ಗಳು. ಕಣ್ಣಡಿಕ ಇತಿಹಾಸ ಬಹು ಪುರಾತನವಾದದ್ದು. ಕಣ್ಣಡಿಕತನವು ಪರಂಪರೆಯಾಗಿ ಕನ್ನಡಿಗರಲ್ಲಿ ಪ್ರವಹಿಸಿದೆ. ಯಾಗ ಕೋಲಾಹಲನಾದ ವೀರಭದ್ರನಿಂದ ಮೊದಲ್ಗೊಂಡು ಮಾಯಾ ಕೋಲಾಹಲನಾದ ಅಲ್ಲಮ ಪ್ರಭುವಿನವರೆಗೂ ಅಂಗಾಲ ಕಣ್ಣುಳ್ಳ ಕಣ್ಣಡಿಕರು ಆಗಿದ್ದಾರೆ.

"ಒಂದು ಲಿಂಗ ಸ್ವಲೀಲೆಯೇ ಸಹಸ್ರ ಚಿದ್ವಿಲಾಸವಾಗಿ
ಕಣ್ಣು ಅಡಿಯುಲ್ಲಿ ಧರಿಸಿದ ಕಣ್ಣಡಿಕರು;
ಹರಿನೇತ್ರ ಕಮಲಧರ ಪಾದ ಕಣ್ಣಡಿಕರೇ ಮಣಿಪಾದವಾಳ್ಕರು.
........ಕಣ್ಮಣಿ ಧರಿಸಿದ ಮಣಿಪಾದ ಪಟ್ಟವರ್ಧನರು
ಪಾದ ಪಟ್ಟಾಭಿಷೇಕ ವರ್ಧನರು"

ಅನಾದಿ ವೀರಶೈವ ಸಂಗ್ರಹ (ಪುಟ ೮೮–೮೯)

ಈ ಕೃತಿಯು ವೀರಭದ್ರನ ಮತ್ತು ಆತನ ಅನುಯಾಯಿಗಳ ಕಣ್ಣಡಿ-ಕತನವನ್ನು ಕೈಸಾರಿದೆ. 'ಕಣ್ಣಡಿಕರು' ಎಂಬ ಬಹುವಚನ ಪದ ಗಮ-ನಾರ್ಹವಾದುದು. ಪದ ವಿಶ್ಲೇಷಣವೂ ಪುರಾತನ ಪುರಾಣ ಕಥನ ಸೂಚನವೂ ಆಲೋಚನೀಯವಾಗಿದೆ.

"ಎರಡು ಕಣ್ಣುಳ್ಳರೆ ಚತುರ್ಭುಜನೆಂಬೆನು;
ಮೂರು ಕಣ್ಣುಳ್ಳರೆ ಮಹೇಶ್ವರನೆಂಬೆನು;
ಗುಹೇಶ್ವರ, ನಿಮ್ಮ ಶರಣಂಗೆ ಅಂಗಾಲು ಕಣ್ಣು ಮೂಡಿದರೆ
ನಿರುಪಮ ಅಲ್ಲಯ್ಯನೆಂಬೆನು,"

ಈ ವಚನದಿಂದ ಅಲ್ಲಯ್ಯನು ಅರ್ವಾಚೀನ ಕಣ್ಣಡಿಕನು ಎಂಬುದು ಎಗ್ಗಳವಾಗುತ್ತದೆ. ಇದು ಆತನದೇ ಆದ ವಚನ ಇದಕ್ಕೆ ಆತನೇ ಪ್ರಮಾಣ.

— ಕನ್ನಡ ಮೂಲ ಪುರುಷ —

ಕಣ್ಣಡಿಕನಾದ ವೀರಭದ್ರನೇ ಕನ್ನಡ ಜನಕನು; ಕನ್ನಡ ಮೂಲ ಪುರುಷನು; ಇವನಿಂದ ಕನ್ನಡನಾಡು ನುಡಿಗಳು ರೂಪಗೊಂಡವೆಂದು ಹೇಳಿದರೆ ಹೆಚ್ಚೆನಿಸಲಿಕ್ಕಿಲ್ಲ, ಊಹಿಸಿದರೆ ಉಪೇಕ್ಷಿಸತಕ್ಕುದಲ್ಲ.

ಈ ವಿಷಯವಾಗಿ ಮೈಸೂರಿನ ಪ್ರಸಿದ್ಧ ವೈದ್ಯರೂ ಹಾಗೂ ನಾಷನಲ್ ಫಾರ್ಮಸಿಯ ಮಾಲೀಕರೂ ಆದ ಡಾ॥ ಎಂ. ಅಣ್ಣಾಜಪ್ಪ ಅವರು 'ಅನಾದಿ ವೀರಶೈವ ಸಂಗ್ರಹ' ಎಂಬ ಗ್ರಂಥದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ.

"ವೀರಶೈವ ಕಣ್ಣಡಿಕರು ಮತ್ತು ಅವರ ಸನಾತನತ್ವ ಒಂದು ಲಿಂಗಸ್ಥಲೀಲೆಯೇ ಸಹಸ್ರ ಚಿದ್ವಿಲಾಸವಾಗಿ ಕಣ್ಣು ಅಡಿಯಲ್ಲಿ ಧರಿಸಿದ ಕಣ್ಣಡಿಕರು ಮಣಿಪಾದವಾಳ್ವರು" (ಪುಟ ೧೯)

ಈ 'ಕಣ್ಣಡಿಕರು' ಎಂಬ ಪದದಿಂದ ಕನ್ನಡಿಗರು ಎಂಬುದೂ, ಇವರ ಭಾಷೆಗೆ 'ಕನ್ನಡ' ಎಂಬ ಹೆಸರೂ ಬಂದಂತೆ ತೋರುತ್ತದೆ. ಕನ್ನಡವು ವೀರಶೈವರ ಬಳಕೆಯ ಮುಖ್ಯ ಭಾಷೆ ತೆಲುಗು ದೇಶದಲ್ಲಿ ತೆಲಗು ಭಾಷೆಯು ಹೆಚ್ಚು ಪ್ರಚಾರವಾದಾಗ್ಯೂ ಅಲ್ಲಿನ ವೀರಶೈವರು ಒಂದೆರಡಾದರೂ ಕನ್ನಡ ಹಾಡುಗಳನ್ನು ಕಲಿತಿರಬೇಕೆಂದು ಅವಶ್ಯಕತೆಯ ಆಕಾಂಕ್ಷೆಯುಳ್ಳವರು, (ಶಿವಾನುಭವ IV-೨-೩) ಶಿವಪೂಜೆ ಮಾಡುವಾಗ ಕನ್ನಡ ಭಾಷೆಯ ಮಂಗಳಾರತಿ ಒಂದನ್ನಾದರೂ ಹೇಳುತ್ತಾರೆಂದು ತಿಳಿದಿದೆ ಫಾದರ್ ಹರಾಸ್ ಅವರು "Karnataka and Mohenjo Daro" ಎಂಬ ಲೇಖನವನ್ನು (The Karnatak Historical Review IV-I) ಬರೆಯುತ್ತಾರೆ. "The People of Karnataka are apparently referred to in one of the real inscriptions of Mohenjo Daro as one of the oncient tribes of the land. The sign used to mention them in this (Here is a sign

like Triangle) it means "eye" Thereforc in the proto Dravidian language of Mohenjo Daro it will reads "Kan" "eye" "or" to see".

The small sign placed above it is the determinative of personality............... We finally complate the sign by ending two strokes in each side which are the determinatives of collectively................ The complete sign will read Kanarir "People who have eyes" (ಕಣ್ಣುಳ್ಳವರು) This evidently refers number of people called so. The arcient word Kannadigas by which the people of Modern Karnataka are mentioned seems to be but a Sanskrit modificeetion of Kananir." ಎಂದು ಹೇಳಿರುವರು ಈಗಿನ ಕರ್ನಾಟಕ ಜನರಿಗಾಗಿ ಉಪಯೋಗಿಸುವ 'ಕನ್ನಡಿಗರು' ಎಂಬ ಹಳೆಯ ಶಬ್ದವು 'ಕನನಿರ್' ಎಂಬುದರ ಸಂಸ್ಕೃತ (ತಿದ್ದಿದ) ರೂಪವಾಗಿ ತೋರುತ್ತದೆ.

- ಸೂಕ್ಷ್ಮ ಶೋಧನೆ -

ಇದರಿಂದ 'ಕನ್ನಡಿಗರು' ಎಂಬುದು ಹಳೆಯ ಶಬ್ದವೆಂದು ತೋರುತ್ತದೆ. ಇದು ಕನ್ನಡಿಗರು ಎಂದು ಬದಲಾಯಿಸಲ್ಪಡುವುದಕ್ಕೆ ಬಹಳ ವ್ಯತ್ಯಾಸವೇನೂ ಇಲ್ಲ. ಮೋಹೆಂಜೋದಾರೋ ಪಟ್ಟಣದಲ್ಲಿ ಕಣ್ಣಡಿಗರು ಇದ್ದರೇ ಎಂಬುದನ್ನು ಶೋಧಕರು ಸೂಕ್ಷ್ಮದೃಷ್ಟಿಯಿಂದ ಶೋಧಿಸಬೇಕಾಗಿದೆ. ದಕ್ಷಿಣ ಕರ್ನಾಟಕದ ಲಿಂಗವಂತರು ಪೂಜೆ ಮಾಡುವ ಲಿಂಗಗಳು ಮೊಹೆಂಜೋದಾರೋ ಪಟ್ಟಣದಲ್ಲಿ ಸಿಕ್ಕಿರುವುದಾಗಿ ಅದನ್ನು ಪ್ರಕಟಿಸಿದ ಡಾ|| ಮಾರ್ಷಲ್ ಅವರು ಬರೆದಿರುತ್ತಾರೆ. ಕಂಥೆಯ ಧರಿಸಿದ ಲಿಂಗವೊಂದು ಅಲ್ಲಿನ ವಸ್ತುಗಳೊಳಗೆ ಇರುವುದನ್ನು ಮೈಸೂರು ಶಾಸನದ ಇಲಾಖೆಯ ಕಾರ್ಯಾಲಯದಲ್ಲಿ ನೋಡಲಾಗಿದೆ.

ಇದರಿಂದ ವೀರಶೈವ ಪದ್ಧತಿಯು ಸನಾತನವಾದುದು ಎಂದು ಊಹಿ
ಸುವಂತಾಗಿದೆ.

'ಷಟವರ್ಧನ' ಎಂಬ ಪದವು ಜನಿವಾರವನ್ನು ಧರಿಸದಿರು
ಒರಿಯ ಲಿಂಗಧಾರಿಗಳಿಗಾಗಿ ದೇವರ ದಾಸಮಯ್ಯನವರ ಪುರಾಣದಲ್ಲಿ ಉಪ
ಯೋಗಿಸಲ್ಪಟ್ಟಿದೆ. ಬಸವಣ್ಣ ಪ್ರಧಾನಿ ಪಟವರ್ಧನ ಎಂಬ ಶಬ್ದಗಳ
ನ್ನೊಳಗೊಂಡಿರುವ ಒಂದು ಶಾಸನವೂ ಮೈಸೂರ ದೇಶದ ಶಿವಮೊಗ್ಗ
ಜಿಲ್ಲೆಯ ಬಳ್ಳಿಗಾವಿಯಲ್ಲಿ ಇದೆ.

– ಚರಿತ್ರ ಶೋಧಕರ ಗಮನಕ್ಕೆ –

ದ್ರಾವಿಡರಿಗಿಂತಲೂ ಪೂರ್ವದಲ್ಲಿ ಹಿಂದೂ ದೇಶದಲ್ಲಿ ಸಂಜ್ಞೆಗಳ
ಬರೆಯುವ ರೂಢಿಯಿದ್ದಿತು. ಆಗ ಕಣ್ಣು ಎಂಬುದನ್ನು ರೇಖಾ ಗಣಿತದ
ಉಪಯೋಗಿಸುವ ತ್ರಿಕೋಣದಿಂದ ಗುರ್ತು ಮಾಡುತ್ತಿದ್ದರು ಎಂ
ಮೇಲಿನ ವಿಷಯಗಳಿಂದ ತಿಳಿದಿದೆ. ಈಗ ವೀರಶೈವರು ಲಿಂಗ ಪೂ
ಮಾಡುವಾಗ ಲಿಂಗವನ್ನಿಡುವ ಅಂಗೈಯಲ್ಲಿ ಎರಡು ತ್ರಿಕೋಣಗಳನ್ನ
ಕೆಳಗಿನದು ತಲೆ ಕೆಳಕಾಗಿರುವಂತೆ ಕೂಡಿಸಿ ಬರೆದು ಷಟ್ ಕೋಣವನ್ನ
ರಚಿಸುತ್ತಾರೆ. ಅದರ ಮೇಲೆ ಲಿಂಗವನ್ನು ಇಡುತ್ತಾರೆ. ಇದು ಮೇಲಿ
ಕಣ್ಣು ಅಡಿಯಾಗಿ (ತಲೆಕೆಳಕಾಗಿ) ಬಿದ್ದುದು ಎಂಬುದನ್ನು ತೋರಿಸುತ್ತ
ಲಿಂಗದ ಅಡಿಯಲ್ಲಿ ಈ ಕಣ್ಣು ಇರುವದರಿಂದ ಕಣ್ಣಡಿಗ ಲಿಂಗವೆಂದು
ತಿಳಿಯಬಹುದು. ಆಗ ಲಿಂಗರೂಪವಾದ ವೀರಶೈವರು ಕಣ್ಣಡಿಗರ
ಆಗುತ್ತಾರೆ. ಈ ಕಣ್ಣಡಿಕ ಶಬ್ದದಿಂದ ಕನ್ನಡಿಗ ಆಗಬಹುದಾಗಿ
ಇವರ ಭಾಷೆಗೆ ಕಣ್ಣಡ ಅಥವಾ ಕನ್ನಡ ಎಂದು ಹೆಸರಾಗಬಹುದು. ಚರಿತ್ರ
ಶೋಧಕರ ಗಮನ ಇತ್ತ ಹರಿಯಲಿ.

ಒಟ್ಟಿನಲ್ಲಿ ಕನ್ನಡಿಗರಾದ ವೀರಶೈವರ ಮೂಲ ಪುರುಷ ವೀರಭದ್ರ
ಆತನ ಹೆಸರು ಕಣ್ಣಡಿಕ ಆತನ ಭಾಷೆ ಕನ್ನಡ. ಅದರಿಂದಾಗಿ ಆತನು
ಕನ್ನಡದ ಮೂಲ ಪುರುಷನೆಂದು ಹೇಳುವಲ್ಲಿ ಔಚಿತ್ಯವಿಲ್ಲದಿಲ್ಲ.

– ಶುಭಂ –

೯. ಕಣ್ಣಡಿಕ ನಾಮಾಂಕಿತ ವೀರೇಶ !

ಆದಿ ವೀರಶೈವಕ್ಕೆ ಆದಿ ಪುರುಷನಾದ ವೀರಭದ್ರ ದೇವನು ಕನ್ನಡಕ್ಕೂ ಕನ್ನಡಿಗರಿಗೂ ಮೂಲ ಪುರುಷನಾಗಿದ್ದಾನೆ: ಇದಕ್ಕೆ ಬೇಕಾದ ಸಾಹಿತ್ಯ ಸಂಸ್ಕೃತಿಗಳು ಸಾಕಷ್ಟಿವೆ. ಇವುಗಳ ಅನ್ವೇಷಣ ಆರ್ಜನ ರೂಪಣ ಕಾರ್ಯಗಳನ್ನು ಮಾಡುವವರು ಕಡಿಮೆ. ಇಲ್ಲೆಂದರೂ ಸಲ್ಲುವುದು ಈ ನಿಟ್ಟಿನಲ್ಲಿ ವಿಚಾರಪರರಿಗೆ ಉಪೇಕ್ಷೆಯಿದೆಯಲ್ಲದೆ ಅಪೇಕ್ಷೆಯಿಲ್ಲ. ಉಪೇಕ್ಷೆ ಉತ್ತಮರ ಲಕ್ಷಣವಲ್ಲ; ಉತ್ಥಾನ ಲಕ್ಷಣವಲ್ಲ. ಇದರಿಂದ ಎಂಥ ವರಿಗೂ ಉಮ್ಮಳ ಉಣ್ಮುತ್ತದೆ. ಹಿನ್ನೆಲೆಯುತ್ತ ಕಣ್ಣಿಡದ ಕನ್ನಡಿಗರ ಅನಾಸಕ್ತಿಗಾಗಿ!

ತಮಿಳು ನಾಡದೇವನು ವಿಶಾಖ ನಾಮಾಂಕಿತ ಷಣ್ಮುಖನಾದರೆ ಕನ್ನಡನಾಡ ಮುಖ್ಯ ಮತ್ತು ಮೂಲ ದೇವನು ವೀರಭದ್ರ ನಾಮಾಂಕಿತ-ನಾದ ಕಣ್ಣಡಿಕನು. ಇದನರಿಯದ ಕನ್ನಡಿಗರಿಗೆ ಇದು ಸೋಜಿಗದ ಮಾತಾದರೂ ಸತ್ಯಕ್ಕೆ ಸತ್ಯವಾದ ಮಾತಾಗಿದೆ. ಈ ಬಗೆಯಲ್ಲಿ ಸಾಕಷ್ಟು ಸಂಶೋಧನೆ ಸಾಗಿಲ್ಲ. ಸಾಗುತ್ತಿಲ್ಲ. ನಾವೇ ಈ ಒಳಕ್ಕೆ ಪರಿಶೋಧಿಸಿ ಒಂದೆರಡು ಬರೆಹಗಳನ್ನು ಬರಿದಿದ್ದೇವೆ. ಬರೆದರೇನು? ಅವನ್ನು ಅಭಿಮಾನ ದಿಂದ ಓದಿದವರೆಷ್ಟು ಜನ? ಪುರಸ್ಕರಿಸಿದವರೆಷ್ಟು ಜನ? ಉತ್ತೇಜನವಿತ್ತ-ವರೆಷ್ಟು ಜನ? ನಾಡಿಗೂ ವೀರಮತಕ್ಕೂ ಸಾಮಾಜಿಕ ಸಂಸ್ಕೃತಿಗೂ ಸಮ-ನ್ವಯಕ್ಕೂ ಮೂಲ ಪುರುಷನಾದ ವೀರೇಶನ ವೀರಚಾರಿತ್ರ ಸಂಶೋಧನ ಕಾರ್ಯ ವೀರಶೈವಕ್ಕೆ ಮಾತ್ರ ಸೀಮಿತವಲ್ಲ. ವೀರ ಕನ್ನಡಿಗರ ಕಾರ್ಯ; ವಿಶಾಲ ಕರ್ನಾಟಕ ಕಾರ್ಯ. ಈ ಕಾರ್ಯಕ್ಕೆ ಸಂಶೋಧಕ ಹಾಗು ಪರಿಶ್ರಾಮಿಕ ವೈಚಾರಿಕ ಮನೋಧರ್ಮ ಇದ್ದಾಗಬೇಕು. ಜೊತೆಗೆ ನಿರ್ಮತ್ಸರ ಮನೋ-ಭಾವವೂ ಬೇಕು. ಪ್ರಾಮಾಣಿಕ ಬುದ್ಧಿ ಬೇಕು.

---

೧೦ ಮಾನವತಾವಾದಿ ವೀರೇಂದ್ರ

ತಾವೇ ಉಚ್ಚವರ್ಗದವರೆಂಬ ಭಾವನೆಯಿದ್ದಿತು ಆರ್ಯರೆಂಬುವ ಜನಾಂಗದಲ್ಲಿ. ಅವರು ದ್ರವಿಡರ ಏಳ್ಗೆಯನ್ನು ಸಹಿಸುತ್ತಿರಲಿಲ್ಲ. ದ್ರವಿಡರಲ್ಲಿ ಒಡಕನ್ನು ಹುಟ್ಟಿಸಿ ದ್ರವಿಡರ ದ್ರವಿಣ ಪ್ರಾಣಗಳನ್ನು ಅಪಹರಿಸುತ್ತಿದ್ದರು. ನಿಂದ್ಯ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ವಂದ್ಯರೆಂದು ಹೇಳಿಕೊಳ್ಳುತ್ತಿದ್ದರಲ್ಲದೆ ವಂದ್ಯರಲ್ಲಿರಬೇಕಾದ ವರ್ತನಗಳಿದ್ದಿಲ್ಲ. ಹೇಯ ಪ್ರವೃತ್ತಿಯಲ್ಲಿರುತ್ತಿದ್ದರು. ದೌರ್ಜನ್ಯ ದುರ್ಬುದ್ಧಿ ದುರಹಂಕಾರಗಳಿಗೆ ಒಳಗಾಗಿದ್ದರು. ಬಣಗು ಬಯಕೆಗಳಿಗೆ ದಾಸರಾಗಿದ್ದರು. ಸ್ವಾರ್ಥಿಗಳಾಗಿದ್ದರು ಪೂರ್ವಾಗ್ರಹ ಪೀಡಿತರಾಗಿದ್ದರು. ಅವರ ಆ ಸಾಮಾಜಿಕ ನೀತಿ ರೀತಿಗಳು ಸರಿಯಾಗಿರಲಿಲ್ಲ. ಸಮತಾವಾದಿಗಳಾಗಿರಲಿಲ್ಲ. ಸಮನ್ವಯ ಭಾವಿಗಳಾಗಿರಲಿಲ್ಲ. ಹೆರರನ್ನು ಕಂಡರೆ ಹೊಟ್ಟೆಕಿಚ್ಚು, ಕಲಿಗಳನ್ನು ಕಂಡರೆ ಕರಬುತ್ತಿದ್ದರು. ತಾತ್ತ್ವಿಕರೆಂದರೆ ತಿರಸ್ಕಾರ ಬುದ್ಧಿ. ಅತ್ಯಾಶೆ ಅನ್ಯಾಯಗಳಿಗೆ ಮಾರುಹೋಗಿದ್ದರು. ಪರರ ಶೋಷಣೆಯಲ್ಲಿ ಯಾವಾಗಲೂ ನಿರತರಾಗಿರುತ್ತಿದ್ದರು. ತಾವಾಯ್ತು, ತಮ್ಮ ಸುಖವಾಯ್ತು; ತಮ್ಮದೇ ಎಲ್ಲ ತಮಗಾಗಿಯೇ ಏನೆಲ್ಲ; ಪರಹಿತಾರ್ಥಿಗಳಲ್ಲಿ ಪರರಿಗಾಗಿ ಚಿಂತಿಸುವವರಲ್ಲ. ಪರರ ಉದ್ಧಾರಕ್ಕಾಗಿ ಪ್ರಯತ್ನಿಸುವವರಲ್ಲ. ವರ್ಗಗಳನ್ನು ಹುಟ್ಟಿಸಿ ಸ್ವರ್ಗ ನರಕಗಳನ್ನು ಕಲ್ಪಿಸಿ ಸ್ವಾರ್ಥವನ್ನು ಸಾಧಿಸುತ್ತಿದ್ದರು. ವರ್ಣ ವರ್ಗಗಳ ಭಾವನೆ ಅವರಿಂದಲೆ ಆರಂಭ. ಅವರಲ್ಲಿ ಅಸಹನೆ ಅಲ್ಪಭಾವನೆಗಳಿಗಿಂಬು. ನೀಳಾದ ನಿಲವಿಲ್ಲ. ವಿಶಾಲವಾದ ಹೃದಯವಿಲ್ಲ. ಅಪೇಯ ಪಾನದಿಂದ ಅಮಲಿನಲ್ಲಿರುತ್ತಿದ್ದರು. ಅವರ ಮುಂದಾಳುಗಳಿಗೆ ಉಳಿದವರು ಅಡಿಯಾಳುಗಳಾಗಿರಬೇಕು; ಮಾನವತ್ವಕ್ಕೆ ಬೆಲೆಯಿರಲಿಲ್ಲ; ಮಣ್ಣು ಮಸಿಯಾಗಿತ್ತು. ಮೋಸ ವಂಚನೆ ಮದ ಮತ್ಸರಗಳು ಅವರಲ್ಲಿ ತಾಂಡವವಾಡುತ್ತಿದ್ದವು. ಇತರರು ತಮ್ಮಂತೆ ಇರಬೇಕು; ತಮಗಾಗಿ ಇರಬೇಕು. ಸ್ವಾರ್ಥಕ್ಕಾಗಿ ಅಷ್ಟಿಷ್ಟು ಸಹಾನುಭೂತಿಯನ್ನು ತೋರುತ್ತಿದ್ದರು. ಇಲ್ಲವಾದರೆ ಇಲ್ಲ ಸಲ್ಲದ್ದಕ್ಕೆ ಸಹಿಸದೆ ಕಿರುಕುಳಗಳನ್ನು ಕೊಡುತ್ತಿದ್ದರು. ದೇವ ದೇವರಲ್ಲಿ ಮೇಲುಕೀಳು ಮಾಡಿ ಆಡಿ ಭೇದ ಭಾವವನ್ನು ಹುಟ್ಟಿಸುತ್ತಿದ್ದರು. ತಮ್ಮ ಅಂಕಿತಕ್ಕೆ ಬಾರದವರ ಮೇಲೆ ಕಿಡಿಗಣ್ಣಿಟ್ಟು ಕೈಮಾಡುತ್ತಿದ್ದರು. ಈ ಕಹಿಯನ್ನು ಹಿರಣ್ಯಾಕ್ಷ ಹಿರಣ್ಯಕಶಿಪುರು ಅನುಭವಿಸಿದರು.

ಆರ್ಯರಿಗೂ ಇವರಿಗೂ ಆಗುತ್ತಿರಲಿಲ್ಲ. ಅವರನ್ನು ಎಲ್ಲದರಲ್ಲಿ ಪ್ರತಿಭಟ್ಟ ಸುತ್ತಿದ್ದರು. ಇವರ ನ್ಯಾಯ ನಿಷ್ಠೆ ನೀತಿ ರೀತಿಗಳು ಆರ್ಯರಿಗೆ ಸರಿಬರುತ್ತಿರಲಿಲ್ಲ. ಇವರಿಗಿರುವ ಬಲ ಸಂಪತ್ತು ಮಹತ್ತುಗಳನ್ನು ಸಹಿಸುತ್ತಿರಲಿಲ್ಲ. ಇದರಿಂದಾಗಿ ಅವರಿಗೂ ಇವರಿಗೂ ಆಗಾಗ ಘರ್ಷಣೆಗಳಾಗುತ್ತಿದ್ದವು. ಆರ್ಯರ ಸ್ವೇಚ್ಛೆಯಾದ ನಿರ್ಣಯಗಳನ್ನು ನಿಯತಿಯಿಲ್ಲದ ನಿಯಂತ್ರಣಗಳನ್ನು ಇವರು ಅಂಗೀಕರಿಸುತ್ತಿರಲಿಲ್ಲ. ಇವರ ಅನುಯಾಯಿಗಳನ್ನು ಅಬಲರನ್ನು ಮಿತಿ ಮೀರಿ ಶಿಕ್ಷಿಸಿ ಶೋಷಿಸುತ್ತಿದ್ದರು. ಇದರಿಂದಾಗಿ ಪರಸ್ಪರ ದ್ವೇಷ ಅಸೂಯೆ ಹೆಚ್ಚುವವು. ಆರ್ಯರು ತಮ್ಮ ಮುಂದಾಳುವಾದ ವಿಷ್ಣುವಿನಿಂದ ಹಿರಣ್ಯಾಕ್ಷನನ್ನು ಕೊಲ್ಲಿಸುವರು. ಆತನ ತಮ್ಮನಾದ ಹಿರಣ್ಯಕಶಿಪು ಇದನ್ನು ಸಹಿಸದಾದನು ಇಂದು ಅಣ್ಣನಿಗಾದ ಪಾಡು ನಾಳೆ ನನಗಾಗದೇನು? ಎಂದು ಯೋಚಿಸಿ ವಿಷ್ಣುವಿನನ್ನು ವಧಿಸಲು ಶಕ್ತಿಮೀರಿ ಸಾಹಸ ಮಾಡುವನು ಆದರೆ ವಿಷ್ಣು ಸಿಕ್ಕದಾಗುವನು. ಆದರೆ ದ್ವೇಷ ಹೃದಯ ಹೊಗೆಯಾಡುತ್ತಿದ್ದಿತು.

ಆರ್ಯರಿಗೆ ಶಕ್ತಿಸಾಲದೆ ಕುಹಕಕ್ಕೆ ಇಳಿವರು ಭೇದ ನೀತಿಯನ್ನು ಅನುಸರಿಸುವರು. ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನನ್ನು ಒಡೆದು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವರು. ತಂದೆಯ ಮಾತುಗಳನ್ನು ಕೇಳದಂತೆ ಅಂಕಿತದಲ್ಲಿ ಇರದಂತೆ ಮಾಡುವರು ಆತನನ್ನು ದೇವನೆಂದು ಹೊಗಳಿ ಮನೆ ಸಂಪತ್ತನ್ನು ಕೊಳ್ಳೆ ಹೊಡೆಯತೊಡಗುವರು. ಇದರಿಂದಾಗಿ ಇನ್ನಷ್ಟು ದ್ವೇಷಾಸೂಯೆಗಳು ಹೆಚ್ಚುವವು. ಮಗನ ಮೇಲೆ ಮಗನ ಬೆಂಬಲಿಗರ ಮೇಲೆ ಹಿರಣ್ಯಕಶಿಪನು ಕೋಪಾಗ್ನಿಯನ್ನು ಕಾರತೊಡಗುವನು. ಮಗನು ದಾರಿಗೆ ಬರಲೆಂದು ಕಿರುಕುಳಗಳನ್ನು ಕೊಡಮಾಡುವನು. ನಿನ್ನ ದೊಡ್ಡಪ್ಪನನ್ನು ಕೊಂದ ಹಗೆಗಳಲ್ಲಿ ಸೇರಿಕೊಂಡಿರುವುದು ಸರಿಯಲ್ಲ, ಬಿಟ್ಟು ಬಿಡೆಂದು ಬೇಕಾದಷ್ಟು ಹೇಳಿದರೂ ಮಗನು ಕೇಳದಾಗುವನು. ಆತನಿಗೆ ಆರ್ಯರ ಪ್ರೋದ್ಬಲ ಬೆಂಬಲ ಬಲವಾಗಿದ್ದಿತು. ಹೊಗಳಿ ಹೊಗಳಿ ಎತ್ತರಕ್ಕೇರಿಸಿದ್ದರು ಮಾತುಕೇಳದ ಮನೆ ಹಿಡಿದು ಬಾಳದ ಹಗೆಗಳನ್ನು ಹೊಂದಿರುವ ಮಗನಿದ್ದರೇನು, ಇಲ್ಲದಿದ್ದರೇನು ಎಂದು ಯೋಚಿಸುವಂತಾಯಿತು.

ಪ್ರಹ್ಲಾದನು ಇಲ್ಲವಾದರೆ ತಮ್ಮ ಪಾಡು ಲೇಸಾಗದೆಂದು ಎದುರಾಳಿಗಳು ಯೋಚಿಸಿ, ಆತನ ತಂದೆಯನ್ನೆ ತೀರಿಸಿ ಬಿಡಲು ಹೆಣಗುವರು. ವಿಷ್ಣುವಿನ ಬಳಿಗೆ ಹೋಗಿ ಹೇಳಿಕೊಳ್ಳುವರು. ವಿಷ್ಣು ನರಸಿಂಗವೇಷದಿಂದ ಬಂದು ಹಿರಣ್ಯಕನ ಮನೆಯ ಕಂಬದ ಮರೆಯಲ್ಲಿ ನಿಂತು ಮೋಸದಿಂದ ಅಮಾಯಕನಾದ ಹಿರಣ್ಯಕನನ್ನು ಇರಿದೇ ಕೊಂದು ನರರಕ್ತ ಕುಡಿವನು. ನರಮಾಂಸ ಭಕ್ಷಿಸುವನು. ಅದರಿಂದ ಮದೋನ್ಮತ್ತನಾದ ನರಸಿಂಹನು ನರ ವಧೆಯ ಹೀನಕೃತ್ಯದಲ್ಲಿ ನಿರತನಾಗಿರುವನು. ನಿರುಪಾಯರಾದ ದ್ರವಿಡರು ವೀರಭದ್ರನಲ್ಲಿ ಹೋಗಿ ಬಿನ್ನವಿಸಿಕೊಳ್ಳುವರು. ಮಾನವತಾವಾದಿಯಾದ ವೀರೇಂದ್ರನು ಅವರ ಬೇಡಿಕೆಯನ್ನು ಮನ್ನಿಸಿ ಶರಭ ಸಾಳ್ವಾವತಾರದಿಂದ ಬಂದು ನರವಧೆಯಲ್ಲಿ ನಿರತನಾದ ನರಸಿಂಹನನ್ನು ಸಂಹರಿಸುವನು. ಆರ್ಯರಿಗೆ ಮಾನವೀಯ ಮೌಲ್ಯವನ್ನು ಮನ ಮುಟ್ಟುವಂತೆ ಬೋಧಿಸುವನು. ದ್ವೇಷಾಸೂಯೆನಗಳಿಂದ ದೂರಿರಲು ಸಮತೆ ಸಹಕಾರಗಳಿಂದ ಬಾಳಲು ಬೋಧಿಸುವನು.

ಹಿರಣ್ಯಾಕ್ಷ ಹಿರಣ್ಯಕರು ನಿಜಕ್ಕೂ ರಕ್ಕಸರಲ್ಲ. ಹಿರಣ್ಯರೇತನಾದ ಶಿವನ ಉಪಾಸಕರು ಹಿರಣ್ಯಕನಿಗೆ ಹಿರಣ್ಯಕಶಿಪು ಎಂದೂ ಹೆಸರಿದ್ದಿತು. ಇವರಿಬ್ಬರು ಅಣ್ಣ–ತಮ್ಮಂದಿರು; ದ್ರವಿಡರ ಮುಂದಾಳುಗಳು ಹಿರಣ್ಯಗರ್ಭನಾದ ಶಿವನ ವಂಶದವರು ಮೊದಲಿನಿಂದ ಬ್ರಹ್ಮನಿಗೂ ವಿಷ್ಣುವಿಗೂ ಆಗುತ್ತಿರಲಿಲ್ಲ. ನಾ ಹೆಚ್ಚು ನೀ ಹೆಚ್ಚೆಂದು ವಾದಿಸಿ ಯುದ್ಧ ಮಾಡುತ್ತಿದ್ದರು. ಇವರ ಈ ಜಗಳವನ್ನು ಬಗೆಹರಿಸಲು ಶಿವನೇ ಬರಬೇಕಾಗಿ ಬಂತು ಜ್ಯೋತಿರ್ಲಿಂಗವಾಗುವನು ವಿರಿಂಚಿ ಹಂಸನಾಗಿ ವಿಷ್ಣು ಹಂದಿಯಾಗಿ ಮುಡಿ ಅಡಿಗಳನ್ನು ಕಾಣುವ ಪಣಕ್ಕೆ ನಿಂತು ಸೋಲುವರು. ವಿಷ್ಣು ಈ ಸೇಡನ್ನು ಹಿರಣ್ಯಾಕ್ಷ ಹಿರಣ್ಯಕಶಿಪುಗಳ ಮೇಲೆ ಪ್ರಯೋಗಿಸಿ ಪೂರೈಸುಕೊಳ್ಳುವನು ಪೂರೈಸಿಕೊಂಡರೇನು? ಒಬ್ಬರನ್ನು ಕೊಂದು ತಿಂದು ಬಾಳುವವರಿರುವರೇನು? ಆತನಿಗೆ ಮೀರಿದವರಿದ್ದೇ ಇರುವರು ವಿಷ್ಣುವಿನಿಗೂ ಮೀರನಾದ ವೀರೇಂದ್ರನ ಶಿಕ್ಷೆಗೆ ಗುರಿಯಾಗುವನು.

ಮಗನಾದ ಪ್ರಹ್ಲಾದನು ದೇವನೆಂದು ಆರ್ಯರು ಹೇಳುವರು; ಅದೇ ಆತನ ಅಪ್ಪ ದೊಡ್ಡಪ್ಪ ರಾಕ್ಷಸರೆಂದು ಹೇಳುವರು. ಈ ಹೇಳಿಕೆಯಲ್ಲಿ ತಿರುಳಿದೆಯೆ? ಹುರುಳಿದೆಯೆ? ತಮ್ಮ ಪಕ್ಷಕ್ಕೆ ಬಂದಾತ ದೇವ; ಬಾರದವರು ದೈತ್ಯರು. ಇದು ಅವರ ದ್ವೇಷ ಜನ್ಯ ಘೋಷವಲ್ಲದೆ ಬೇರಿಲ್ಲ. ವಿಚಾರಾರ್ಹ ವಲ್ಲ.

ಮಾನವೀಯತೆಯನ್ನು ಮಣ್ಣುಗೂಡಿಸಿದ ನರಸಿಂಹನು ಕಂಬದಲ್ಲಿ ಹುಟ್ಟಿಬಂದನೆಂದು ಹೇಳುವಲ್ಲಿಯೂ ಮಾನವತೆಯ ಅಣಕವಿದೆ. ಮಾನವ ಕಾಷ್ಠದಲ್ಲಿ ಹುಟ್ಟಬಲ್ಲನೆ? ಮಾಡಿದ ಮೋಸವನ್ನು ಇರುವ ಹೇಡಿತನವನ್ನು ಮುಚ್ಚಲು ಈ ಕಲ್ಪನೆ! ಈ ಅಸಹಜ ಭಾವನೆ!!

ನರಸಿಂಹ ಅಥವಾ ನರಹರಿಯ ಕಲ್ಪನೆ ಮಾನವತೆಗೆ ವಿರೋಧವಾದುದು. ಮಾನವರನ್ನು ಕೊಂದು ತಿನ್ನುವ ಈ ಅವತಾರ ವಿಷ್ಣುವಿನ ನಾಲ್ಕನೆಯ ಅವತಾರವಂತೆ! ಮಾನವ ವಧೆಗೆ ಮಾನವ ಭಕ್ಷಣೆಗೆ ಮೀಸಲಾದ ಅವತಾರ. ನರರನ್ನು ಹರಿದು ತಿನ್ನಲು ಹುಟ್ಟಿದಾತ ನರಹರಿ. ಇದಕ್ಕೆ ನರಶ್ರೇಷ್ಠನೆಂದು ಅರ್ಥವನ್ನು ಕಲ್ಪಿಸಿದುದುಂಟು ಆತನ ಕೃತಿಯಿಂದ ಅನರ್ಥವೆನಿಸುತ್ತದೆ. ತನ್ನಲ್ಲಿ ಕಸುವಿಲ್ಲದೆ ಮೋಸದಿಂದ ಹಿರಣ್ಯಕನನ್ನು ಕೊಂದವನು ನರಶ್ರೇಷ್ಠ ಹೇಗಾದಾನು? ಮಾನವ ಪ್ರೇಮಿ ಹೇಗಾದಾನು? ಮಾನವ ಜೀವನ ಹಕ್ಕನ್ನು ಹರಣ ಮಾಡುವಾತನು ನರಶ್ರೇಷ್ಠನಾಗಬಲ್ಲನೆ? ದ್ರವಿಡ ಜನಾಂಗದ ಮೇಲೆ ದ್ವೇಷವನ್ನಿರಿಸಿಕೊಂಡವನು, ದೇಹ ಪ್ರಾಣಗಳ ಮೇಲೆ ಕೈ ಮಾಡುವವನು ದೇವನೆನಿಸಬಲ್ಲನೆ? ಒಬ್ಬರ ಮೇಲೆ ಇನ್ನೊಬ್ಬರು ಸಮರ್ಥರು ವಿಚಾರ ಶೀಲರೆ? ಕಾಮ ಕ್ರೋಧ ಮದ ಮತ್ಸರ ಶೀಲರು ಆಚಾರವಂತರೆ? ತನಗೊಂದು ಕಾಲವಿದ್ದರೆ ಇನ್ನೊಬ್ಬರಿಗೆ ಇದ್ದೊಂದು ಕಾಲ ಬರುತ್ತದೆ. ನರಸಿಂಹನಿಗೆ ನಾಲ್ಕು ಕಾಲುಗಳಿದ್ದರೆ ಶರಭಾವತಾರಕ್ಕೆ ಎಂಟು ಕಾಲುಗಳು; ಎಂಟಡೆಗಳು ಇದೆಲ್ಲ ಕಲ್ಪನೆಗೆ ಪ್ರತಿಕಲ್ಪನೆ; ಭಾವನೆಗೆ ಪ್ರತಿಭಾವನೆ ಇದೆಲ್ಲ ಹೇಗೇ ಇರಲಿ, ಹಿರಣ್ಯಾಕ್ಷ-ಹಿರಣ್ಯಕಶಿಪು ಇವರನ್ನು ಮೊದಲು ಕೊಂದು ನರವಧೆಗೆ ನಾಂದಿಯನ್ನು ಹಾಡಿದವರು ವಿಷ್ಣು ಮತ್ತು

ವಿಷ್ಣು ಪಂಥೀಯರು. ಅಂತೆಯೆ ನರಭಕ್ಷಣೆಗೂ ನಾಂದಿಯನ್ನು ಹಾಡಿದರು. ಇದನ್ನು ತೊಲಗಿಸಲು ವೀರೇಶನು ವಿಧಿಯಿಲ್ಲದೆ ಭಾಗವಹಿಸಬೇಕಾಗುವುದು. ನರಹರಣ, ನರ ಭಕ್ಷಣಗಳನ್ನು ನಿಲ್ಲಿಸುತ್ತಾನೆ. ಆದರಿಂದ ವೀರೇಶನು ಮಾನವ ಪ್ರೇಮಿಯಾಗಿ ಪ್ರಕಾಶಿಸುವನು. ಮಾನವೀಯ ಕಲ್ಯಾಣಕ್ಕಾಗಿಯೆ ಬಾಳಿದನು. ಸಾಮಾಜಿಕರ ನೈತಿಕ ಪೋಷಣೆಗಾಗಿ ಶೈವೀ ಶಕ್ತಿಸಂಪನ್ನತೆಗಾಗಿ ಆತ್ಮರಕ್ಷಣೆಗಾಗಿ ಬಾಳಿದನು. ಮಾನವೀಯ ಹೃದಯವುಳ್ಳವರು ಕೈಕೊಳ್ಳುವ ಕೆಲಸಗಳಿವು. ವಿಕ್ರಮಶಾಲಿಗಳ ವಿಶಿಷ್ಟ ಕರ್ತವ್ಯವಿದು. ಸರ್ವೋಪಯೋಗಿಯಾದ ಸತ್ ಸಾಹಸವಿದು. ಸರ್ವ ಶಕ್ತರಿಗೆ ಸಲ್ಲತಕ್ಕುದಿದು. ದಾರಿತಪ್ಪಿದವರನ್ನು ದಾರಿಗೆ ತ ತಕ್ಕುದು, ಕೊರಗು ಕೊರತೆಗಳಿಗೆ ಒಳಗಾದವರನ್ನು ಎತ್ತಿ ನೆರವಿತ್ತು ಕಾಪಿಡುವುದು– ವೀರೇಶನ ಮಣಿಹವಾಗಿತ್ತು. ದುಷ್ಟರ ದುರ್ವರ್ತನವನ್ನು ನಿಯಂತ್ರಿಸುತ್ತಿದ್ದನು. ಸ್ವೇಚ್ಛೆಯನ್ನು ಸಂಯಮಿಸುವಂತೆಸಗುತ್ತಿದ್ದನು. ಹೃದಯ ಪರಿವರ್ತನ ಮಾಡಿ ಕರ್ತವ್ಯದತ್ತ ವಿಧೇಯದತ್ತ ಸ-ಧಾರಣೆಯತ್ತ ಸಮಾಧಾನದತ್ತ ಮಾನವ ಕುಲವನ್ನು ಒಯ್ಯುತ್ತಿದ್ದನು. ಈ ದಿಸೆಯಲ್ಲಿ ದೇವಗಣವನ್ನು ದಾರಿಗೆ ತಂದ ಶ್ರೇಯಸ್ಸು ವೀರೇಶನದು. ಅಂತೆಯೇ ಯಜ್ಞಕ್ರಾಂತಿಯ ಮಾಡಿದ ಕೀರ್ತಿ ಆತನದು. ಆತನಿಂದೀಚೆ ಯಜ್ಞವಿಚಾರದಲ್ಲಿ ವಿಧಾನದಲ್ಲಿ ಒಂದು ಹೊಂತಿರವು ಉಂಟಾಯಿತು. ಹಿರಿದಾದ ಹರವು ಒದಗಿತು. ಜ್ಞಾನಯಜ್ಞ ತಪಯಜ್ಞ ಜಪಯಜ್ಞಾದಿಗಳ ನಿರೂಪಣೆ ನಡೆಯಿತು- ಯಜ್ಞ ವಿಚಾರ ಪ್ರೌಢಿಮೆ ಬೆಳೆಯಿತು. ಯಜ್ಞಕರ್ಮ ನಿಂತು ಯಜ್ಞಪ್ರಕ್ರಿಯೆ ಪರ ವರ್ಾಧವಾಗಿ ಸಾಗತೊಡಗಿತು. ಪಾರಿಭಾಷಿಕವಾಗಿ ಸಾಂಕೇತಿಕವಾಗಿ ಯಜ್ಞಾರ್ಥಗಳು ನಿರೂಪಿತವಾಗತೊಡಗಿದವು. ವೀರೇಶನಯಜ್ಞಕ್ರಾಂತಿ ಅನೇಕ ಋಷಿಗಳ ಮೇಲೆ ಗೀತಾಕಾರರ ಮೇಲೆ ಪ್ರಭಾವವನ್ನು ಬೀರಿತು. ಪ್ರಗತಿಪರವಾಯಿತು. ಯಾಗ ಯೋಗವಾಗಿ ಪರಿಣಮಿಸುವಂತಾಯಿತು. ಪಶುಯಜ್ಞ ಪಶುಪತಿಯಜ್ಞವಾಗಿ ಪರಿಣಮಿಸಿತು. ಮಾನವ್ಯಪ್ರಜ್ಞೆ ಎಲ್ಲರಲ್ಲಿ ಮೂಡಿ ಮಾನವತಾವಾದವು ಮರ್ತ್ಯಲೋಕದಲ್ಲಿ ಹಬ್ಬುವಂತಾಯಿತು. ಮಾನವೀಯತೆಯನ್ನು ಪುರಸ್ಕರಿಸುವಂತಾಯಿತು. ಸ್ವಾರ್ಥ ಸಾಧನೆ ಶೋಷಣೆ, ಮಾನವ್ಯ ವ್ಯತಿರೇಕ ನಿರ್ವಹಣೆಗಳು ನಿಂತು ಹೋಗುವವು.

ದೇವತೆಗಳೆಂದು ಹೇಳಿಕೊಳ್ಳುವವರಲ್ಲಿ ದೇವತ್ವವಿರಲಿಲ್ಲ; ಮನುಷ್ಯತ್ವವೂ ಇರಲಿಲ್ಲ. ದೈತ್ಯವೃತ್ತಿಯಲ್ಲಿರುತ್ತಿದ್ದರು. ಪರ ಹಿತದ ಕಾರ್ಯಕ್ಷೇತ್ರವೂ ಇರಲಿಲ್ಲ. ಮತ್ತೊಬ್ಬರ ಏಳ್ಗೆಯನ್ನು ಕಂಡು ಕರುಬುವ ಕೆಟ್ಟ ಗುಣವಿದ್ದಿತು. ಇವನ್ನೆಲ್ಲ ತೊಲಗಿಸಿ ಮಾನವೀಯ ಭಾವನೆ ಬರುವಂತೆ ವೀರೇಶನು ಮಾಡುವನು. ಅವರಲ್ಲಿರುವ ಅಧಿಕಾರ ವೈಭವಗಳದಾಹವನ್ನು ಹಿಂಗಿಸುವನು.

ಶಕ್ತಿ ಪ್ರಜ್ಞೆ ಪ್ರತಿಭೆಗಳು ಯಾರಲ್ಲಿಯೂ ಪರಿಪೂರ್ಣವಾಗಿರವು. ಆದರೆ ಯಾರು ಇಲ್ಲ ಸಲ್ಲದ ಹೊಲಬಿನಲ್ಲಿ ಹೆಜ್ಜೆ ಹಾಕುತ್ತಾರೋ ಅವರು ಮಾತ್ರ ಎಡಹುತ್ತಾರೆ; ಕೆಳಕ್ಕೆ ಬೀಳುತ್ತಾರೆ. ಅಂತೆಯೇ ದಕ್ಷನು ಸಲ್ಲದ ಅಭಿಮಾನಕ್ಕೆ ಒಳಗಾಗಿ ಅಲ್ಲದ ಕಾರ್ಯ ಮಾಡಿದ. ತನ್ನ ಮಗಳೆ ಅಸುನೀಗಲು ಕಾರಣನಾದ ಶಿವನನ್ನು ಅವಮಾನಿಸಲು ಮುಂದಾದ. ಆಡಬಾರದ ನುಡಿಗಳನ್ನು ಆಡ ತೊಡಗಿದ. ಅಂತೆಯೇ ನರಸಿಂಹನು ಹಿರಣ್ಯಾಕ್ಷ ಹಿರಣ್ಯಕರನ್ನು ಕೊಲ್ಲುವನು. ನರಮಾಂಸ ತಿನ್ನುವ ನರರಕ್ತವನ್ನು ಕುಡಿಯಲು ಮೊದಲು ಮಾಡುವನು. ಮದ ಮತ್ಸರಗಳಿಗೊಳಗಾಗಿ ಮಾನವ ವಧೆಯಂತಹ ಮಹಾಪರಾಧಕ್ಕೆ ತಕ್ಕಾಗುವನು. ಪಂಚಮಹಾ ಪಾತಕಗಳಿಗೆ ಒಳಗಾಗುವನು. ಹೀಗಾಗಿ ಇವರಿಬ್ಬರೂ ವೀರೇಶನ ಶಿಕ್ಷೆಗೆ ಗುರಿಯಾಗ ಬೇಕಾಗುವುದು.

ದ್ವೇಷ ಮತ್ಸರ ದುರಭಿಮಾನಗಳಿಂದ ಅಂದಿನ ಆರ್ಯರು ವೈಯಕ್ತಿಕ ಮತ್ತು ತಪ್ಪು ಸಾಮಾಜಿಕ ಚರಿತ್ರೆಯನ್ನು ಕಲಂಕಿತವನ್ನಾಗಿಸುವರು. ನರಹತ್ಯ, ಸುರಾಪಾನ, ಸ್ತೇಯ, ಶೋಷಣ, ಪರದಾರಗಮನ ಮೊದಲಾದ ಮಹಾ ಮಹಾ ಪಾತಕ ಕಾರ್ಯಗಳಲ್ಲಿ ಪ್ರವರ್ತಿಸುತ್ತಿದ್ದರು. ಇದರಿಂದಾಗಿ ವೀರೇಶನು ಇವರ ಮೇಲೆ ಉಗ್ರಕ್ರಮವನ್ನು ಕೈಕೊಳ್ಳಬೇಕಾಯಿತು. ಎದೆಗಾರಿಕೆಯಿಂದ ಎದುರಿಸಬೇಕಾಯಿತು. ಸ್ವಾರ್ಥಿಗಳಾಗಿ ದ್ರಾವಿಡರನ್ನು ಸಹಿಸದಿರುವಿಕೆಯನ್ನು ಬಿಡಿಸಬೇಕಾಯಿತು. ಅವರ ಸ್ವಾರ್ಥ ಕಕ್ಷೆಯಲ್ಲಿ ಸಿಕ್ಕುಬಿದ್ದವರನ್ನು ಬಿಡಿಸಬೇಕಾಯಿತು ಮಾನವ್ಯಸ್ವಾತಂತ್ರ್ಯವನ್ನು ತಂದು ಕೊಡಬೇಕಾಯಿತು.

೧೧ ವೀರ ಜೋಗಿಗಳು

ನಮ್ಮಲ್ಲಿ ಜೋಗಿಗಳದೇ ಒಂದು ಪರಂಪರೆಯಿದೆ; ಪಾವನ ಸಂಸ್ಕೃತಿಯಿದೆ. ವೀರೇಶನನ್ನು ಹೊಂದಿಕೊಂಡವರು ವೀರಜೋಗಿಗಳು ಅಂತೆಯೆ ಶಿವನನ್ನು ಹೊಂದಿಕೊಂಡವರು ಶಿವಜೋಗಿಗಳು; ಬುಡ ಬುಡಕಿ ಜೋಗಿ ಮಲ್ಲಯ್ಯನ ಜೋಗಿಗಳು, ಕಂಬಳಿ ಜೋಗಿಗಳು ಎಲ್ಲಮ್ಮನ ಜೋಗತಿಗಳು ಎಂದು ಮುಂತಾಗಿ ಇರುವರು.

ಯೋಗ್ಯ ಇದರ ತದ್ಭವ ಜೋಗ ಜೋಗವೆಂದರೆ ಹೊಂದಿಕೆ, ಸೇರಿಕೆ, ಧ್ಯಾನ, ತಪಸ್ಸು ಎಂದು ಅರ್ಥಗಳಿವೆ. ತನ್ನ ಹೃದಯದ ಆರಾಧ್ಯ ಮೂರ್ತಿಯಲ್ಲಿ ಮನಸನ್ನಿರಿಸಿಕೊಂಡಿರುವುದೆ ಜೋಗ್ಯ ಅಥವಾ ಯೋಗ. ಅವನಂತೆ ಮಾತು ಆಡುವುದು, ರೂಪುದಾಳುವುದು ಜೋಗದ ಮತ್ತೊಂದು ಉಪಾಸನೆ ಮೈ ಮಾತು ಮನ ಈ ತ್ರಿಕರಣಗಳು ಆತನಂತಿದ್ದರೆ ಜೋಗಿಯೆನಿಸುತ್ತಾನೆ. ಯಾರಂತಿದ್ದರೆ ಅವರ ವಿಶೇಷಣ ಬರುತ್ತದೆ. ಉದಾಹರಣೆಗಾಗಿ ವೀರೇಶನಂತಿದ್ದರೆ ವೀರ ಜೋಗಿಯೆಂದು, ಶಿವನಂತಿದ್ದರೆ ಶಿವಜೋಗಿಯೆಂದು, ಮಲ್ಲಯ್ಯನಂತಿದ್ದರೆ ಮಲ್ಲಜೋಗಿಯೆಂದು ಎಲ್ಲಮ್ಮನಂತಿದ್ದರೆ ಎಲ್ಲಮ್ಮನ ಜೋಗೀತಿಯೆಂದು ಜೋಗಿಣಿಯೆಂದು ಜೋಗಮ್ಮ ಎಂದು ಹೆಸರು ಬರುತ್ತದೆ

ಅಂತೆಯೇ ವೀರಜೋಗಿಗಳು ವೀರೇಶನಂತೆ ವೀರಘೋಷಣೆಗಳನ್ನು ಮಾಡುತ್ತಾರೆ. ವೀರ ಕ್ರಿಯೆಗಳನ್ನೆಸಗುತ್ತಾರೆ. ವೀರತನವನ್ನು ಜೋಗೈಸುತ್ತಾರೆ. ವೀರ ಸಂಸ್ಕೃತಿಯನ್ನು ಜೋಕೆ ಮಾಡುತ್ತಾರೆ; ವೀರ ಘೋಷಣೆಗಳನ್ನು ಜೋಡಣೆ ಮಾಡುತ್ತಾರೆ, ಉಗ್ಗಡಿಸುತ್ತಾರೆ. ವೀರಾವೇಶದಿಂದ ವೀರ ವಾದ್ಯಗಳೊಡನೆ ವೀರಗಚ್ಚೆಹಾಕಿ ಕೈದುಗಳ ಹಿಡಿದು ಕುಣಿಯುತ್ತಾರೆ ವೀರಗಾಸೆ ಧರಿಸಿ ವೀರ ಶ್ರೀಭುಸ್ಸು ಬೀರುತ್ತಾರೆ. ಹುರುಪು ಹುಮ್ಮಸ್ಸುಗಳನ್ನು ತೋರಿ ತುಂಬುತ್ತಾರೆ. ಹಿಂದಿನ ಆ ವೀರ ಸಂಸ್ಕೃತಿಯನ್ನು ನೆನವಿಗೆ ತರುತ್ತಾರೆ. ಹಿಂಸಾತ್ಮಕ ಯಜ್ಞನಿರೋಧ ಸಂಕೇತವಾಗಿ ಅಗ್ನಿಕುಂಡದಲ್ಲಿರುವ ಅಗ್ನಿಯನ್ನು ಅಡಿಗಳಿಂದ ಮೆಟ್ಟಿ (ತುಳಿದು) ಆಚೆಗೆ ಹೋಗುತ್ತಾರೆ.

ವೀರೇಶನನ್ನು ಕುರಿತು ವೀರಾವೇಶದಿಂದ ಹೇಳುವ ವೀರಘೋಷಣೆ ಕೇಳುವವರಿಗೆ ವೀರಶ್ರೀಯನ್ನು ತರುತ್ತದೆ. ಅಂದಿನ ಆ ವೀರಕಾರ್ಯಗಳ ವರ್ಣನೆಯಿರುತ್ತದೆ. ಅವನ್ನು ಹೇಳುವುದೇ ಒಂದು ವಿಶಿಷ್ಟವಾದ ಬಗೆ! ಅಂದಿನ ಆ ಚಾರಿತ್ರ, ಚಿತ್ರವನ್ನು ಕಣ್ಮುಂದೆ ಚಿತ್ರಿಸುವಂತಿರುತ್ತದೆ. ಅವನ್ನು ಕಿವಿಯಿಂದ ಕೇಳುವವರಿಗೂ ಕಲಿತನ ಕೂಡಿಬಂದು ಅವರೊಡನೆ ಹಲವರು ಒಡಗೂಡಿ ವೀರ ಘೋಷದೊಡದೆ ವೀರನರ್ತನ ಮಾಡತೊಡಗುತ್ತಾರೆ. ಘೋಷಿಸುವವರಿಗೆ ಎದುರಾಗಿ ಕೇಳುವವರು "ಭಲರೇ ರುದ್ರ" ಎಂದು ಪ್ರತಿ ಘೋಷಿವನ್ನೆಸಗುತ್ತಾರೆ. ಇದೂ ಒಂದು ಬಗೆಯಲ್ಲಿ ಜಾನಪದ ಜಾಗ್ರತ ವೃತ್ತಿಯಾಗಿದೆ. ಇದಕ್ಕೆ ಇಂದು ಪ್ರೋತ್ಸಾಹವಿಲ್ಲ, ಈ ವೀರಕಲೆಯನ್ನು ಗುರುತಿಸುವವರಿಲ್ಲ, ಇದರ ಪುರಾತನತೆಯನ್ನು ಚಿಂತಿಸುವವರಿಲ್ಲ, ಇದರ ಉದಾತ್ತ ಉದ್ದೇಶವನ್ನು ಬಿಚ್ಚಿ ಹೇಳುವವರಿಲ್ಲ; ಬಿಚ್ಚಿ ಬರೆಯುವವರಿಲ್ಲ. ಆದರೂ ಪುರವಂತರು ಇಂದಿಗೂ ಈ ಕಲೆಯನ್ನು ಕಾಪಾಡಿಕೊಂಡು ಬಂದಿದ್ದಾರೆ.

ವೀರೇಶನ ವಾದ್ಯಗಳಲ್ಲಿ ಸಮ್ಮೇಳ (ಸಂಬಾಳ) ಡೊಳ್ಳುಗಳು ಮುಖ್ಯವಾದವುಗಳು ಶಿವನಿಗೆ ಕಿಂದರಿ, ಡಮರುಗಗಳದ್ದಂತೆ ಇವೆ. ಸಮ್ಮೇಳವನ್ನು ವೀರಶೈವರು, ಡೊಳ್ಳುಗಳನ್ನು ಕುರುಬರು (ಬೀರರು) ಕಾಪಾಡಿಕೊಂಡು ಬಂದಿದಾರೆ. ಕರಡೆ ಮೇಳವೂ ಅತನದೆ! ಇದು ಮೃದಂಗದಂತೆ ಶ್ರಾವ್ಯವಾಗಿರುತ್ತದೆ. ಇದರಿಂದ ಸಂಭ್ರಮ ಸಡಗರ ಹೆಚ್ಚುತ್ತವೆ. ಸಮಾರಂಭ ವಿಜೃಂಭಿಸುತ್ತದೆ. ವೀರ ಜೋಗಿಗಳಿಗೆ ವಿಶೇಷ ಉತ್ಸಾಹವನ್ನುಂಟು ಮಾಡುತ್ತದೆ. ಕರಡೆವಾದ್ಯದವರನ್ನು 'ಕರಡೆ ಮಜಲು' ಎಂದೂ ಕರೆಯುತ್ತಾರೆ. ಕರಡೆ ವಾದ್ಯ ಮೇಳ ಕಾಣಲು ಚಂದ, ಕೇಳಲು ಚಂದ ವೀರ ಜೋಗಿಗಳಿಗಿದು ಉಚಿತ ವಾದ್ಯ. ವೀರಜೋಗಿಗಳ (ಪುರವಂತರ) ವೀರ ಶ್ರೀಯನ್ನು ಹೆಚ್ಚಿಸುವ ವಾದ್ಯ. ಅವರ ಆ ಉಗ್ಗಡಣೆಗೆ ತಕ್ಕ ಮೇಳ, ತಕ್ಕ ಮಜಲು.

ಜೋಗಿಗಳಿಗೆಲ್ಲ ಮೊದಲಿಕೆರು ವೀರಜೋಗಿಗಳು; ಹೆಚ್ಚಾಳಿಗರು. ಉಳಿದದರಿಗೆಲ್ಲ ಆದರ್ಶರಾಗಿದ್ದಾರೆ, ಇವರು ವೀರವ್ರತಿಗಳಾಗಿರುತ್ತಾರೆ.

ನಿತಿಯಿಂದಿರುತ್ತಾರೆ. ಇವರು ಆ ವೀರೇಶನ ವೀರಚರಿತೆಯನ್ನಲ್ಲದೆ ಬೇರೊಂದನ್ನು ಉಗ್ಗಡಿಸರು. ಈ ನೆಪದಲ್ಲಿ ಕೆಲವು ತತ್ವಗಳನ್ನು ಉಗ್ಗಡಿಸುತ್ತಾರೆ. ಸತ್ವಶಾಲಿಯಾಗಿ ಸುಂದರ ಶೈಲಿಯಲ್ಲಿ ಉಗ್ಗಡಿಸುತ್ತಾರೆ. ಹಿಂದೆ ನಡೆದುಹೋದ ಹಲವಾರು ಕಥೆಗಳನ್ನು ತತ್ತ್ವಗಳನ್ನು ಹೇಳುತ್ತಾರೆ. ಒಮ್ಮೊಮ್ಮೆ ಅವತಾರಗಳನ್ನು ನಿರೂಪಿಸುತ್ತಾರೆ. ಇತ್ತೀಚಿನ ವಚನಗಳಿಗೂ ತಮ್ಮ ಉಗ್ಗಡಣೆಯಲ್ಲಿ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಹಳಬರು ತುಂಬಾ ಸೊಗಸಾಗಿ ಉದ್ಘೋಷಿಸುತ್ತಾರೆ. ಹೊಸಬರು ಅವನ್ನು ಉಳಿಸಿಕೊಂಡು ಬರಬೇಕು. ಈ ವೀರಜೋಗಿಗಳಿಗೆ ವಿಶೇಷವಾಗಿ ಉಚಿತ ಪ್ರೋತ್ಸಾಹ ಸಿಕ್ಕುವಂತಾಗಬೇಕು. ಇಲ್ಲವಾದರೆ ಈ ಕಲೆ ಮರೆಯಾಗಿ ಹೋಗುತ್ತದೆ.

ವೀರಜೋಗಿಗಳು ಶಸ್ತ್ರಹಾಕಿಕೊಂಡಾಗ ಆದ ಗಾಯಗಳಿಗೆ ವಿಭೂತಿಯೊಂದೇ ಹಿರಿದಾದ ಮದ್ದು ಅದರ ಜೊತೆಗೆ ಪಾದೋಡಕ ಇವೆರಡರ ವಿನಾ ಬೇರೆ ಏನನ್ನೂ ಅವರು ಉಪಯೋಗಿಸುವುದಿಲ್ಲ. ಅವರ ಶ್ರದ್ಧೆ ಅಂತಹದು ಅವರ ಆಗಿನ ಸ್ಥೈರ್ಯ ಅಂತಹದು. ವೀರಜೋಗಿಗಳು ವೀರೇಶನ ಭಕ್ತರು ಪಲದಂಕದ, ರುದ್ರನಿಗೆ ರುದ್ರಗಣರು ಸಹಾಯಕರಿರುವಂತೆ ವೀರೇಶನಿಗೆ ವೀರಗಣರಿದ್ದರು. ಅವರೇ ಈ ವೀರಜೋಗಿಗಳಾಗಿ (ಪುರವಂತರಾಗಿ) ಇಂದಿಗೂ ಇದ್ದಾರೆ.

— - — —

೧೨. ವಿಶ್ವ ವಿಖ್ಯಾತರು ವೀರೇಶ, ವಿನಾಯಕ, ವಿಶಾಖರು.

ವೀರೇಶ: ಈತನನ್ನು ಶಿವತನಯನೆಂದು ಹೇಳುವುದು ಸರಿಯಿಲ್ಲ. ಈತ ರುದ್ರ ತನಯ ತೇಜಸ್ತತ್ತ್ವಕ್ಕೆ ಸೇರಿದಾತ. ವೀರಕೇತನವುಳ್ಳಾತ. 'ವೀರಕುಲಾಧೀಶ್ವರ' ಎಂದು 'ಹಲಗೆಯ ಕಡುಗಲಿ' ಎಂದು 'ಅಜ್ಜಾಳು' ಎಂದು ಹೆಸರಾಗಿದ್ದಾನೆ. 'ದಕ್ಷಾಧ್ವರಧ್ವಂಶಿ' ಎಂದೂ ಹೇಳುತ್ತಾರೆ. 'ಶತರುದ್ರಾಧಿಪತಿ' ಎಂದು ಏಕಾದಶ–ರುದ್ರರಲ್ಲಿ ಪ್ರಮುಖನೆಂದು ನಿಜಗುಣರು ನಿರೂಪಿಸಿದ್ದಾರೆ-

ಬಲಶಾಲಿ ವೀರೇಶ ಆತನ ಬಲವೇಬಲ.
"....ಬಲಂರುದ್ರಂ, ರುದ್ರಂಗೆ ಬಲಂ ನಡುಗಣ್ಣ–

ನಡುಗಣ್ಣಂಗೆ ಬಲಂ ವೀರೇಶ್ವರಂ...."ಎಂದು ರಾಘವಾಂಕ ಕವಿ ತನ್ನ 'ವೀರೇಶ ಚರಿತೆ' ಕಾವ್ಯದಲ್ಲಿ ಕೀರ್ತಿಸಿದ್ದಾನೆ.

ವಿನಾಯಕ: ಈತನು ಗೌರೀತನಯ ಶಿವಗಣರಿಗೆಲ್ಲ ಒಡೆಯನಾಗಿದ್ದರಿಂದ ಇವನನ್ನು 'ಗಣಪತಿ' ಯೆಂದು. ವಿಘ್ನನಾಶಕನಾಗಿದ್ದರಿಂದ 'ವಿಘ್ನೇಶ'ನೆಂದು ಇವನಿಗಿಂತ ಹಿರಿಯೊಡೆಯರಿಲ್ಲದ್ದರಿಂದ 'ವಿನಾಯಕ'ನೆಂದು, ಆನೆಯ ಸೊಂಡಿಲವಿರುವುದರಿಂದ 'ಗಜ–ವದನ' ಎಂದು 'ವಕ್ರತುಂಡ' ಎಂದು ಹೆಬ್ಬೊಡಲಿಗನಾದ್ದರಿಂದ 'ಲಂಬೋದರ'ನೆಂದು, ದೊಡ್ಡ ಕಣ್ಣಿರುವುದರಿಂದ 'ಹೇರಂಬ' ಎಂದು ಮುಂತಾಗಿ ಹೇಳುವರು. ಈತನು ವಿಶ್ವವಿಖ್ಯಾತನಾಗಿ ವಿಶ್ವವಂದ್ಯನಾಗಿ ಬೆಳಗುತ್ತಿದ್ದಾನೆಂದು ಶಕ್ತಿ ಯುಕ್ತಿ ಭಕ್ತಿಗಳ ಸಂಗಮ ಗಣೇಶ. ಶಕ್ತಿವಂತನಾದ ಕಾರಣ 'ಸೇನಾನಿ'ಎಂದು ಹೆಸರಾಗಿದ್ದಾನೆ. ಯುಕ್ತಿವಂತನಾದ ಕಾರಣ 'ಬುದ್ಧಿ'ಈತನ ಹೆಂಡತಿಯೆಂದು ಹೇಳಲಾಗುತ್ತಿದೆ. ಈತನು ಮಾತೃಭಕ್ತಿ–ಯಿಂದ ತನ್ನ ತಲೆಯನ್ನು ಕಳೆದುಕೊಳ್ಳುವನು; ಮರಳಿ ಜೀವಿ-ಸುವನು. ಈತನು ಸಿದ್ಧಿವಂತ; ಕ್ಷೇಮವಂತ, ಲಾಭವಂತ.

ಗಣಪತಿಯು ಪೃಥ್ವಿ ಮತ್ತು ಜಲ ತತ್ತ್ವದವನು. ವೃಷ್ಟಿ ಕೇತನನು. ಪೃಥ್ವಿತತ್ತ್ವದ ಗೌರಿ, ಜಲತತ್ತ್ವದ ಗಂಗೆ ಇವರಿಂದ ಜನಿಸಿದ ಕಾರಣ 'ದ್ವೈಮಾತುರ' ಎಂದೆನಿಸಿರುವನು ಗಣಪನನ್ನು ಕಾನೀನನೆಂದು ಹೇಳುವರು. ಇದು ಸಲ್ಲದಸೊಲ್ಲು. ಗಂಗೆ ಗೌರಿಯರಿಬ್ಬರನ್ನು ಶಿವನು ಮದುವೆಯಾದ ಬಳಿಕ ಜನಿಸಿದಾತನು ಬೆನಕನು. ಇದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಪದ್ಮ ಲಿಂಗ, ಸ್ಕಾಂಡಾದಿ ಎಲ್ಲ ಪುರಾಣಗಳೂ ಸಹ ಮದುವೆಯಾದನಂತರ ಗಣೇಶನು ಹುಟ್ಟಿದಂತೆ ಹೇಳುತ್ತವೆ ಹೀಗಿದ್ದರೂ ಮದುವೆಯಾಗದ ಮುನ್ನವೇ ಜನಿಸಿರಬೇಕು ಎಂದು ಊಹಿಸಿ ಹೇಳುವುದು ಸರಿಯಲ್ಲ.

ಗಣಪತಿ ದ್ರಾವಿಡರ ದೇವತೆ ದ್ರಾವಿಡ ಸಂಸ್ಕೃತಿಗೆ ಸೇರಿದಾತನು. ಈತನ ತಾಯಿ ತಂದೆಗಳು ಸಹ ದ್ರಾವಿಡರು, ಈತನಿಗಿರುವ ತಟಂಕಟ, ಕೂಷ್ಮಾಂಡ, ಶಾರಿ, ರಾಜಪುತ್ರ, ಮಿತ, ಸಮ್ಮಿತ ಎಂಬೀ ಹೆಸರುಗಳು ಇದನ್ನೆ ಸೂಚಿಸುತ್ತವೆ ಕೃಷಿ ಸಂಕೇತನಾಗಿದ್ದಾನೆ ವಿಘ್ನೇಶ. ಕೊಡಲಿ, ತ್ರಿಶೂಲ, ಪಾಶಗಳು ಆತನ ಆಯುಧಗಳು. ಅಧರ್ಮಿಗಳಿಗೆ ವಿಘ್ನಗಳನ್ನು ಒದಗಿಸುವಾತನು. ಸರ್ವರಲ್ಲಿ ಸಮದರ್ಶಿಯು ಪೂಜೆಗೆ ಪ್ರಾಶಸ್ತ್ಯವನ್ನೀಯುವನು. ಪೂಜಿಸದವರು ಪಾಪಿಗಳು, ವಿಘ್ನಗಳಿಗೆ ಒಳಗಾಗುವರು.

ಗಣೇಶ ಗೌರಿ ಗಿರೀಶರಿಬ್ಬರ ಅನುಗ್ರಹ ಶಕ್ತಿಯಿಂದ ಆದವನು. ಆತನ ಆ ಗಣೇಶತ್ವಕ್ಕೆ ತಾಯಿತಂದೆ ಇಬ್ಬರೂ ಕಾರಣರು. ಗೌರಿಯ ಪಾರ್ಥಿವತತ್ತ್ವ, ಗಂಗೆಯ ಜಲತತ್ತ್ವ: ಗಿರೀಶನ ತೇಜ ಮತ್ತು ಆತ್ಮತತ್ತ್ವಗಳು ಸೇರಿ ಗಣೇಶನಾಗಿದ್ದಾನೆ. ಇದರಿಂದ ಈತನ ಕಾನೀನನಲ್ಲ.

ಗಣೇಶನು ಗಿರೀಶನ ಅನುಗ್ರಹದಿಂದ ಓಂಕಾರ ಸ್ವರೂಪನಾಗಿ ಸರ್ವಾಧಾರನಾಗಿದ್ದಾನೆ. ಸರ್ವಕಾರ್ಯಗಳಲ್ಲಿ ಅಗ್ರ

ಪೂಜೆಗೆ ಅರ್ಹನಾಗಿದ್ದಾನೆ. ಚೇತನ ಓಂಕಾರ ವಿಘ್ನೇಶ್ವ ನೆನಿಸಿದ್ದಾನೆ. ನಾದ ಮಯ ಓಂಕಾರ ಸ್ವರೂಪ ಶಂಕರನು. ಆ ಶಂಕರನೆ ಗಣನಾಯಕನು. ಆದ್ದರಿಂದ ಓಂಕಾರಾತ್ಮನು

ಶಿವಗಣನಾಯಕನು; ವಿನಾಯಕನು.

"ಗಣಾನಾಂತ್ವಾ ಗಣಪತಿಂ ಹವಾಮಹೇ
ಕವಿಂ ಕವೀನಾಮುಪಮಶ್ರವಸ್ತಮಂ|

ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ
ಆ ನಃ ಶೃಣ್ವನ್ನೂತಿಭಿಃ ಸೀದ ಸಾದನಂ ॥"

—ಋಗ್ವೇದ, ೨-೨೦-೧

ಇದು ಗಣಪತಿಯ ಸ್ತೋತ್ರವಲ್ಲೆಂದು ಹೇಳುತ್ತಾರೆ. ಇದು ಸರಿಯಲ್ಲ. ಬ್ರಹ್ಮಣಸ್ಪತ ಎಂದಿರುವುದರಿಂದ ಮುಂದಿನ ಸೂಕ್ತಗಳಲ್ಲಿ ಮಘವನ್ ಎಂದಿರುವುದರಿಂದ ಇವುಗಣಪತಿ ಸ್ತುತಿ ಅಲ್ಲೆನ್ನಲು ಬರುವುದಿಲ್ಲ. ಈ ಹೆಸರುಗಳೂ ಗಣೇಶನಿಗೆ ಅನ್ವಯ ವಾಗುತ್ತವೆ. ಅಂದಿನ ಎಲ್ಲರೂ ಎಲ್ಲರೂಪನಾಮಗಳನ್ನು ಧರಿಸುತ್ತಿದ್ದರೆಂಬುದನ್ನು ನೆನೆಯಬೇಕು ಅಲ್ಲದೆ 'ಗಣಾನಾಂತ್ವಾ' ಎಂದು ಹೇಳಿ ಮುಂದೆ ಬರೀ ಪತಿಯೆಂದು ಹೇಳಿಲ್ಲ; 'ಗಣಪತಿ' ಎಂದೇ ನಿರ್ದಿಷ್ಟವಾಗಿದೆ. ರೂಢಿ ನಾಮ ಅಥವಾ ಅಂಕಿತ ನಾಮ ಅಂಕಿತವಾಗಿದೆ. ಇಲ್ಲವಾದರೆ ಎರಡನೆ ಗಣಪದಕ್ಕೆ ಸಾರ್ಥಕತೆಯಿರದು. ಇದರಿಂದ ಇದು ಗಣಪತಿಸ್ತುತಿ. ಅತ್ಯಂತ ಬುದ್ಧಿವಂತನಾದ್ದರಿಂದ ಗಣಪತಿಗೆ ಬ್ರಹ್ಮಣಸ್ಪತ ಎಂದಿದ್ದಾರೆ. ಗಣಪತಿಗೂ ಬ್ರಹ್ಮಣಸ್ಪತಿಗೂ ಅಭೇದವಿದೆ. ಈ ಸೂಕ್ತ ಇಬ್ಬರಿಗೂ ಸೇರಿದೆ.

ಗಣಪತಿ-ಮಾರುತಿಗಳ ಸಂಬಂಧದ ಬಗೆಗೆ ಆಲೋಚಿಸಬೇಕಾಗುತ್ತದೆ. ಏಕೆಂದರೆ ಗಣಪತಿ ಶಿವಪುತ್ರ; ಮಾರುತಿ ರುದ್ರಪುತ್ರ; ರುದ್ರವೀರ್ಯೋದ್ಭವನೆಂದು ನಾಮಾವಳಿಯಲ್ಲಿ ಉಕ್ತವಾಗಿದೆ. ಎರಡನೆಯದಾಗಿ ಮಾರುತಿ

ಕೋತಿಯೆಂದು ಭಾವಿಸುವುದು ಸರಿಯಲ್ಲ. ಕಪಿಧ್ವಜನಲ್ಲದೆ ಕಪಿಯಲ್ಲ. ಮಾರುತಿ ರುದ್ರ-ವೀರಭದ್ರರಿಗೆ ಸಂಬಂಧವಲ್ಲದೆ ಶಿವ-ಗಣಪತಿಗಳಿಗೆ ಸಂಬಂಧವಾಗದು. ರುದ್ರ ಬೇರೆ ಶಿವ ಬೇರೆ. ಮಾರುತಿಯ ತಾಯಿ ಅಂಜನಾದೇವಿ ಕಾಳಿಯ ಅನ್ವಯಕ್ಕೆ ಸೇರಿದವಳು. ನಾವು ಮಾತ್ರದಿಂದ ವಾನರತ್ವ ಬಾರದು. ಗಣಪತಿ ವಾಯುತತ್ತ್ವದವನಲ್ಲ; ಆಕಾಶತತ್ತ್ವದವನು. ಶಬ್ದಸ್ವರೂಪನು ವಿದ್ಯಾವಂತನು. ಮಾರುತಿಯು ಮುಖ್ಯವಾಗಿ ಜ್ಯೋತಿ ತತ್ತ್ವದವನು. ಗೌಣವಾಗಿ ವಾಯುತತ್ತ್ವದವನು. 'ಶಬ್ದ ಬ್ರಹ್ಮಾಧಿದೇವತೆಯೇ ಗಣಪತಿ' ಎಂದು ವಾಸಿಷ್ಠ ಮುನಿಗಳ ಸಿದ್ಧಾಂತ ಎಂದು ಶ್ರೀ ಎನ್. ರಂಗನಾಥ ಶರ್ಮ ಹೇಳಿದ್ದಾರೆ. ಅವರು ಮುಂದುವರಿದು ಶಬ್ದಬ್ರಹ್ಮವೇ ಗಣಪತಿಯೆಂದು ಒಪ್ಪಬೇಕು....' ಎಂದು ನಿಶ್ಚಯಿಸಿದ್ದಾರೆ.
(ವಿ. ಭಾ. ಗ. ಪುಟ ೪೪)

ವಿಶಾಖ: ಇದು ಶಿವಕುಮಾರನಾದ ಷಣ್ಮುಖನ ಹೆಸರು ಈತನಿಗೆ ವೀರಭದ್ರನ ಶಕ್ತಿಯೂ ವಿನಾಯಕನ ಯುಕ್ತಿಯೂ ಉಂಟು. ಇವರಿಬ್ಬರ ವ್ಯಕ್ತಿತ್ವವೂ ಉಂಟು. ಅಂತೆಯೇ ಈತನ ನೆಲ ಜಲ ತೇಜ ಈ ಮೂರು ತತ್ತ್ವ ಪ್ರಧಾನನು. ಈತನ ಜನ್ಮಕಥನ ಜಗಕ್ಕೆ ವಿಲಕ್ಷಣ. ವೀರಭದ್ರನು ವೃದ್ಧನಾದ ಬಳಿಕ ಆತನ ಕಾರ್ಯವನ್ನು ಷಣ್ಮುಖನು ಮುಂದುವರಿಸುತ್ತಾನೆ. ವೀರ ಪಡೆಯ ಒಡೆಯನಾಗಿ 'ಸೇನಾನಿ' ಯೆನಿಸುತ್ತಾನೆ. ಯುವರಾಜನಾಗಿ 'ಕುಮಾರ' ನೆನಿಸುತ್ತಾನೆ. ಕುತ್ಸಿತ ಮಾರನೂ ಅಹುದು. ತಾರಕಾಸುರನನ್ನು ಸಂಹರಿಸಿ 'ತಾರಕಾರಿ' ಯೆನಿಸಿದ್ದಾನೆ.

ವೀರೇಶನದು ಕಾಯಬಲ, ವಿನಾಯಕನದು ಬುದ್ಧಿ ಬಲ; ವಿಶಾಖನದು ಚೇತನಬಲ. ವೀರೇಶನೆ ಕಾಯ, ವಿನಾಯಕನೆ ಪ್ರಾಣ, ಷಣ್ಮುಖನೆ ಜೀವ ಅಥವಾ ಆತ್ಮ. ಕಾಯಯೋಗವಿಲ್ಲದೆ ಪ್ರಾಣ ಆತ್ಮಗಳಿರವು; ಅಂದರೆ ಅಭಿವ್ಯಕ್ತಿಯಾಗವು.

ಜೀವಾತ್ಮನಿಗೆ ಯಾವ ಇಂದ್ರಿಯ ಶಾಖೆಗಳ ಸಂಬಂಧವಿಲ್ಲವಾಗಿ ವಿಶಾಖನೆನಿಸಿದ್ದಾನೆ ವಿಶಾಖ-ವಿನಾಯಕ ಓಂಕಾರ ಸ್ವರೂಪರು; ಪರಿಪಿಡಿದು ವಾಚ್ಯ-ವಾಚಕ ಸಂಬಂಧವುಳ್ಳವರು; ವೀರೇಶನು ಶಾಕ್ತ ಅಥವಾ ಲಕ್ಷ್ಯ ಸಂಬಂಧವುಳ್ಳವನು. ಓಂಕಾರಕ್ಕೆ ಈ ಮೂವರು ಅ-ಉ-ಮ ಸ್ವರೂಪದಲ್ಲಿದ್ದಾರೆ.

ಷಡಧ್ವಗಳೆ ಷಣ್ಮುಖಗಳು. ವೈಕುಂಠದಾಚೆ ಈತನ ಲೋಕ. ಬ್ರಹ್ಮವೇತ್ತರಿಂದ ಪೂಜ್ಯನಾಗಿರುವನು. ಸುಬ್ರಹ್ಮಣ್ಯನೆಂದು ಈತನಿಗೆ ಇನ್ನೊಂದು ಹೆಸರು.

————

೧೩. ಭಾರತದ ಪ್ರಪ್ರಥಮ ಕ್ರಾಂತಿ ಮಹಿಳೆ ಭದ್ರಕಾಳಿ !

ಅನಾದಿ ವೀರಶೈವ ಸಂಸ್ಥಾಪಕ ಶ್ರೀ ರುದ್ರದೇವ. ಆತನ ಧರ್ಮಪತ್ನಿ, ಆ ಮಹಾತಮಸ್ಸೆ ತಾನಾಗಿ ಬಂದ ಕಾಳಿದೇವಿ. ಇವರ ಮೊಮ್ಮಗಳು ಭದ್ರ ಕಾಳಿ. ಇವಳು ರುದ್ರಪುತ್ರನಾದ ವೀರಭದ್ರನ ಧರ್ಮಪತ್ನಿ.

ಕಾಳಿ ಪಾರ್ವತಿಯೆಂದು ರುದ್ರ ಶಿವನೆಂದು ಕೆಲವರು ಹೇಳುತ್ತಾರೆ. ಇದು ಸರಿಯಲ್ಲ. ಶಿವ-ಪಾರ್ವತಿಯರಿಗಿಂತ ಬೇರೆಯವರು, ಮತ್ತು ಹಿಂದಿನವರು ರುದ್ರ-ಕಾಳಿಯರು.

ರುದ್ರನು ಮಹಾ (ಪರಂ) ತೇಜಸ್ಸಿನ ಅವರಾವತಾರಿ; ಕಾಳಿಯು ಮಹಾತಮಸ್ಸಿನ ಅಪರಾವತಾರಿ. ಜಗತ್ತಿಗೆ ತೇಜಸ್ಸಿನಷ್ಟೆ ತಮಸ್ಸಿನ ಅವಶ್ಯವಿದೆ. ಹಗಲಿನಂತೆ ಇರುಳಿಲ್ಲದಿದ್ದರೆ ಜಗದ ಜನದ ಜೀವನಕ್ಕಿರಲಿಲ್ಲ ವಿಶ್ರಾಂತಿ! ಇರಲಿಲ್ಲ ಶಾಂತಿ!! ಕಾಳಿ ರಜೋಗುಣಗಳನ್ನು ತಜೋಗುಣಗಳನ್ನು ಸಂಹರಿಸಿ ಸತ್ವವನ್ನುಸಾತ್ವಿಕತನ್ನು ರೂಪಿಸಿದ ಆದಿ ಸಾಕಾರ ಶಕ್ತಿ!

"ಕಾಳಿ ಕಂಕಾಳದಿಂದ ಮುನ್ನ,
ಉಮೆಯ ಕಲ್ಯಾಣದಿಂದ ಮುನ್ನ,
ತ್ರಿಪುರ ಸಂಹಾರದಿಂದ ಮುನ್ನ...."

ಎಂದು ಹೇಳಿ ಬಸವಣ್ಣನು ಕಾಳಿ ಉಮೆಯರಿಗಿಂತ ಬೇರೆಯವಳೆಂದು ಹಿಂದಿನವಳೆಂದು ಪ್ರಯೋಗಕ್ರಮದಲ್ಲಿ ಒಪ್ಪಿರುವನೆಂಬುದನ್ನು ವಿಚಾರ ಶೀಲರು ಗಂಭೀರ ಭಾವದಿಂದ ಗಮನಿಸಬೇಕು.

ಕಾಳಿಯನ್ನೆ 'ಕಾಲಿ' ಯೆಂದೂ ಕರೆವರು. ಇವಳ ಈ ಹೆಸರೇ ಹೇಳುವುದು ಇವಳು ವೀರ ಮಹಿಳೆ ಎಂದು! ವೈರಿಗಳು ಇವಳನ್ನು 'ರಣಮಾರಿ' ಎಂದು ಕರೆದು ತೃಪ್ತಿಗೊಳ್ಳುವರು. ಇವಳು ಸಿಡಿದು ರಣರಂಗಕ್ಕೆ ಇಳಿಯ ಬೇಕಾದರೆ, ಇಳಿದು ಗೆಲವನ್ನು ಗಳಿಸಬೇಕಾದರೆ ಎದುರಾಳಿಗಳ ದೌರ್ಜನ್ಯ ಕಾಳಿಯ ಅಪ್ರತಿಮ ಶೌರ್ಯ ಎರಡೂ ಏಕಕಾಲಕ್ಕೆ ಅಭಿವ್ಯಕ್ತವಾಗುತ್ತವೆ

ಕಾಳಿ ಕಪ್ಪೆಂದು ಬಗೆದು ಮನಗುಂದ ಬೇಕಿಲ್ಲ; ಕೃಷ್ಣ ಕಪ್ಪಲ್ಲವೇನು? ಕಸ್ತೂರಿ ಕಪ್ಪಲ್ಲವೇನು? ಮೋಡ ಕಪ್ಪಲ್ಲವೇನು? ಕರದ ಕುರುಹು ಕಪ್ಪಲ್ಲವೇನು?

ಕಾಳಿಯ ಮೊಮ್ಮಗಳು ಭದ್ರಕಾಳಿ! ಇವಳು ಶುಭ ಸುಖಶ್ರೇಯಸ್ಸುಗಳ ಸ್ವರೂಪಿಣಿಯಾಗಿ ಅವತರಿಸುವಳು. ಸುರಕ್ಷತೆಯ ಶ್ರೇಷ್ಠತೆಯ ಪ್ರತಿನಿಧಿಯಾದಳು ಬಿಗಿತನಕ್ಕೆ ಗಟ್ಟಿತನಕ್ಕೆ ಹೆಸರಾಂತಳು. ಇವೆಲ್ಲದರ ಸಾಂಕೇತಿಕವಾಗಿ 'ಭದ್ರ' ಪದ ವಿಶೇಷಣ ಅವಳಿಗೆ ಬಂದಿತು. ಅವಳ ಪತಿ ವೀರಭದ್ರನಾದರೆ, ಆತನ ಸತಿ ಭದ್ರಕಾಳಿಯೆನಿಸಿದಳು. ಇಬ್ಬರೂ ಭದ್ರರು, ಭದ್ರಾಕರರು; ಭದ್ರ ಲಕ್ಷಣರು ಮತ್ತು ಭದ್ರ ಪೀಠರು.

ಜನ ಜೀವನವನ್ನು ಹಾಳು ಮಾಡುವ ಜನ್ನಗಳೆಂದರೆ ಆಗದು ಆ ದೇವಿ ಭದ್ರಕಾಳಿಗೆ! ಆದರಿಂದಾಗಿ ಅಂತಹ ಯಜ್ಞನಿರೋಧ ಕ್ರಾಂತಿಯಲ್ಲಿ ತಾನೂ ತನ್ನ ಪತಿದೇವನೊಂದಿಗೆ ಹೊಯ್‌ಕಯ್ ಆಗಿ ಅಂದೆ ಭಾಗವಹಿಸಿದಳು. ವೀರ ಮಹಿಳೆಯೆಂದು ವಿಶ್ವಖ್ಯಾತಿಯನ್ನು ಗಳಿಸಿದಳು. ವಿಶುದ್ಧ ಸಂಸ್ಕೃತಿಯನ್ನು ಪೋಷಿಸಿದಳು. ದೇವಲೋಕದ ಹೆಣ್ಣುಮಕ್ಕಳಿಗೆಲ್ಲ ಹದಿಬದಿಯ ಧರ್ಮವನ್ನು ಬೋಧಿಸಿದಳು. ತನ್ನೊಡೆಯನಿಗೆ ಹೇಳಿಅವರವರ ಗಂಡರನ್ನು ಮರಳಿ ಬದುಕಿಸಿ ಚಿರಮಂಗಳೆಯರನ್ನಾಗಿಸಿದಳು;ಮುತ್ತೈದೆಯರನ್ನಾಗಿಸಿದಳು. ಅವರವರಿಗೆ ಅವರವರ ಪತಿಗಳನ್ನು ದಾನ ಮಾಡಿದ ಮಾಡಿಸಿದ ಕೀರ್ತಿ ಭದ್ರಕಾಳಿ ದೇವಿಯದು. ಮಹಾಕವಿ ಕಾಳಿದಾಸ ಕವಿಗೆ ಕಾವ್ಯಶಕ್ತಿಯನ್ನಿತ್ತ ಮಹಾವಾಗ್ದೇವಿ ಭದ್ರಕಾಳಿ!

ಭದ್ರಕಾಳಿಯದು ಧರ್ಮಯುದ್ಧ. ದ್ವೇಷ ಮನೋಭಾವ ಅವಳಲ್ಲಿರಲಿಲ್ಲ. ಅನ್ಯಾಯ ಅನೀತಿಗಳನ್ನು ಅವಳು ಸಹಿಸುತ್ತಿರಲಿಲ್ಲ. ಅವಳದು ಭದ್ರವಾದ ಭಾವನೆ; ಭದ್ರವಾದ ಬಾಳುವೆ; ಶುಭ್ರವಾದ ಬದುಕು. ಧರ್ಮ ವೀರಕಹಳೆಯನ್ನೂದಿದ ಆದರ್ಶ ಅವಳದು. ಅಂದಿನ ನಾರಿಯರಲ್ಲಿ ನವ ಚೈತನ್ಯವನ್ನು ತಂದು ತುಂಬಿದವಳು ಸ್ತ್ರೀಸ್ವಾತಂತ್ರ್ಯವನ್ನು ಸಾರಿದವಳು ಸ್ತ್ರೀಧರ್ಮಕ್ಕೆ ಪುನಶ್ಚೇತನವನ್ನಿತ್ತವಳು ಶ್ರೇಷ್ಠವಾದ ಸತ್ವಗಳನ್ನು ತನ್ನ

ಅನುಷ್ಠಾನದಲ್ಲಿ ತಂಪವಳು ಸರ್ವಾಪರ್ಯವಾದ ದಾಂಪತ್ಯಧರ್ಮದಲ್ಲಿದವಳು. ಶಕ್ತಿಶಾಲಿನಿಯಾದ ಅವಳಲ್ಲಿ ಅಧಿಕಾರಂದಾಹವಿರಲಿಲ್ಲ; ಅರ್ಥಮೋಹವಿರಲಿಲ್ಲ ಯಾವಾಗಲೂ ಜಗತ್ತಿನ ಕಲ್ಯಾಣಕ್ಕಾಗಿ ಜನತೆಯ ಉಪಕಾರಕ್ಕಾಗಿ ಜಾಗ್ರತಳಾಗಿರುತ್ತಿದ್ದಳು. ತೃಣದಷ್ಟಾದರೂ ಪಾಶಿವೀತೃಷ್ಣೆ ಅವಳಲ್ಲಿರಲಿಲ್ಲ; ದೋಷಗಳಿಲ್ಲಿದ್ದರೂ ಅವನ್ನು ದೂರೀಕರಿಸುವುದೆ ಅವರ ಧರ್ಮ. ದಂಪತಿಗಳಿಬ್ಬರ ದೇಹಗಳು ಬೇರೆ, ಧ್ಯೇಯ ಒಂದೆ! ಜನ ಜೀವನದ ಆದರ್ಶ ಜ್ಯೋತಿಗಳು ! ಅವರಿಬ್ಬರು ಇಂದು ನಮ್ಮ ಹೃದಯ ವೀಣೆಯನ್ನು ಚದುರತೆಯಿಂದ ಮೀಂಟಿ ಮಧುರನಾದ ತುಂಬಿದ ಕಲಾಚೇತನರು. ಭಾವ ಬರಿಸಿದ ಭವ್ಯಾತ್ಮರು. ನಮ್ಮ ನೆತ್ತರದ ಹನಿ ಹನಿಗೂ ಶೈವೀ ಶಕ್ತಿಯನ್ನು ತಂದ ಸರ್ವಸಮರ್ಥರು. ನಮ್ಮ ಸಿಡುಗಾಲದ ಸಾಮಾಜಿಕ ಸಚ್ಚಾರಿತ್ರದ ಪ್ರಜ್ಞೆಯನ್ನು ಪ್ರಕಾಶಗೊಳಿಸಿದ ಪ್ರತಿಭಾನ್ವಿತರು. ಬತ್ತಿ ನಿಂತ ನಮ್ಮ ಮನಸ್ಸರೋವರ ನಲ್ಲಿ ನಮ್ಮ ಪುರಾತನತೆಯ ಚಿಂತನ ಚಿಲುಮೆಯನ್ನು ಚಿಮ್ಮಿಸಿದವರು. ಒಣಗಿ ಬರಡಾಗಿ ನಿಂತ ಬಾಳ ಮರಗಳ ಬೇರುಗಳಿಗೆ ಭಕ್ತಿರಸವನ್ನು ಸಿಂಚನಗೊಳಿಸಿ ಶಿವಗುಣಗಳನ್ನು ಚಿಗುರಿಸಿದ ಜೀವಂತ ವಸಂತರು; ಶಿವ ಭಾವ ಹೂವುಗಳನ್ನು ಅರಳಿಸಿದವರು. ತಾತ್ತ್ವಿಕದ ತನಿವಣ್ಣುಗಳನ್ನು ರೆಂಬೆ ರೆಂಬೆಗಳಲ್ಲಿಯೂ ಬಿಡಿಸಿದವರು. ಅವುಗಳ ಮಧುರರಸರುಚಿಯನ್ನು ತೋರಿದವರು. ಶತ್ರು ವರ್ಗದಿಂದ ಸಂಹಾರವಾಗುತ್ತಿದ್ದ ನಮ್ಮ ಸನಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದವರು.

ಆದ್ದರಿಂದ ಕಳಾಮಯಿಯಾದ ಕಾಳಿ ಭಾರತದ ಆರಾಧ್ಯದೇವತೆಯಾಗಿದ್ದಾಳೆ. ಅವಳ ಹೆಸರಿನ ಊರುಗಳಿಗೆ ಕಡಿಮೆಯೇನಿಲ್ಲ. ಅದೇ ಹೆಸರನ್ನಿರಿಸಿಕೊಂಡ ಹೆಣ್ಣು ಮಕ್ಕಳ ಅಭಾವವೇನಿಲ್ಲ ಕಾಳವ್ವೆ ಕಾಳಮ್ಮ ಮೊದಲಾದ ಶಿವ ಶರಣೆಯರೂ ಕಾಳಯ್ಯ ಕಾಳಪ್ಪ ಕಾಳಿಂಗಯ್ಯ ಮಹಾಂಕಾಳಯ್ಯ ಹೆಸರಿನವರೂ ಆಗಿದ್ದಾರೆ. ಕಾಳಿಕಾ, ಕಾಳಿಕಾಪುರ ಎಂದು ಮುಂತಾದ ಊರುಗಳಿವೆ.

ಜಯ ವೀರೇಶನ ವೀರರಾಣಿ,
ಜಯ ಜಗದ ಕಲ್ಯಾಣಿ
ಜಯ ಜಯ ಭಾರತ ಮಹಿಳಾ ಚಿಂತಾಮಣಿ
ಓ ಭದ್ರಕಾಳಿಕಾ ಭವಾನಿ
ಮೂಲೋಕ ಮಾತೆ ನಿನಗೆ ಶರಣು ಶರಣಾರ್ಥಿ !

೧೪. ಅನಾದಿ ಶಕ್ತಿ ಮಹಾಕಾಳಿ ಆದಿಶಕ್ತಿ ಭದ್ರಕಾಳಿ!

ಜಗತ್ತಿನ ಮೂಲಾಧಾರ ಆ ಮಹಾಶಕ್ತಿ. ಅದನ್ನೆ ಮಹಾ ತಮಸ್ಸೆಂದು ತಿಳಿದವರು ಹೇಳಿರುವರು. ಅದನ್ನೆ ಆ ಪರಾತ್ಪರ ಮಹಾಶಕ್ತಿಯೆಂದು ನಿರೂಪಿಸುವರು. ಆ ಮಹಾಶಕ್ತಿಯೆ ಎಲ್ಲ ಲೋಕಗಳಿಗೆ ಕಾರಣ, ಕರ್ತ್ರಳು. ಉಳಿದೆಲ್ಲ ಶಕ್ತಿಯರೂ ಅವಳಿಂದಾದವರು. ಅವಳ ಅಂಶರು.

ಆ ಮಹಾ ತಮಸ್ಸಿಗೆ ಸರಿಯಾಗಿ ಮಹಾತೇಜಸ್ಸೊಂದು ತನ್ನಿಂದ ತಾನೆ ಉದಿಸಿತು. ಅದರಿಂದ ಅದು ಸ್ವತಃಸಿದ್ಧ; ಸ್ವಯಂಜ್ಯೋತಿ ಆ ಮಹಾ ತಮಸ್ಸು ಪರಾಶಕ್ತಿಯಾಗಿ ಬಂದರೆ ಆ ಮಹಾ ತೇಜಸ್ಸು ಪರಂಜ್ಯೋತಿಯಾಯಿತು. ಪರಂಜ್ಯೋತಿಯಿಂದ ಮಹಾರುದ್ರ, ಪರಾಶಕ್ತಿಯಿಂದ ಮಹಾಕಾಳಿ. ಇವರಿಬ್ಬರಿಲ್ಲದೆ ಪ್ರಳಯ-ಸೃಷ್ಟಿಗಳಿಲ್ಲ; ಹಗಲಿರುಳುಗಳಿಲ್ಲ. 'ಪಂಚಾಯತನ' ಪೂರ್ಣಗೊಳ್ಳುವುದಿಲ್ಲ. ಪಂಚಾಯತನದಲ್ಲಿ ಬರುವ ಶಕ್ತಿಯೆ ಮಹಾಕಾಳಿ ಇದರಿಂದ ಅವಳ ಲೋಕಪ್ರಿಯತೆ ಲೋಕಪೂಜ್ಯತೆಗಳು ಅಭಿವ್ಯಕ್ತವಾಗುತ್ತವೆ. ಸೃಷ್ಟಿಯಲ್ಲಿ ಶಕ್ತಿಬೀಜಕ್ಕಿರುವ ಶ್ರೇಷ್ಠತೆ ಸ್ಪಷ್ಟವಾಗುತ್ತದೆ.

ಆ ಮಹಾಕಾಳಿಯನ್ನು ಕಾಳಿಯೆಂದು ಕಾಳಿಕೆ (ಕಾಲಿಕೆ)ಯೆಂದು ದುರ್ಗಾದೇವಿಯೆಂದು ಕರೆಯಲಾಗುತ್ತದೆ. ಕಾಲಿಕೋಪನಿಷತ್ತು ಅವಳನ್ನು ಬ್ರಹ್ಮರೂಪಿಣಿಯನ್ನಾಗಿ ಸುಭಗಳನ್ನಾಗಿ ಇಂದಿರೆಯನ್ನಾಗಿ ಸಮಸ್ತರೂಪಿಣಿಯನ್ನಾಗಿ ತ್ರಿಗುಣಿತಳನ್ನಾಗಿ ವರ್ಣಿಸಿದೆ. "ಅಥ ಹೈಷಃ ಕಾಲಿಕಾಮನು ಜಾಪೀ ಯಃಸದಾ ಶುದ್ಧಾತ್ಮಾ ಜ್ಞಾನವೈರಾಗ್ಯಯುಕ್ತಃ ಶಾಂಭವೀ ದೀಕ್ಷಾಸು ರಕ್ತ: ಶಾಕ್ತಾಸು !" –ಕಾಲಿಕೋಪನಿಷತ್. ಅಲ್ಲದೆ ಕಾಳಿಕಾಮಂತ್ರ ಸಿದ್ಧಿಯಿಂದ ವಾಗೀಶ್ವರ, ನಾರೀಶ್ವರ, ದೇವೇಶ್ವರ, ಸರ್ವಸಿದ್ಧೀಶ್ವರನಾಗುವದಲ್ಲದೆ ಕವಿತ್ವ ಶಕ್ತಿಯನ್ನು ಕಾಲಜಯತ್ವವನ್ನು ಪಶುಧನ ಧಾನ್ಯ ಸಮೃದ್ಧಿಯನ್ನು ಹೊಂದುತ್ತಾನೆ. ಗುರುಭಕ್ತ, ದೇವಭಕ್ತ, ಜೀವನ್ಮುಕ್ತನಾಗುತ್ತಾನೆ. ಇದಕ್ಕೆ ಶ್ರೀರಾಮಕೃಷ್ಣ ಪರಮಹಂಸರು ಸತ್ಯಸಾಕ್ಷಿ ಕುರುಬಕಾಳಿ

ದಾಸನು ಕವಿಕಾಳಿದಾಸನಾದುದು ಸಾಹಿತ್ಯಸಾಕ್ಷಿ. ಕಾಳಿಕಾಶಕ್ತಿಗೆ ಇವರಿ-ಬ್ಬರೂ ಪ್ರತ್ಯಕ್ಷಸಾಕ್ಷಿ ಭಾರತದಲ್ಲಿ ಶಕ್ತಿಪೂಜೆ ಮೊತ್ತಮೊದಲಾದುದು ಕಾಳಿಕಾಶಕ್ತಿಯಿಂದಲೆ ಎಂಬುದನ್ನು ನೆನೆಯಬೇಕು.

"....ರೋದಸೀ ಮರುತೋ ವಿಷ್ಣುರರ್ಹಿರೇ" —ಋಗ್ವೇದ ಸಂಹಿತೆ ರೋದಸೀ ಅಂದರೆ ರುದ್ರಪತ್ನಿ, ಮತ್ತು ಮರುತ್ತರು ವಿಷ್ಣು ಇವರು ಯಜ್ಞದಲ್ಲಿ ಪೂಜ್ಯತೆಯನ್ನು ಪಡೆಯುತ್ತಾರೆ. ಇಲ್ಲ ರೋದಸೀ ಶಬ್ದದಿಂದ ನಾವು ದಿಂದ ಪ್ರಯುಕ್ತಳಾದ ರುದ್ರಪತ್ನಿಯೆ ಮಹಾಕಾಳಿ ಆ ಮಹಾಶಕ್ತಿ ಸಮಷ್ಟಿ ಸ್ವರೂಪಳಾಗಿರುವಂತೆ ವ್ಯಷ್ಟಿಸ್ವರೂಪಳೂ ಆಗಿರುವಳು ಪ್ರತಿರೂಪದಲ್ಲಿಯೂ ಪ್ರತಿಭಾರೂಪದಲ್ಲಿರುತ್ತಾಳೆ.

"ನೀಲತೋಯದಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ |
ನೀವಾರ ಶೂಕವತ್ತನ್ವೀ ಪೀತಾ ಭಾಸ್ವತ್ಯಣೂಪಮಾ ||"

ಎಂದು ಕಾಳಿಕೋಪನಿಷತ್ತು ವ್ಯಷ್ಟಿನಿಷ್ಠ ಕಾಳಿಕಾ ಕಳೆಯನ್ನು ಹೃದಯಂಗಮವಾಗಿ ವರ್ಣಿಸಿದೆ. ಆ ಮಹಾನೀಲಕಳೆಯನ್ನು ಸಾಕ್ಷಾತ್ಕರಿಸಿಕೊಳ್ಳದೆ ಸತ್ಕ್ರಿಯೆ ಸಮ್ಯಕ್‌ಜ್ಞಾನಗಳು ಸಮನಿಸವು. "ನಾನ್ಯಃ ಪರಮಃ ಪಂಥಾ ವಿದ್ಯತೇ ಮೋಕ್ಷಾಯ ಜ್ಞಾನಾಯ ಧರ್ಮಾಧರ್ಮಾಯ | ತತ್‌ಸರ್ವಂ ಭೂತಂ ಭವ್ಯಂ ಯತ್ ಕಿಂಚಿತ್ ದೃಶ್ಯಮಾನಂ ಸ್ಥಾವರ ಜಂಗಮಂ ತತ್ ಸರ್ವಂ ಕಾಳಿಕಾತಂತ್ರೇ ಓತಂ ಪ್ರೋತಂ ವೇದ |ಯ ಏವಂ ಮನುಜಾಪೀ ಸ ಪಾಪ್ಮಾನಂ ತರತಿ | ಸ ಭ್ರೂಣಹತ್ಯಾಂ ತರತಿ | ಸೋಽಗಮ್ಯಾಗಮನಂ ತರತಿ | ಸ ಸರ್ವಸುಖಮಾಪ್ನೋತಿ | ಸ ಸರ್ವಂ ಜಾನಾತಿ | ಸ ಸರ್ವಶಂಸ್ಯಾಸೀ ಭವತಿ |...." ಆ ಮಹಾನೀಲವೆ ಚಿತ್ಕಳೆ, ಆ ಚಿತ್ಕಳೆಯೆ ಮಹಾನೀಲ ಅದು ವಿದ್ಯುಲ್ಲೇಖೆಯಂತೆ ವಿಶೇಷವಾಗಿ ಬೆಳಗುತ್ತದೆ. ಅದನ್ನು ಗುರುಕಾರುಣ್ಯದಿಂದ ಕರಸ್ಥಲಕ್ಕೆ ಪಡೆಯದೆ ಪೂಜಿಸದೆ ಬೇರೆ ಮೋಕ್ಷಕ್ಕೆ ದಾರಿಯಿಲ್ಲ. ಆ ಕಾಳಿಕಾಶಕ್ತಿಯೇ ಕ್ರಿಯಾಶಕ್ತಿಯಾಗಿ ಸಾಕಾರ ಕರಸ್ಥಲದಲ್ಲಿ ನೀಲಕಳೆಯಾಗಿ ನೆಲಸಿರುತ್ತದೆ. ನೇತ್ರಸ್ಥಲದಲ್ಲಿ ನೀಲವಾಗಿ ಮಧ್ಯನೀಲವಾಗಿ ಮಹಾನೀಲವಾಗಿ ಬಾಳಿಗೆ ಬೆಳಗಾಗಿ ಬೆಳಗುತ್ತದೆ. ಅದನ್ನು ಗುರುದೇವನು

ಸಾಕ್ಷಾತ್ಕರಿಸಿ ಕೊಡುತ್ತಾನೆ. ವೀರಶೈವ ಸಂಸ್ಕಾರ ಪ್ರಕ್ರಿಯೆಯಲ್ಲಿ! ಅದು ವಿಶ್ವಾಧಾರವಾಗಿದೆ. ಆ ಅನಾದಿ ಮಹಾಶಕ್ತಿಯೆ ಕಾಳಿಕಾದೇವಿಯಾಗಿ ಅವತರಿಸಿದೆ. ಆ ಶಕ್ತಿಯನ್ನು ಆರಾಧಿಸಿ ಅನೇಕರು ಜೀವನ್ಮುಕ್ತರಾಗಿದ್ದಾರೆ. ಅಂತವರಲ್ಲಿ ನವಯುಗದ ಶ್ರೀರಾಮಕೃಷ್ಣ ಪರಮಹಂಸರು ಒಬ್ಬರುಮಾತ್ರವಲ್ಲ ಅಗ್ರಗಣ್ಯರು.

ಆ ಅನಾದಿಶಕ್ತಿಯಾದ ಮಹಾಕಾಳಿಯೆ ಆದಿಶಕ್ತಿಯಾದ ಭದ್ರಕಾಳಿಯಾಗಿ ಪುನರವತರಣವಾಗುತ್ತಾಳೆ; ಗಣರನ್ನು ಪುನಶ್ಚೇತನಗೊಳಿಸುತ್ತಾಳೆ.

"ವೀರಭದ್ರಾಕೃತಿರ್ಭೂತ್ವಾ ಭದ್ರಕಾಳೀ ಪ್ರಿಯಃ ಶಿವಃ!" ಎಂದು ಸೂಕ್ಷ್ಮಾಗಮನಿರೂಪಣೆ. ಇಲ್ಲಿ ಭದ್ರಕಾಳೀ ಶಕ್ತಿಯ ಉಲ್ಲೇಖವಿದೆ.
ಭದ್ರಕಾಳಿಯನ್ನು ವಚನಕಾರರು ಮಂಗಲ ಮಂತ್ರಶಕ್ತಿಯನ್ನಾಗಿ ಅಂಗೀಕರಿಸಿರುವರು.

"ಇದ್ದುದ ಹೇಳಲಿಲ್ಲ, ಇದ್ದುದ ತೋರಲಿಲ್ಲ;
ಹೊದ್ದಿದಾಶ್ರಮವ ನಾನೇನೆಂಬೆನು ಶಿವನೆ?
ಭದ್ರಕಾಳಿಯ ಬಸುರೊಳಗಿದ್ದ ಬಾವಿಯ ಸರ್ಪನು,
ಸಿದ್ಧರಸದ ಘುಟಿಕೆಯ ನುಂಗಿ, ಎದ್ದು ಆಡಿತ್ತು ನೋಡಾ!
ಹದ್ದಿನ ಹೆಡೆಯಲ್ಲಿ ಮಾಣಿಕವಿದ್ದಿಹುದು.
ಇಲ್ಲೆಂದು ಎದ್ದು ಹೇಳುವ ಕನಸು ತಾನಲ್ಲ ಗುಹೇಶ್ವರಾ!"

ಪ್ರಾಸಾದಿಕಲಿಂಗದ ಅವಿರಳಾನುಭಾವಿಯು ತಾನು ತಳೆದ ಆ ಪರಿಣಾಮ ಸಂಸ್ಥಿತಿಯನ್ನು ನುಡಿದು ಹೇಳಲಾರ, ಹಿಡಿದು ತೋರಲಾರ. ತಾನು ಮಾತ್ರ ಆ ಪರಮಾನುಭಾವಾನಂದದಲ್ಲಿರುವನು. ಆ ಘನಕ್ಕೆ ಘನವಾದ ಸಮರಸಸ್ಥಿತಿಯೆ ಆತ ಹೊದ್ದ ನೆಲೆ. ಅದನ್ನು ವಚಿಸಿ ರೂಹಿಸಲು ಆಗದು-ಸಾಕ್ಷಾತ್ ಶಿವನ ಮುಂದೆ ಹೇಳಿಕೊಳ್ಳಲೂ ಬಾರದು. ಭದ್ರಕಾಳಿಯೆಂಬ ಆ ಪರಾಶಕ್ತಿಯ ಬಸಿರೊಳಗಿರುವ ಅನುಭೂತದ ಮಡುವಿನಲ್ಲಿರುವುದು ಮನಃ

ಕುಂಡಲಿ. ಮನ ಆಗ-ಘನವಾಗಿ ಸಿದ್ಧರಸದ ಘಟಿಕೆಯನ್ನು ಅಂದರೆ ಪರ-
ಮಾನಂದ ಬಿಂದುವನ್ನು ಕುಡಿದು ಎಚ್ಚತ್ತು ಆಡುವುದು; ಅಂದರೆ ಸ್ವಲೀಲೆ
ಯಲ್ಲಿರುವುದು. ಮತ್ತೊಂದರ್ಥದಲ್ಲಿ ಭದ್ರಕಾಳಿ. ಎಂದರೆ ಮಂಗಲ ಮಂತ್ರ
ಶಕ್ತಿ ಅಥವಾ ಆ ಪರಾವಾಕ್ ಶಕ್ತಿ. ಅದರ ಒಡಲಲ್ಲದೆ ಚಿದಮೃತ ಅದನ್ನು
ಪಡೆದ ಮನಃಕುಂಡಲಿ ಉನ್ಮನಿಯೆನಿಸಿ ಆ ಸಿದ್ಧರಸರೂಪ ಪರಮಾನಂದ
ವನು ಪಡೆದು ಅತ್ಯಂತ ಜಾಗ್ರತಗೊಳ್ಳುತ್ತದೆ; ಲಿಂಗಲೀಲೆಯೊಳಗಿ
ತ್ತದೆ. ಇದರಿಂದ ಪ್ರಭು ಭದ್ರಕಾಳಿಯನ್ನು ಕಂಡ ದೃಷ್ಟಿ ಗೋಚರಿಸು
ತ್ತದೆ. ಪರಾಶಕ್ತಿ-ಪರಾವಾಣಿ ಭದ್ರಕಾಳಿ ಎಂಬುದು ಏಕವಾಗುತ್ತದೆ.

"ಕಾಮನ ಕಣ್ಣ ಮುಳ್ಳುಕಳೆದು,
(ಮನೋ) ಭೂಮಿಯ ತೈಲ (ಮೋಹ)ದ ಸೀಮೆಯ ಕೆಡಿಸಿ,
ಹೋಮವನುರುಹಿ ದಕ್ಷನ ತಲೆಯ ಹರಿದ
ನಿಸ್ಸೀಮ ಶರಣನ ನಿಲವನರಿಯಬಹುದೆ?...."

ಎಂದು ಅದೇ ಪ್ರಭುದೇವನು ಇನ್ನೊಂದು ವಚನದಲ್ಲಿ ಹೀಗೆ ನಿರೂಪಿ
ಸಿದ್ದಾನೆ. ದಕ್ಷನ ನಿಗ್ರಹಕ್ಕೂ ಅನುಗ್ರಹಕ್ಕೂ ಕಾರಣನಾದ ವೀರಭದ್ರ
ದೇವನೊಬ್ಬ ನಿಸ್ಸೀಮ ಶರಣ; ನಿರುಪಮ ಶರಣ. ಆತನ ಆ ಪುಣ್ಯಾಂಗನೆ
ಭದ್ರಕಾಳಿ ದಿಟಕ್ಕೂ ಪರಾಶಕ್ತಿಯೆ ಅಹುದು. ಆದಿಶಕ್ತಿಯನ್ನು ಆಳವಡಿಸಿ
ಕೊಂಡು ಪರಾಶಕ್ತಿಯ ಮೇಲು ಮೆಟ್ಟಲಕ್ಕೆ ಏರಿದ್ದಳೆಂದು ಅಭಿವ್ಯಕ್ತಿಯಾ
ಗುತ್ತದೆ.

———

ಶಿವಾಗಮಗಳಲ್ಲಿ ಸೂಕ್ಷ್ಮಾಗಮ ಶ್ರೇಷ್ಠ. ಏಕೆಂದರೆ ಶ್ರುತಿತಂತ್ರ ತತ್ತ್ವಜ್ಞನಾದ ಶಿವನು ಶಿವೆಯ ಕೇಳಿಕೆಯಂತೆ ಎಲ್ಲತಂತ್ರಗಳ ಸಾರಾಂಶವನ್ನು ಇದರಲ್ಲಿ ಸೂಕ್ಷ್ಮವಾಗಿ ಕರುಣೆಯಿಂದ ನಿರೂಪಿಸಿದ್ದಾನೆ. ಬಹು ಶ್ರವಣದಿಂದುಂಟಾದ ಶಿವೆಯ ಚಿತ್ತಚಾಂಚಲ್ಯವನ್ನು ನೀಗಿಸುತ್ತಾನೆ- ಸೂಕ್ಷ್ಮಾಗಮ ಸತ್ಯಾರ್ಥವುಳ್ಳುದಾಗಿದೆ, ಪರಮಾರ್ಥಬೋಧಕವಾಗಿದೆ; ಶಿವಜ್ಞಾನೈಕ ಸಾಧನವಾಗಿದೆ. ಅದರಲ್ಲಿ ಶಿವನು ಪರಶಿವನನ್ನು ಹೀಗೆ ಲಕ್ಷಿಸಿದ್ದಾನೆ.

"ಅಸ್ತಿ ಕಶ್ಚಿತ್ ಸ್ವತಃಸಿದ್ಧಃ ಸಚ್ಚಿದಾನಂದಲಕ್ಷಣಃ
ನಿತ್ಯೋ ನಿರಂಜನಃ ಶುದ್ಧೋ ನಿರ್ಮಲೋ ನಿರುಪಪ್ಲವಃ |
ನಿರ್ಗುಣೋ ನಿತ್ಯಸಂಪನ್ನೋ ನಿರ್ಮಾಯೋ ನಿರುಪಾಧಿಕಃ
ಅಕಾಯೋ ಭಕ್ತಕಾಯಶ್ಚ ಪರಾತ್ಪರತರಃ ಶಿವಃ |
ಏಕೋ ರುದ್ರಃ ಪರಂಜ್ಯೋತಿಃ ಪರಮಾತ್ಮಾ ಸನಾತನಃ
ಸಾದಾಖ್ಯಪಂಚಕಾತೀತೋ ವೇದ ವೇದಾಂತಗೋಚರಃ
ಷಡಧ್ವಕರ್ತಾ ದೇವೇಶಃ ಸರ್ವತತ್ತ್ವೋಪರಿಸ್ಥಿತಃ||"

ಇದರಿಂದ ಸಿವಬೇರೆ, ಪರಶಿವ ಬೇರೆ ಎಂಬುದು ಅರಿಕೆಯಾಗುತ್ತದೆ. ಪರಶಿವನು ಪರಾತ್ಪರನು, ಸ್ವತಸ್ಸಿದ್ಧನು, ಸಚ್ಚಿದಾನಂದಸ್ವರೂಪನು, ನಿರಂಜನನು, ಶುದ್ಧನು, ನಿರ್ಮಲನು, ನಿರ್ಗುಣನು, ನಿರ್ಮಾಯನು, ನಿರುಪಾಧಿಕನು, ಉಪಪ್ಲವವಿಲ್ಲದಾತನು, ಅಕಾಯನು, ಅದ್ವಿತೀಯನು, ರುದ್ರನು, ಪರಂಜ್ಯೋತಿಯು, ಪರಮಾತ್ಮನು,ಸನಾತನನು; ಪಂಚಸಾದಾಖ್ಯಕ್ಕೆ ಅತೀತನು, ವೇದ ವೇದಾಂತ ಗೋಚರನು, ಷಡಧ್ವಗಳಿಗೊಡೆಯನು, ದೇವರಿಗೆಲ್ಲ ದೇವನು, ಮೂವತ್ತಾರು ತತ್ತ್ವಗಳನ್ನು ಮೀರಿದಾತನು. ಶಿವೆಯೊಡೆಯನಾದ ಶಿವನು ಸ್ವತಸ್ಸಿದ್ಧನಲ್ಲ, ನಿರಂಜನನಲ್ಲ, ನಿರ್ಗುಣನಲ್ಲಿ, ನಿರ್ಮಾಯನಲ್ಲ, ಅಕಾಯನಲ್ಲ ಸಕಾಯ, ದ್ವಿತೀಯ, ಮತ್ತು ರುದ್ರನಲ್ಲ, ಆ ಪರಶಿವನಷ್ಟು ಸನಾತನನಲ್ಲ; ಪರಂಜ್ಯೋತಿಸ್ವರೂಪನಲ್ಲ; ಸಾದಾಖ್ಯಸಹಿತ; ಷಟ್‌ತ್ರಿಂಶತ್‌ತತ್ತ್ವಗಳಲ್ಲಿ ಒಬ್ಬ.

ಇದರಿಂದ ಸಿದ್ಧವಾಗುವುದೇನು? ಈ ಶಿವಾವಲ್ಲಭನಾದ ಶಿವನು ಚಾರಿತ್ರವುಳ್ಳವನು, ಇತಿಹಾಸಕ್ಕೆ ಸಿಲುಕುವಾತನು; ಸಗುಣನು, ಶಕ್ತಿವಿಶಿಷ್ಟನು; ಪಂಚವಿಂಶತಿಲೀಲೆಗಳಿಗೆ ಒಳಗಾದವನು. ಇವುಗಳಲ್ಲಿ ವೀರಭದ್ರಾವತಾರವೂ ಒಂದು. ಸೂಕ್ಷ್ಮಾಗಮದಲ್ಲಿ ಇದು ಹನ್ನೆರಡನೆಯದಾಗಿ ಪರಿಗಣಿತವಾಗಿದೆ; ಇಂತಿದೆ.

"ದಕ್ಷಃ ಪ್ರಜಾಪತಿಃ ಪೂರ್ವಂ ಶಿವಂ ತ್ಯಕ್ತ್ವಾತಿಮೋಹಿತಃ
ಹಯಮೇಧೇನ ವೈ ವಿಷ್ಣುಂ ಯಷ್ಟುಂ ಸಮುಪಚಕ್ರಮೇ ।
ವೀರಭದ್ರಾಕೃತಿರ್ಭೂತ್ವಾ ಭದ್ರಕಾಳೀಪ್ರಿಯಃ ಶಿವಃ
ತಥಾ ವಿಧಸ್ಯ ಯಜ್ಞಸ್ಯ ವೈಕಲ್ಯಮಕರೋತ್ತದಾ ।
ವೀರಭದ್ರಾವತರಣಂ ತಸ್ಮಾತ್ ಪ್ರೋಕ್ತಂ ಪಿನಾಕಿನಃ
ಮತ್ಸ್ಯಕೂರ್ಮವರಾಹಾದಿ ನಾರಸಿಂಹಾದಿಕಾನ್ ಪುರಾ ।
ಅವತಾರಾನ್ ಮಹಾವಿಷ್ಣೋಃ ಸಂಹೃತ್ಯ ಪರಮೇಶ್ವರಃ
ತತ್ತತ್ಕಲ್ಪೇಷು ಭೂಷಾಂ ಚ ತತ್ತದಂಗಾನ್ಯಕಲ್ಪಯತ್ ।
ಹರಿಧ್ವಂಸೀತಿ ಲೋಕೇಷು ತತಃ ಖ್ಯಾತಿಂ ಗತಃ ಶಿವಃ ॥"

ಇದರಿಂದ ವೀರಭದ್ರನು ವೀರಶಿವನೂ ಅಹುದೆಂದು ಅರ್ಥವಾಗುತ್ತದೆ. ವೀರಶಿವನಿಂದಾದ ಮತ ವೀರಶೈವವಾಗುವಲ್ಲಿ ಔಚಿತ್ಯವಿದೆ. ಅಂತೆಯೇ "ವೀರವ್ರತ ಸಮಾಯೋಗಾದ್ವೀರಶೈವ ಇತಿ ಸ್ಮೃತಂ" ಎಂದು ಚಂದ್ರಜ್ಞಾನಾಗಮ ದಶಮ ಪಟಲದಲ್ಲಿ ನಿರೂಪಿತವಾಗಿದೆ. ವೀರಶೈವಕ್ಕೆ ವೀರವ್ರತವೇ ಸಮಾಯೋಗ; ಸಮಾಯೋಗ ಪದ ಸಂಸ್ಮರಣೀಯ ವೀರ ಪ್ರಕ್ರಿಯೆಗಳ ವೀರಗುಣಗಳ ಸರಿಯಾದ ಸೇರುವಿಕೆಯೆ ಅದರಲ್ಲಿಯೂ ಭೇದ ಭಾವವಿಲ್ಲದೆ ಸೇರುವಿಕೆಯೆ ಸಮಾಯೋಗ ವ್ರತಪದಕ್ಕೆ ವಿವಿಧ ಅರ್ಥಗಳಿವೆ. ನಿಯಮ, ಕಟ್ಟು ಕಟ್ಟಳೆ, ವಿಧಿ, ಪೂಜೆ, ನಿಷ್ಠೆ, ನೋಂಪಿ ಎಂಬವು. ವೀರವಿಧಿ, ವೀರ ನಿಯಮ, ವೀರಪೂಜೆ, ವೀರನಿಷ್ಠೆಗಳಿಂದ ಕೂಡಿದುದೆ ವೀರಶೈವ. ಈ ವೀರ ವ್ರತಗಳು ಭದ್ರವಾಗಿರಬೇಕು. ಈ ವೀರಾಧಿ ದೇವನೆ ವೀರಭದ್ರ.

---

೧೬ ಪಾರಮೇಶ್ವರ ತಂತ್ರದಲ್ಲಿ ವೀರಶೈವ-ವೀರಭದ್ರ

ಸಿದ್ಧ ಗಂಧರ್ವರಿಂದ ಸೇವಿತವಾದುದು ಸುಂದರವಾದುದು ಕೈಲಾಸಶಿಖರ ಅಲ್ಲಿರುವುದು ಶಂಕರನ ಮಂದಿರ. ಅದು ಎಲ್ಲ ಕಲ್ಯಾಣಗಳಿಗೆ ನಿಲಯವಾಗಿದೆ; ಸ್ಫಟಿಕನದಾಗಿದೆ. ಆ ಶಿವಮಂದಿರದಲ್ಲಿ ಒಮ್ಮೆ ಗಿರಿಜೆ ಗಿರೀಶನನ್ನು ಹಾಗೆಂದು ಕೇಳುವಳು: ದೇವರದೇವನಾದ ಮಹಾದೇವನೆ, ಈ ಲೋಕದಲ್ಲಿ ಮತಗಳೆಷ್ಟು? ಲಕ್ಷಣವೇನು? ಆಚಾರಗಳೇನು? ವಿಚಾರಗಳೇನು? ತಾತ್ತ್ವಿಕವಾಗಿ ಎಲ್ಲ ಮತಭೇದಸ್ವರೂಪವೇನು?–ಎಂದು.

ಆಲಿಸಿದರೆ ನಿರ್ವೃತಿ,ಆಚರಿಸಿದರೆ ಶಿವಗತಿ ಉಂಟಾಗುವ ಮತ ಲಕ್ಷಣವನ್ನು ಹೇಳುವೆನು. ಸೌಗತ, ಚಾರ್ವಾಕ, ಜೈನ, ಬೌದ್ಧ ಅರ್ಹತ, ಮನು, ಸೌರ, ವೈಕರ್ತನ,ಆದಿತ್ಯ,ಪೌಷ್ತ, ಮಾರ್ತಂಡ,ವೈಷ್ಣವ,ಗೋಪಾಲ ನಾರಸಿಂಹ, ರಾಮಕೃಷ್ಣ, ನಾರಾಯಣಾದಿ ಅವೈದಿಕ ಮತಗಳು ಅನಂತ ವುಂಟು. ಇವೆಲ್ಲವೂ ಈಚಿನವು ಇವೆಲ್ಲಕ್ಕಿಂತ ಪೂರ್ವದ ಮತವೊಂದುಂಟು.

"ಅಥ ವಕ್ಷ್ಯೆ ಗಿರಿಸುತೇ ಮತಂ ಮಮ ಮಹತ್ತರಂ
ಶೈವಂ ಸಪ್ತವಿದಂ ಪುಣ್ಯಂ ವೀರಶೈವಾದಿಭೇದತಃ ।
ವೀರಶೈವಂ ತಥ್ಯಾನಾದಿ ಶೈವಮಾದಿಪದಂ ತತಃ
ಅನುಶೈವಂ ಮಹಾಶೈವಂ ಯೋಗಶೈವಂತು ಸಪ್ತಕಂ ।
ಸಪ್ತಮಂ ಜ್ಞಾನಶೈವಾಖ್ಯಂ ತತ್ರ ಸರ್ವೋತ್ತಮೋತ್ತಮಂ
ವೀರಶೈವಮಿತೀಶಾನಿ ತದಂಗಾನೀತರಾಣಿತು ।
ಗಾಣಪತ್ಯಂ ವೈರಭದ್ರ್ಯಂ ಭೈರವಂ ಶರಭಾಭಿಧಂ
ನಾಂದಿಕೇಶಂ ಚಕೌಮಾರಂ ಪೈಶಾಚಮಿತಿ ಸಪ್ತಧಾ॥"

ಉಳಿದೆಲ್ಲ ಮತಗಳು ಆಡಿಯವು. ವೀರಶೈವವೊಂದೇ ಅನಾದಿ; ಮತು ಮಹತ್ತರ.ವೀರಶೈವಾದಿ ಭೇದದಿಂದ ಶೈವವು ಸಪ್ತವಿಧವಾಗಿದೆ. ವೀರಶೈವ ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ ಎಂದು ಏಳು ಭೇದಗಳಿವೆ. ಇವುಗಳಲ್ಲಿ ಸರ್ವೋತ್ತಮೋತಮವಾ

ದುದು ವೀರಶೈವಮತ. ಈ ವೀರಶೈವದಲ್ಲಿ ಮತ್ತೆ ಏಳು ಭೇದಗಳಿವೆ. ಅವಿವು: ಗಾಣಪತ್ಯಂ, ವೈರಭದ್ರ್ಯಂ, ಭೈರವಂ, ಶಾರಭಂ, ನಾಂದಿಕೇಶಂ ಕೌಮಾರಂ, ಪೈಶಾಚಂ ಎಂದುದಾಗಿ ! ಗಾಣಪತ್ಯ ವೀರಶೈವದಲ್ಲಿ ಎಂಟು ಕೋಟಿ ಮತಭೇದಗಳುಂಟು. ವೀರಭದ್ರಾಖ್ಯ ವೀರಶೈವದಲ್ಲಿ ಏಳು ಭೇದಗಳುಂಟು ಭೈರವ ವೀರಶೈವದಲ್ಲಿ ಎಂಟು, ಶಾರಭ ವೀರಶೈವದಲ್ಲಿ ಅಯ್ದು, ನಂದಿಕೇಶ ವೀರಶೈವದಲ್ಲಿ ಮೂರು, ಕೌಮಾರ ವೀರಶೈವದಲ್ಲಿ ಮೂಳು, ಪೈಶಾಚದಲ್ಲಿ ಮೂರು–ಭೇದಗಳುಂಟು. ವೀರಭದ್ರ ವೀರಶೈವದಲ್ಲಿ ಏಳು ಮತಭೇದಗಳುಂಟೆಂಬುದನ್ನು ಗಮನಿಸಬೇಕು. ಮತ್ತು ಏಳು ಬಗೆಯ ವೀರಶೈವದಲ್ಲಿ ವೀರಭದ್ರವೀರಶೈವವು ಎರಡನೆಯದಾಗಿ ಪರಿಗಣಿತವಾಗಿದೆ. ಗಾಣಪತ್ಯ ಮೊದಲಿನದಾಗಿ ನಿರೂಪಿತವಾಗಿದೆ. ಇದು ಸರಿಯಲ್ಲ. ಏಕೆಂದರೆ ಗಣಪತಿಗಿಂತ ಮೊದಲಿನವನು ವೀರಭದ್ರನು. ರುದ್ರತನಯನಾದ ವೀರಭದ್ರನು ಹಿರಿಯನು; ಶಿವತನಯರಾದ ಗಣಪತಿ ಕುಮಾರರು ಕಿರಿಯರು. ಏಕೆಂದರೆ ದಾಕ್ಷಾಯಣಿಯ ಕಾಲದಲ್ಲಿಯೆ ವೀರಭದ್ರನಿದ್ದನು. ದಾಕ್ಷಾಯಣಿ ದಕ್ಷಯಾಗದಲ್ಲಿ ಆಹುತಿಯಾಗಿ ಹೋದ ಬಳಿಕ ಗಿರೀಶನು ಗೌರಿಯನ್ನು ಮದುವೆ ಮಾಡಿಕೊಳ್ಳುವನು. ಈ ಗೌರಿಯ ಸುತರು ಗಣಪತಿ ಕುಮಾರರು ಇದರಿಂದಾಗಿ ವೀರಭದ್ರ ವೀರಶೈವವೆ ಮೊದಲಿನದೆಂದು ಹೇಳಬೇಕಾಗುತ್ತದೆ. ಈ ಏಳು ವೀರಶೈವದ ಅಂಗಗಳೆಂದು ಹೇಳಲಾಗಿದೆ. ಇದರಿಂದ ಅಂಗಿಯಾದ ಅನಾದಿ ವೀರಶೈವವೊಂದಿತ್ತೆಂದು ಅದು ರುದ್ರ ವೀರಶೈವವೆಂದು ಈ ಪಾರಮೇಶ್ವರ ತಂತ್ರದಿಂದ ಸ್ಪಷ್ಟವಾಗುತ್ತದೆ. ಮತ್ತು ಅನಾದಿಶೈವ ಆದಿಶೈವಗಳಿಗೆ ಮೂಲವಾದುದು ವೀರಶೈವವೆಂಬ ಮಾತು ಗಮನಾರ್ಹವಾದುದು. ಶೈವದಿಂದ ವೀರಶೈವವಲ್ಲ, ವೀರಶೈವದಿಂದ ಶೈವಗಳೆಂಬುದೂ ಇದರಿಂದ ವಿದಿತವಾಗುತ್ತದೆ. ಶಿವನಿಗಿಂತ ಹಿಂದಿನವನು ರುದ್ರನಾದ್ದರಿಂದ ಹೀಗೆ ಹೇಳುವುದು ಉಚಿತವಾಗಿದೆ. ಅನಾದಿಕಾಲದವನು ರುದ್ರನು; ಆದಿಕಾಲದವನು ಶಿವನು. ಅನಾದಿ ರುದ್ರನಿಂದಾದ ಮತ ಅನಾದಿ ವೀರಶೈವ. ಆದಿ ವೀರಭದ್ರನಿಂದಾದುದು ಆದಿ ವೀರಶೈವ. ರುದ್ರತನಯ ವೀರಭದ್ರ.

ಸೌಗತಾದೀನಿ ಯಾವಂತಿ ವೈಷ್ಣವಾಂತ ಮತಾನಿತು
ಯಚ್ಛೈವಂ ಮಮ ಮತಂ ಸರ್ವೇಷಾಮುತ್ತಮೋತ್ತಮನ್ |

ಎಂದು ಅದೇ ಪಾರಮೇಶ್ವರತಂತ್ರ ನಿರೂಪಿಸಿದೆ. ಇದರಿಂದ ವೀರ ಶೈವವೆ ಸರ್ವೋತ್ತಮವೆಂಬುದು ಸ್ಪಷ್ಟವಾಗುತ್ತದೆ.

ತಂತ್ರಂತು ಷಡ್ವಿಧಂ ಪ್ರೋಕ್ತಂ ಷಡ್ದರ್ಶನ ವಿಭೇದತಃ
ವೀರಶೈವಂ ವೈಷ್ಣವಂ ಚ ಶಾಕ್ತಂ ಸೌರಂ ವಿನಾಯಕಂ |
ಕಾಪಾಲಮಿತಿ ವಿಜ್ಞೇಯಂ ದರ್ಶನಾನಿ ಷಡೇವಹಿ
ತತ್ತತ್ತ ತಂತ್ರೋಕ್ತಮಾರ್ಗೇಣ ತತ್ತತ್ಕರ್ಮ ಸಮಾಚರೇತ್ |

ಆಗಮಗಳು ಆರುಬಗೆಯಾಗಿವೆ. ಅವುಗಳಲ್ಲಿ ವೀರಶೈವಾಗಮವೆ ಪ್ರಮುಖವಾದುದು. ವೈಷ್ಣವ, ಶಾಕ್ತ, ಸಾರ, ವೈನಾಯಕ, ಕಾಪಾಲ ಆಗಮಗಳು ದರ್ಶನಗಳೆಂದು ಹೆಸರಾಗಿವೆ. ಆರೆಂದು ನಿರ್ದಿಷ್ಟವಾಗಿವೆ. "ಅತ್ರಾದೌ ವೀರಶೈವಾಖ್ಯಂ ತಂತ್ರಾಣಾಮುತ್ತಮೋತ್ತಮಂ" ಎಂದು ತಂತ್ರಕಾರನು ಶೀರ್ಮಾನಿಸಿದ್ದಾನೆ. ವೀರಶೈವಾಖ್ಯ ತಂತ್ರವೇ ಉತ್ತಮ.

ಇಪ್ಪತ್ತೆಂಟು ತಂತ್ರಗಳನ್ನು ಎರಡು ಭಾಗವಾಗಿ ವಿಭಾಗಿಸುತ್ತಾರೆ. ಕಾಮಿಕಾದಿ ಸುಪ್ರಭೇದಾಂತ್ಯವಾಗಿ ಹತ್ತು ಆಗಮಗಳು ಶಿವಾಗಮಗಳು. ಇವನ್ನು ಶಿವ ಸಂಹಿತೆಗಳೆಂದೂ ಶಿವತಂತ್ರಗಳೆಂದೂ ಕರೆಯುತ್ತಾರೆ. ಇನ್ನು ವಿಜಯಾದಿ ವಾತುಲಾಂತ್ಯವಾದ ಹದಿನೆಂಟು ಆಗಮಗಳು ರುದ್ರಾಗಮಗಳು ಇವನ್ನು ರುದ್ರಸಂಹಿತೆಗಳೆಂದೂ ರುದ್ರತಂತ್ರಗಳೆಂದೂ ಹೇಳುತ್ತಾರೆ. ರುದ್ರಾಗಮಗಳಲ್ಲಿ ವೀರಾಗಮವೂ ಒಂದಾಗಿದೆ. ಈ ಪಾರಮೇಶ್ವರಾಗಮವು ರುದ್ರಾಗಮಗಳಲ್ಲಿ ಒಂದು.

"ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಃ ಪರಂ |" ಆಗಮಗಳ ಉತ್ತರ ಭಾಗದಲ್ಲಿವೀರಶೈವವು ನಿರ್ದೇಶಿತವಾಗಿದೆ.

....

೧೭ ವಿಶ್ವಮಯ ರುದ್ರ

"ಸರ್ವೋ ಹ್ಯೇಷ ರುದ್ರಸ್ತಸ್ಮೈ ರುದ್ರಾಯ ನಮೋ ಅಸ್ತು"
"ಯೋ ರುದ್ರೋ ಅಗ್ನೌ ಯೋ ಅಪ್ಸು ಯ ಓಷಧೀಷು
ಯೋ ರುದ್ರೋ ವಿಶ್ವಾ ಭುವನಾऽऽವಿವೇಶ ತಸ್ಮೈ
ರುದ್ರಾಯ ನಮೋ ಅಸ್ತು." – ಶಿವಸಂಕಲ್ಪೋಪನಿಷತ್

ರುದ್ರನ ವಿಶ್ವಸ್ವರೂಪಕ್ಕೆ ಇವು ಸತ್ಯ ಸಾಕ್ಷಿಗಳಾಗಿವೆ. ರುದ್ರದೇವನು ವಿಶ್ವಮಯನೂ ಅಹುದು; ವಿಶ್ವಕಾರಣನೂ ಅಹುದು; ವಿಶ್ವಾಧಾರನೂ ಅಹುದು; ಮತ್ತು ವಿಶ್ವಾಧಿಕನೂ ಅಹುದು. ಪೂರ್ವಯುಗಕ್ಕೆ ಸೇರಿದಾತನು ರುದ್ರನು ಪ್ರಥಮಕಲ್ಪದವನು

ಋಗ್ವೇದದ ಋಕ್ಕುಗಳಲ್ಲಿ ರುದ್ರನಿಗೆ ಸ್ಥಾನವಿದೆ. ಋಗ್ವೇದದ ದೇವತೆ ಅಗ್ನಿ ಇಂದ್ರರನ್ನುಳಿದರೆ ರುದ್ರನೆ ಪ್ರಮುಖನು. ಋಗ್ವೇದ ಋಕ್ಕುಗಳನ್ನು ರಚಿಸಿದ ಋಷಿಗಳು ಅಗ್ನಿ ಇಂದ್ರರ ಉಪಾಸಕರಾದುದರಿಂದ ಅವರಿಗೆ ಅಗ್ಗಳಿಕೆಯನ್ನು ಕೊಟ್ಟಿದ್ದಾರೆ. ವಾಸ್ತವವಾಗಿ ಅವರಿಗಿಂತ ಶ್ರೀರುದ್ರದೇವನೆ ಶ್ರೇಷ್ಠನು. ಇಂದ್ರೋಪೇಂದ್ರ ಜನಕ ಶ್ರೀರುದ್ರ. ಕರ್ಮೋಪಾಸಕರಿಗೆ ಅಗ್ನಿ ಅಗತ್ಯವಾದ್ದರಿಂದ ಅಗ್ನಿಸೂಕ್ತಗಳನ್ನು ಹೆಚ್ಚಾಗಿ ರಚಿಸಿದ್ದಾರೆ. ಇದಕ್ಕೆ ಸಾಕ್ಷಿ ಯಜ್ಞಾಂಗ ಪರವಾದ ಮಂತ್ರಗಳು ಮಿಗಿಲಾಗಿ ಇರುವುದೆ! ಉಳಿದವು ಸ್ತುತಿಪರ ಮಂತ್ರಗಳು. ಋಗ್ವೇದ ಋಷಿಗಳು ಬಹುಮಂದಿ! ಭಿನ್ನಾಭಿಪ್ರಾಯವುಳ್ಳವರು! ಹೆಚ್ಚಾಗಿ ಪ್ರಾಕೃತಿಕರು; ಅಂದರೆ ಪ್ರಕೃತಿಯ ಉಪಾಸಕರು. ಸೋಮರಸಪಾನಮಾಡುವ ಇಂದ್ರಾದಿಗಳೆ ಅವರಿಗೆ ಅತ್ಯಂತ ಪ್ರಿಯರು; ಪ್ರತಿಫಲದಾತರು. ಯಜ್ಞಾಹುತಿಗೆ ಬೇಕಾದ ಕುರಿ ಆಡು ಕುದುರೆ ಹಸುಗಳನ್ನೆ ಕೋರುತ್ತಿದ್ದರು. ಇವೇ ಅವರ ಮುಖ್ಯ ಆಹಾರವಾಗಿದ್ದವು. ಯುವ ಧಾನ್ಯವೊಂದರ ಹೊರತು ಬೇರೆ ಧಾನ್ಯಗಳ ಹೆಸರುಗಳೇ ಅವರಿಗೆ ತಿಳಿದಿರಲಿಲ್ಲ. ಮಾಂಸಾಹಾರಿಗಳು; ಸೋಮರಸಪಾನಿಗಳು ಗಾರ್ಹಸ್ಥರು. ಹೆಚ್ಚು ಸಂತಾನಾಪೇಕ್ಷಿಗಳು. ಸಂಸಾರ ಜೀವನದಲ್ಲಿ ಅತ್ಯಂತಪ್ರೇಮಿಗಳು ಆದ್ದರಿಂದ ತಮ್ಮನ್ನು ತಮ್ಮ ಸಂಸಾರವನ್ನು ರಕ್ಷಿಸುವಂತೆ ರುದ್ರದೇವ

ನನ್ನುಮೇಲಿಂದ ಮೇಲೆ ಪ್ರಾರ್ಥಿಸುವರು. ಎಲ್ಲರನ್ನು ಶಿಕ್ಷಿಸುವ ರಕ್ಷಿಸುವ ಪ್ರಭುತ್ವ ಹೆಚ್ಚಾಗಿ ರುದ್ರದೇವನದು; ರುದ್ರದೇವನ ಕ್ರತುವದು.

"ಏಕ ಏವ ರುದ್ರೋ ನದ್ವಿತೀಯಾಯ ತಸ್ಥೇ" ಎಂದು ತೈತ್ತರೀಯ ಮತ್ತು ಶ್ವೇತಾಶ್ವತರ ಶ್ರುತಿಗಳೆರಡೂ ನಿರೂಪಿಸಿವೆ. ರುದ್ರನೊಬ್ಬನೆ ಇದ್ದನು. ಆತನಿಗೆ ಸರಿಬರಿಯಾಗಿ ಬೇರೊಬ್ಬರಿರಲಿಲ್ಲ ಇದು ರುದ್ರದೇವನ ಆಧಿಕ್ಯವನ್ನು ನಿರೂಪಿಸಿದೆ.

"ಸಹಸ್ರಶೋಽಯೇ ರುದ್ರಾ ಅಧಿ ಭೂಮ್ಯಾ...."ಎಂಬೀ ತೈಶ್ರುತಿಯು ರುದ್ರದೇವನ ವಿಶ್ವವಿಶಾಲತೆಯನ್ನು ವಿಶ್ವಮಯತ್ವವನ್ನೂ ಗಾನ ಮಾಡಿದೆ. ಆತನ ಆ ಮಹಿಮೆ ಅಂತಹದು. ಒಬ್ಬನೇ ವಿಶ್ವಮಯನಾಗಬಲ್ಲ; ಹಲವು ರೂಹುಗಳನ್ನು ಧರಿಸಿ ವಿಶ್ವವ್ಯಾಪಿಯಾಗಬಲ್ಲ. ಮೊದಲು ಉದಹರಿಸಿದ ಶಿವಸಂಕಲ್ಪೋಪನಿಷತ್ತಿನ ಮಂತ್ರವೂ ವಿಶ್ವಮಯತ್ವವನ್ನೆ ಸಾರಿದೆ ಅಗ್ನಿ ಪ್ರಳಯ ಜಲಪ್ರಳಯ ಓಷಧಿ ಪ್ರಳಯಗಳನ್ನು ನೆನೆದರೆ ಆ ಮಾತಿನ ಉಚಿತತೆ ವ್ಯಕ್ತಿಪಾಗುತ್ತದೆ. ಲಯಶಕ್ತಿ ಲಯಚೇತನ ಎಲ್ಲಿ ಇದ್ದರೆ ಅಲ್ಲೆಲ್ಲ ರುದ್ರದೇವನಿದ್ದಂತೆಯೆ ! ರುದ್ರನು ವಿಶ್ವನಿಯಾಮಕನು.

"ಏಕೋಹಿರುದ್ರೋ ನ ದ್ವಿತೀಯಾಯ ತಸ್ಥುರ್ಯ
ಇಮಾನ್ ಲೋಕಾನ್ ಈಶತ ಈಶನೀಭಿಃ ।
ಪ್ರತ್ಯಙ್ ಜನಾಸ್ತಿಷ್ಠತಿ ಸಂಚುಕೋಚಾಂತಕಾಲೇ
ಸಂಸೃಜ್ಯ ವಿಶ್ವಾ ಭುವನಾನಿ ಗೋಪಾಃ॥ -ಶ್ವೇ ಉ.೩.೨.

ಅದ್ವಿತೀಯನಾದ ಆ ರುದ್ರದೇವನು ಜಗತ್ತನ್ನು ನಿಯಾಮಿಸುತ್ತ ರಕ್ಷಿಸುತ್ತ ನಿರುವನು. ಮತ್ತು ಸಕಲ ವಿಶ್ವವನ್ನು ವ್ಯಾಪಿಸಿ ಸರ್ವಾಂತರ್ಯಾಮಿಯಾಗಿರುವನು. ಸೂಕ್ಷ್ಮರೂಪವಾದ ವಿಶ್ವವನ್ನು ವಿಸ್ತರಿಸಿ, ಪೋಷಿಸಿ, ಕೊನೆಯಲ್ಲಿ ತನ್ನಲ್ಲಿಯೆ ಅಡಗಿಸಿಕೊಳ್ಳುವನು. ಎಂದು ಶ್ವೇತಾಶ್ವತರ ಶ್ರುತಿಯು ಸಾರಿದೆ. "....ರುದ್ರೋಽಸಿ ಪರಿರಕ್ಷಿತಾ ತ್ವಮಂತರಿಕ್ಷೇ ಚರಸಿ ಸೂರ್ಯಸ್ತ್ವಂ ಜ್ಯೋತಿಷಾಂ ಪತಿಃ |" ಎಂದು ಪ್ರಶ್ನೋಪನಿಷತ್ತು ಪ್ರತಿಪಾದಿಸಿದೆ. "...ಮಧ್ಯಸ್ಥಾ ನಾ ದೇವತಾ ರುದ್ರಂ ಚ ಮನ್ಯುತಶ್ಚ ತತೋಽಗ್ನಿ

ವಿಹಸ್ಥಾನಮತ್ರ ವೈ ಸ್ತೋತ್ರಿಯಂ ಶಂಸಂತಿ|'' ಎಂದು ನಿರುಕ್ತಿಯಿದೆ ದೇವತೆಗಳ ಸ್ತುತಿಗೆ ಮೊದಲಿನವನು ಶ್ರೀರುದ್ರದೇವನು. ಜಾಗತಿಕ ಚಲನ ವಲನಕ್ಕೆ ಶ್ರೀರುದ್ರನು ಪ್ರೇರಕನಾಗಿದ್ದಾನೆ. ಅಂತೆಯೇ ಜಾಗತಿಕ ಸಕ್ರಿಯಾ ಶೀಲತೆಗೂ ಕಾರಣನಾಗಿದ್ದಾನೆ.

''ಪ್ರ ರುದ್ರೇಣ ಯಯಿನಾ ಯಂತಿ ಸಿಂಧವಸ್ತಿರೋ
ಮಹೀಮರಮತಿಂ ದಧನ್ವಿರೇ |
ಯೇಭಿಃ ಪರಿಜ್ಮಾ ಪರಿಯನ್ನುರುಜ್ರಯೋ
ವಿ ರೋರುವಜ್ಜಠರೇ ವಿಶ್ವಮುಕ್ಷತೇ ||೫||''

—ಋ. ಸಂ.

'ಸಂಚರಣ ಶೀಲನು ಮತ್ತು ಚೈತನ್ಯನು ರುದ್ರನು. ಆತನಿಂದ ನದಿಗಳು ಪ್ರವಹಿಸುತ್ತವೆ. ರುದ್ರರು ಮತ್ತು ಮರುತ್ತರು ಪೃಥ್ವಿಯನ್ನು ವ್ಯಾಪಿಸಿರುತ್ತಾರೆ. ರುದ್ರರಿಂದ ಪರಿಜ್ಮಾ ಅಂದರೆ ಸರ್ವಗಾಮಿಯಾದ ಇಂದ್ರನು. ಅತ್ಯಂತ ವೇಗವುಳ್ಳವನಾಗುತ್ತಾನೆ; ಮತ್ತು ಎಲ್ಲೆಲ್ಲಿಯೂ ಸಂಚರಿಸುವ ಸಾಮರ್ಥ್ಯವುಳ್ಳವನಾಗುತ್ತಾನೆ. ರುದ್ರನು ಜಠರೇ ಅಂದರೆ ಅಂತರಿಕ್ಷದ ಮಧ್ಯದಲ್ಲಿ ಪರ್ಜನ್ಯರೂಪದಲ್ಲಿ ಶಬ್ದ ಮಾಡುತ್ತ ವಿಶ್ವವನ್ನು ವೃಷ್ಟಿಯಿಂದ ತೋಯಿಸುತ್ತಾನೆ,

ಶ್ರೀರುದ್ರದೇವನು ಅಚರದಲ್ಲೆಲ್ಲಾ ವ್ಯಾಪಿಸಿದ್ದಾನೆ. ಚರದಲ್ಲೆಲ್ಲಾ ಸಂಚರಣಶೀಲತೆಯನ್ನುಂಟು ಮಾಡಿದ್ದಾನೆ. ಭೂ ವ್ಯೋಮ ವ್ಯಾಪಿಯಾಗಿದ್ದಾನ. ಮತ್ತೂ ಕೇಳಿ.

''ಕ್ಷ್ರಾಣಾ ರುದ್ರಾ ಮರುತೋ ವಿಶ್ವಕೃಷ್ಟಯೋ ದಿವಃ
ಶ್ಯೇನಾಸೋ ಅಸುರಸ್ಯ ನೀಳಯಃ |
ತೇಭಿಶ್ಚಷ್ಟೇ ವರುಣೋ ಮಿತ್ರೋ ಅರ್ಯಮೇಂದ್ರೋ
ದೇವೇಭಿರರ್ವಶೇಭಿರರ್ವಶಃ ||೬||

'ರುದ್ರರು ಮರುತ್ತರು ಮೋಕ್ಷಕ್ಕೆ ಆಶ್ರಯದಾತರು. ಅಂತರಿಕ್ಷದಲ್ಲಿ ಪ್ರಶಸ್ತವಾದ ಗತಿಯುಳ್ಳವರು. ಮತ್ತು ಮಾನವರೊಂದಿಗೆ ಕೊಡಿರುವ

ವರು. ತಂತಮ್ಮ ಕಾರ್ಯಗಳನ್ನು ನೆರವೇರಿಸತಕ್ಕವರು. ಅಶ್ವಯುಕ್ತರ್ರು ದೇವತಾತ್ಮರು. ಅವರೊಡಗೂಡಿ ಅಶ್ವವಂತನಾದ ಇಂದ್ರನು, ವರುಣನು, ಮಿತ್ರನು, ಅರ್ಥ್ಯಮನು ಕರ್ಮವನ್ನು ಅರಿಯುತ್ತಾರೆ.'

ಇದರಿಂದ ವಿಶ್ವವು ರುದ್ರರ ವಶದಲ್ಲಿದ್ದು ಕ್ರಿಯಾಶೀಲವಾಗಿದೆಯೆಂಬು-ದು ತಿಳಿದು ಬರುತ್ತದೆ. ರುದ್ರರ ವೈಶಿಷ್ಟ್ಯವೂ ಅಧಿಷ್ಠಾತೃತ್ವವೂ ಅಭಿವ್ಯಕ್ತವಾಗುತ್ತವೆ. "ಅಹಂ ರುದ್ರೇ ಭಿರ್ವಸುಭಿಶ್ಚರಾಮಿ'' ಎಂದು ಅಂಭೃಣ ಋಷಿ ಪುತ್ರಿ ಮತ್ತು ಪರಬ್ರಹ್ಮಸ್ವರೂಪ ಶಕ್ತಿ ಹೇಳಿದ್ದಾಳೆ.

''ಸೋಮಂ ವೋ ಅದ್ಯ ರುದ್ರಾಯ ಶಿಕ್ವಸೇ
ಕ್ಷಯದ್ವೀರಾಯ ನಮಸಾ ದಿದಿಷ್ಟನ ।
ಯೇಭಿಃ ಶಿವಃ ಸ್ವವಾ ಏವಯಾವಬಿದ್ದಿವಃ
ಸಿಷಕ್ತಿ ಸ್ವಯಶಾ ನಿಕಾಮಭಿಃ ॥.॥''

'ಓ ಋತ್ವಿಕ್ಕರೆ, ರುದ್ರದೇವನು ಅಶ್ವಗಳಿಂದ ಮರುತ್ತುಗಳಿಂದ ಬಂಧುಗಳಿಂದ ಕೂಡಿಕೊಂಡಿದ್ದಾನೆ. ತಾನೇ ಸಂಪಾದಿಸಿದ ಕೀರ್ತಿಯುಳ್ಳವನಾಗಿದ್ದಾನೆ. ಸುಖಕರನಾಗಿದ್ದಾನೆ- ದ್ಯುಲೋಕದಲ್ಲಿದ್ದು ಯಜಮಾನರನ್ನು ಸಂರಕ್ಷಿಸುತ್ತಾನೆ. ಇಷ್ಟಾರ್ಥಗಳನ್ನೀವ ಮರುತ್ತರಿಂದ ಒಡಗೂಡಿದ್ದಾನೆ. ಶತ್ರುಗಳನ್ನು ಸಂಹರಿಸಿದ್ದಾನೆ. ಶಕ್ತಿಸಂಪನ್ನನಾಗಿದ್ದಾನೆ. ಅಂತಹ ಆ ರುದ್ರದೇವನಿಗೆ ಈ ಯಾಗದಲ್ಲಿ ಹವಿಸ್ಸುಳ್ಳ ಸ್ತೋತ್ರವನ್ನು ನಮಿಸಿ ಅರ್ಪಿಸಿರಿ.' "ಉತ ನೋ ರುದ್ರಾ ಚಿನ್ಮೃಳತಾಂ'' ರುದ್ರರು ನಮ್ಮನ್ನು ಸುಖವಾಗಿರಿಸಲಿ.

ಮರುದ್ಗಣದಂತೆ ಅಶ್ವಿನೀದೇವತೆಗಳೂ ರುದ್ರಾನುಯಾಯಿಗಳಾಗಿದ್ದರು; ರುದ್ರ ಮಾರ್ಗ್ಗದಲ್ಲಿಯೆ ವರ್ತಿಸುತ್ತಿದ್ದರು.

''ದಸ್ರಾ ಯುವಾಕವಃ ಸುತಾ ನಾಸತ್ಯಾ ವೃಕ್ತ ಬರ್ಹಿಷಃ
ಆ ಯಾತಂ ರುದ್ರವರ್ತ್ತನೀ ॥೩॥

— ಋಗ್ವೇದ ಸಂಹಿತೆ,

ಈ ಋಕ್ಕಿನಲ್ಲಿ ಬರುವ ದಸ್ರಾ ನಾಸತ್ಯಾ ಅಶ್ವಿನೀದೇವತೆಗಳ ಗುಂಪಿನ ವರ ಹೆಸರುಗಳು. ಇವರ ಪರಾಕ್ರಮಶಾಲಿಗಳಾದ ಏಕಾದಶರುದ್ರರ ಮಾರ್ಗಾನುವರ್ತಿಗಳಾಗಿದ್ದರು. ಇವರಿಬ್ಬರೇ ಅಲ್ಲ, ಅಶ್ವಿನೀದೇವತೆಗಳೆಲ್ಲರೂ ರುದ್ರವರ್ತಿಗಳಾಗಿದ್ದರು. ಈ ಮಾತು ಋಗ್ವೇದ ಋಕ್ಕುಗಳಲ್ಲಿ ನಾಲ್ಕಾರು ಸಲ ಬಂದಿರುತ್ತದೆ.

"ಯಂ ಅಶ್ವಿನಾ ಸುಹವಾ ರುದ್ರವರ್ತನೀ ಆ ಸೂರ್ಯಾಯೈ ತಸ್ಥತುಃ"

—ಋ ಸಂ. ೫-೭೩-೧

"ಯಂ ಅಶ್ವಿನಾ ಸುಹವಾ, ರುದ್ರವರ್ತನೀ ಪುರೋರಥಂ ಕೃಣುಥಃ ಪತ್ನ್ಯಾಸಹ"

—ಋ. ಸಂ. ೧೦-೩೯-೧೧

"ತಾವಿದ್ದೋಷಾ ತಾ ಉಷಸಿ ಸುಭಸ್ಪತೀ ತಾ ಯಾಮನ್ರುದ್ರವರ್ತನೀ"

—ಋ. ಸಂ. ೮-೨೨-೧೪

ಇವುಗಳಿಂದ ನಮ್ಮ ಮೇಲಿನ ಮಾತು ಸಾರ್ಥಕವಾಗಿ ಪರಿಣಮಿಸುತ್ತದೆ

ರುದ್ರನೆಂದರೆ ಪ್ರಕಾಶಮಾನನೆಂದರ್ಥ 'ರುದ್-ಪ್ರಕಾಶನೇ' ಎಂಬ ಧಾತುವಿನಿಂದ ರುದ್ರ ಪದ ಉತ್ಪತ್ತಿಯಾಗಿದೆ. ಇದರಿಂದ ರುದ್ರನು ಪ್ರಕಾಶಚೇತನನೆಂದು ಸಿದ್ಧವಾಗುತ್ತದೆ. ಆತನ ಆ ಬೆಳಕಿನ ಬಟ್ಟೆಯಲ್ಲಿ ಮರುತ್ತರೂ ಅಶ್ವಿನೀದೇವತೆಗಳೂ ದೇವತೆಗಳೂ ಹೋಗುತ್ತಿದ್ದರು; ಬಾಳುತ್ತಿದ್ದರು. ರುದ್ರನೆಂದರೆ ವೀರನೆಂತಲೂ ಅರ್ಥವಾಗುತ್ತದೆ. ಏಕಾದಶರುದ್ರರಲ್ಲಿ ಮೊದಲಿನವನು ವೀರಭದ್ರನು. ಈತನನ್ನು ಅನುಸರಿಸಿ ಎಲ್ಲರೂ ವರ್ತಿಸುತ್ತಿದ್ದರು. ಪ್ರಕಾಶಪಥವೆಂದರೆ ವೀರವೀಥಿಯೆಂದರೆ ಉತ್ತಮವಾದ ಮಾರ್ಗವೆಂದು ಹೇಳಬೇಕು. ಯಜ್ಞದ ನೆಪದಲ್ಲಿ ಕೊಲ್ಲುವ ತಿನ್ನುವ ಕುಡಿವ ವಿಷಯಾಸಕ್ತರಾಗಿರುವ ವಾಮ ಮಾರ್ಗಗಳನ್ನು ಬಿಡಿಸಿ ಯಾಜ್ಞಿಕರನ್ನು ಉತ್ತಮ ಮಾರ್ಗಕ್ಕೆ ಹಚ್ಚುತ್ತಿದ್ದರು ರುದ್ರರು.

ಸನಾತನ ಶಿವಧರ್ಮ ಸಂಸ್ಥಾಪಕ ಶ್ರೀರುದ್ರದೇವ !

"ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಃ ಸನಾತನಾಃ |
ವೀರಭದ್ರೋ ಯಥಾ ರುದ್ರಃ ತಥಾ ಅನ್ಯೇ ಗುರವಸ್ತಥಾ ||"

— ಸ್ಕಾಂದ ಪುರಾಣ

ಅನಾದಿ ವೀರಶೈವಧರ್ಮಸ್ಥಾಪಕರುದ್ರದೇವನೆಂಬುದು ಇದರಿಂದ ಸ್ಪಷ್ಟವಾಗುತ್ತದೆಯಲ್ಲದೆ ವೀರಶೈವ ಭೇದಗಳಿದ್ದವೆಂಬುದೂ ವ್ಯಕ್ತವಾಗುತ್ತದೆ. ಆದಿವೀರಶೈವಕ್ಕೆ ಕಾರಣನಾದ ವೀರಭದ್ರನಿಗೂ ರುದ್ರದೇವನಿಗೂ ಭೇದವಿಲ್ಲ. ಅಂತೆಯೆ ಶಿವಧರ್ಮಿಗಳಾದ ಗುರುಗಳೂ ರುದ್ರ ವೀರಭದ್ರಸ್ವರೂಪರು.

ಈ ಶ್ಲೋಕಕ್ಕೆ ಶ್ರೀಮಲ್ಲನಗೌಡರು ಪಾಟೀಲ ಅವರು "ವೀರಶೈವ ಧರ್ಮ ಪ್ರವರ್ತಕ ವೀರಭದ್ರ...." ಎಂಬ ತಮ್ಮ ಗ್ರಂಥದಲ್ಲಿ ಹೀಗೆ ಅರ್ಥವನ್ನು ಬರೆದಿದ್ದಾರೆ.

"ಸನಾತನ ಶೈವಧರ್ಮವನ್ನು ರುದ್ರದೇವನೇ ಸ್ಥಾಪಿಸಿದನು. ಗುರುವಿನ ಪುತ್ರರು (ಶಿಷ್ಯರು) ಲೋಕದಲ್ಲಿ ಗುರುಗಳೆಂದು ಭಾವಿಸಲ್ಪಡುವರು. ಆದ್ದರಿಂದ ರುದ್ರ, ವೀರಭದ್ರ ಹಾಗೂ ಅವರ ಶಿಷ್ಯರಾದ ಇತರ ಗುರುಗಳು ಕೂಡ ರುದ್ರರೇ ಆಗಿರುವರು''

''....ಐತಿಹಾಸಿಕ ಕಾಲದಲ್ಲಿ ಈ ಮುನಿ ಸಂಪ್ರದಾಯದವರಲ್ಲಿ

ವೀರಭದ್ರದೇವರೇ ಮೊದಲಿಗರು ಮತ್ತು ಪ್ರಮುಖರು. ಶೈವಧರ್ಮದ ಪ್ರಚಾರಕ್ಕಾಗಿ ಅವರು ಮಾಡಿದ ಮಹತ್ಕಾರ್ಯವನ್ನು ಮೇಲೆ ವಿವರಿಸಲಾಗಿದೆ. ಅದರಂತೆ ಇವರು ವೀರಶೈವ ಧರ್ಮಾಂತರ್ಗತ ವೀರಮಾಹೇಶ್ವರ ಪಂಥದ ಮೂಲ ಪ್ರವರ್ತಕರಾಗಿದ್ದು ಈಗ ವೀರಶೈವರಿಗೆ ದೇವರೆಂದು (ಶಿವಗಣ) ಸಂಪೂಜ್ಯರಾಗಿರುವರು."– (ಪು. ೨೦) ಎಂದು ಪಾಟೀಲರು ಅಭಿಪ್ರಾಯ ಪಟ್ಟಿರುವರು. ಇದರಿಂದಲೂ ರುದ್ರ-ವೀರಭದ್ರರ ವಿಶಿಷ್ಟವ್ಯಕ್ತಿತ್ವ, ವೀರಶೈವ ಸಂಸ್ಥಾಪಕತ್ವಗಳು ಅಭಿವ್ಯಕ್ತವಾಗುತ್ತವೆ.

———

೧೮ ರುದ್ರ ಮಂತ್ರಾಧಿಕ್ಯಂ

ಆದಿ ಕಾಲದವರು ಶಿವ-ವೀರಭದ್ರರು. ಅನಾದಿ ಕಾಲದವರು ರುದ್ರ ಮಹಾರುದ್ರರು. ರುದ್ರಗಣರಿಗೆ ಲೆಕ್ಕವಿಲ್ಲ. ಏಕಾದಶ ರುದ್ರರಲ್ಲಿ ವೀರಭದ್ರನು ಪರಿಗಣಿತನಾಗಿದ್ದಾನೆ ಈತನು ರುದ್ರಗಣರಿಗೂ ಶಿವಗಣರಿಗೂ ನಡುವೆ ಇಷ್ಟ ಸಕೀಲ ಸಂಬಂಧವುಳ್ಳವನಾಗಿದ್ದನು. ರುದ್ರನೇ ಬೇರೆ, ಶಿವನೇ ಬೇರೆ. ರುದ್ರನೇ ಶಿವನೆಂದು ಕೆಲವರು ಹೇಳುವರು. ಇದು ಸರಿಯಲ್ಲ ಇದಕ್ಕೆ ಕಾರಣಗಳಿದ್ದರೂ ಸೂಕ್ತವಾಗಿಲ್ಲ. ಶಿವನ ದೂದಲು ರುದ್ರ ಪಂಚಾಕ್ಷರಿಯಿದ್ದಿತು. ವಾಮದೇವ ಮಂತ್ರದಲ್ಲಿ 'ರುದ್ರಾಯನಮಃ' ಎಂಬ ರುದ್ರ ಪಂಚಾಕ್ಷರಿಯಿದೆ "ಅಗ್ನೀಯಂ ರುದ್ರಮಂತ್ರೇಣ ಭಸ್ಮಸ್ನಾನ ಮನುತ್ತಮಮ್" ಎಂದಿದೆ ಶಿವೋಪನಿಷತ್ತು. ಮುಂದಿನ ಅಘೋರ ಮಂತ್ರ ರುದ್ರರಿಗೆ ಮೀಸಲಾದುದು ಮತ್ತು ಮುಖ್ಯವಾದುದು. ಏಳುಕೋಟಿ ಮಂತ್ರಗಳಲ್ಲಿ ಹನ್ನೊಂದು ಮಂತ್ರಗಳು ಮುಖ್ಯವಾದವುಗಳು. ಇವುಗಳಲ್ಲಿ ಅತಿ ಮುಖ್ಯವಾದುದು ಅಘೋರ ಮಂತ್ರ.

"ಮಂತ್ರಾಣಾಮಪಿ ಶೈವಾನಾಂ ಮುಖ್ಯಾ ಏಕಾದಶಿ ಸ್ಮೃತಾಃ
ತತ್ರಾಘೋರೋ ಮಹಾಮಂತ್ರಃಸರ್ವಾಭೀಷ್ಟಪ್ರದೋ ನೃಣಾಂ॥"

ಎಂದು ಸೂಕ್ಷ್ಮಾಗಮದ ಮೂರನೆಯ ಪಟಲದಲ್ಲಿ ಪ್ರತಿಪಾದಿತವಾಗಿದೆ ಅಘೋರ ಮಂತ್ರ ಬರೀ ಮಂತ್ರವಲ್ಲ,-ಮಹಾಮಂತ್ರ ಎಲ್ಲರಿಗೆ ಎಲ್ಲ ಅಭೀಷ್ಟಗಳನ್ನು ಕೊಡುವ ಮಂತ್ರ; ಪ್ರಾಣಮಂತ್ರ.

"ಅಘೋರೇಭ್ಯೋಽಥ ಘೋರೇಭ್ಯೋ
ಘೋರ ಘೋರತರೇಭ್ಯಃ
ಸರ್ವೇಭ್ಯಃ ಸರ್ವ ಸರ್ವೇಭ್ಯೋ
ನಮಸ್ತೇ ಅಸ್ತು ರುದ್ರರೂಪೇಭ್ಯಃ !"

ಪಂಚಬ್ರಹ್ಮ ಮಂತ್ರಗಳಲ್ಲಿ ಇದು ಮೂರನೆಯದು. ಅಗ್ನಿತತ್ತ್ವಾಧಿಷ್ಠಿತವಾದುದು. ಅಂತೆಯೇ ರುದ್ರರೂಪವಾದುದು. ಇದರಲ್ಲಿ ಬರುವ ಅಘೋರಾದಿ ಶಿವಾಚಾರ್ಯರು ರುದ್ರರೂಪರು.

ಈ ಅಘೋರ ಮಹಾಮಂತ್ರದಲ್ಲಿ ಮುಖ್ಯವಾಗಿ ಅ, ಏ, ಓ ಸ್ವರಾಕ್ಷರಗಳು ಬರುತ್ತವೆ. ಇವುಗಳಲ್ಲಿ ಅಕಾರವು ಪರಮ ಪುರುಷನಾದ ರುದ್ರಸ್ವರೂಪವಾದುದು; ರಕ್ತವರ್ಣ(ಕೆಂಪುಬಣ್ಣ)ವುಳ್ಳದು; ಸರ್ವವಶೀಕರಣ ಕಾರಣವಾದುದು. ಇನ್ನುಳಿದ ಏ ಮತ್ತು ಓ ಸ್ವರಗಳು ವೀರಭದ್ರಾತ್ಮಕಗಳು. ಪೀತ ಮತ್ತು ಜ್ಯೋತಿವರ್ಣಾತ್ಮಕಗಳು; ಸರ್ವಾರ್ಥಸಿದ್ಧಿಪ್ರದಗಳು ಇನ್ನು ಈ ಮಂತ್ರದಲ್ಲಿ ಮೂರು ಸಲ ಬಂದ 'ಅಃ' ಎಂಬ ಉಪಸರ್ಗಾಕ್ಷರವು ಕಾಲರುದ್ರಾತ್ಮಕವಾಗಿ ಕೆಂಪು ಬಣ್ಣವುಳ್ಳದಾಗಿ ಪಾಶನಿಕೃಂತನ ಫಲವುಳ್ಳದಾಗಿದೆ. ಘಾಕ್ಷರವು ಭೈರವಾತ್ಮಕವಾದು, ಮುತ್ತಿನ ಬಣ್ಣವುಳ್ಳದು, ಶತ್ರುನಾಶ ಫಲವುಳ್ಳದು ಭಕಾರ ಭೃಗುಸ್ವರೂಪ,ರಕ್ತವರ್ಣ ಭಾಗ್ಯಸಿದ್ಧಿ. ರಕಾರಾಕ್ಷರ ತೇಜೋರೂಪ, ರಕ್ತವರ್ಣ, ತಮ–ಮೃತ್ಯುನಿವಾರಕ ಸಕಾರಾಕ್ಷರವು ಶಕ್ತಿಸ್ವರೂಪ, ಕೆಂಬಣ್ಣ, ಸ್ಥಿತಿದಾಯಕ. ವಕಾರಾಕ್ಷರವು ಜಲತತ್ತ್ವ, ಶುಕ್ಲವರ್ಣ, ರೋಗಹಾರಕ.ತ-ನಗಳೆರಡು ಶಕ್ತ್ಯಾತ್ಮಕಗಳು,ಶ್ವೇತವರ್ಣವುಳ್ಳವು,ಜಯಪ್ರದಗಳು ದಕಾರ ದುರ್ಗಾಶಕ್ತಿಸ್ವರೂಪ, ಶ್ಯಾಮವರ್ಣ, ಸರ್ವಾರ್ಥಸಿದ್ಧಿಪ್ರದ. ಪಕಾರ ಮೇಘಾತ್ಮಕ, ಶುಕ್ಲವರ್ಣ, ವೃಷ್ಟಿಸಿದ್ಧಿ ಕೊನೆಯದಾಗಿ ಮಕಾರಾಕ್ಷರ ಮಹಾಕಾಳಿ ಸ್ವರೂಪ, ಶ್ಯಾಮವರ್ಣ, ಸರ್ವಜಯಪ್ರದ ಹೀಗೆ ಈ ಮಂತ್ರದ ಅಕ್ಷರಾಕ್ಷರಕ್ಕೂ ಚೇತನತೆಯಿದೆ, ಶಕ್ತಿಯಿದೆ; ಸಿದ್ಧಿಗಳಿವೆ. ಈ ಅಘೋರ ಮಂತ್ರದ ಹಿಂದಿನ ಮತ್ತು ಮುಂದಿನ ಮಂತ್ರಗಳಾದ ವಾಮದೇವ ಮಂತ್ರ ಮತ್ತು ತತ್ಪುರುಷ ಮಂತ್ರಗಳೂ ರುದ್ರಮಂತ್ರಗಳು ಇವುಗಳಿಗೂ ಆಧಿಕ್ಯವುಂಟು. "ಓಂ ಹುಂ ಅಘೋರಾಯ ನಮಃ" ಎಂಬೀ ಅಷ್ಟಾಕ್ಷರ ಮಂತ್ರಪಠನದಿಂದ ಅಷ್ಟಸಿದ್ಧಿ ಭಕ್ತಿ ಮುಕ್ತಿಗಳು ಲಭಿಸುತ್ತವೆ. ಅಲ್ಲದೆ ಪೂರ್ಣವಾದ ಅಘೋರ ಮಂತ್ರವೂ ಅಷ್ಟಕಲೆಗಳಿಂದ ಕೂಡಿದೆ. ಅದರ ಅಭ್ಯಾಸದಿಂದಲೂ ಅಷ್ಟಸಿದ್ಧಿ ಭಕ್ತಿ ಮುಕ್ತಿಗಳು ಲಭಿಸುತ್ತವೆ. ಮಣಿಪೂರಕ ಮಂತ್ರವಿದು.

....

೧೯. ವಿವೇಕ ಚಿಂತಾಮಣಿಯ

ರುದ್ರರು-ವೀರಭದ್ರರು

ವೇದಶಾಸ್ತ್ರವನ್ನು ಮೊದಲ ಪರಿಚ್ಛೇದದಲ್ಲಿ ನಿರೂಪಿಸಿ ದ್ವಿತೀಯ ಪರಿಚ್ಛೇದದಲ್ಲಿ ಶಿವಸಿದ್ಧಾಂತವನ್ನು ನಿರೂಪಿಸಿದ್ದಾರೆ ನಿಜಗುಣರು. ಸಿದ್ಧಾಂತಕ್ಕೆ ಆಗಮಗಳೆ ಆಧಾರ. ಆಗಮಗಳು ಇಪ್ಪತ್ತೆಂಟು. ಇವು ಸದಾಶಿವನ ಪಂಚಮುಖಗಳಿಂದ ಬಂದವುಗಳು. ಇವುಗಳಲ್ಲಿ ಮೊದಲಿನ ಹತ್ತು ಶಿವ ಪರವಾಗಿವೆ. ಉಳಿದ ಹದಿನೆಂಟು ರುದ್ರಪರವಾಗಿವೆ-ಎಂದು ಹೇಳಿರುವರು. ಇದರಿಂದೆ ಶಿವ-ರುದ್ರರು ಬೇರೆ ಬೇರೆ ಎಂಬುದು ಸ್ಪಷ್ಟ.

ಹದಿನೆಂಟು ರುದ್ರಾಗಮಗಳಲ್ಲಿ ವಿಜಯಾಗಮವೆ ಮೊದಲಿನದು. ಇದನ್ನು ರುದ್ರದೇವನು ಅರಿವನು. ವಿಮಲಾಗಮವೆಂಬುದನ್ನು ಮೊದಲು ಸರ್ವಾತ್ಮಕನು,ಮೇಣವನಿಂ ವೀರಭದ್ರನರಿದನು. ವಿಮಲಾಗಮ ಆರು ಸಂಹಿತೆಯ ಭೇದವುಳ್ಳುದಾಗಿದೆ. ಎಲ್ಲ ಆಗಮಗಳು ನಾಲ್ಕುಪಾದ, ಆರು ಪದಾರ್ಥಗಳಿಂದ ಕೂಡಿವೆ. ಕ್ರಿಯಾ-ಚರ್ಯ-ಯೋಗ-ಜ್ಞಾನ ಇವು ನಾಲ್ಕು ಪಾದಗಳು 'ಗುರು ಮುಖದಿಂದ ನಿರ್ಗತಮಾದ ಜ್ಞಾನವೆಂಬ, ಪತ್ಯಾದಿ ಪದಾರ್ಥರೂಪ ಜ್ಞೇಯವೆಂಬ, ಲಿಂಗಾರ್ಚನ ಲಕ್ಷಣಮಾದ ಅನುಷ್ಠೇಯವೆಂಬ, ಭಸ್ಮಧಾರಣಾತ್ಮಕಮಾದ ಅಧಿಕೃತಮೆಂಬ, ಶಿವಮಂತ್ರರೂಪ ಸಾಧನವೆಂಬ, ಶಿವಸಮಾನತಾ ಮುಕ್ತಿರೂಪ ಸಾಧ್ಯಮೆಂಬಾರು ಪದಾರ್ಥಂಗಳುಂ ಪ್ರತಿಪಾದ್ಯಂಗಳಕ್ಕುಂ' ಎಂದು ನಿಜಗುಣರು ಹೇಳಿರುವರು ಅಂದರೆ ಜ್ಞಾನ,ಜ್ಞೇಯ, ಅನುಷ್ಠೇಯ ಅಧಿಕೃತ, ಸಾಧನ, ಸಾಧ್ಯ ಇವಾರು ಪದಾರ್ಥಗಳೆಂದರ್ಥ.

ಇದರಿಂದ ವೀರಭದ್ರನು ರುದ್ರಾನ್ವಯದವನು ವಿಮಲಾಗಮ ಪರನು, ಷಟ್ ಪದಾರ್ಥನಿಷ್ಠನು ಎಂಬುದು ಅರಿಕೆಯಾಗುತ್ತದೆ.

ಮುಂಡೆ ವೀರಶೈವ ಲಕ್ಷಣ ನಿರೂಪಣದಲ್ಲಿ '....ದಾಸತ್ವ, ಭೃತ್ಯತ್ವ, ವೀರಭೃತ್ಯತ್ವ, ಸಮಯಾಚಾರತ್ವ,ಸಕಲಾವಸ್ಥಾತ್ವಂಗಳೆಂಬ ಷಡ್ವಿಧ ಸಜ್ಜನತ್ವಯುಕ್ತನಾಗಿ, ದೇಶ ಕಾಲ ಕಲ್ಪಿತಾದಿ ಲೌಕಿಕಾಚಾರಂಗಳಿಂ ಮೀರಿ ಸ್ವತಂತ್ರಶೀಲನಾಗಿ, ಶಿವಾತ್ಮರ್ಕೆ ಭೇದ ಭ್ರಾಂತಿದೋರದಾತನಾಗಿ, ಉಪನಿ

ಸದ್ವಾಕ್ಯ ಜನಿತ ವಿದ್ಯೆಯುಲ್ಲಿ ರಮಿಸುವ ಶೈವನಪ್ಪುದರಿಂ ತತ್ಸಂಜ್ಞೆಯುಳ್ಳಾ ಕನಾಗಿ ಜಗತ್ಪೂಜ್ಯನಾಗಿರ್ಪಾತನೆ ವೀರಶೈವನಪ್ಪಂ'

ರುದ್ರಗಣರಿಗೆ ನಿಸರ್ಗಯಜ್ಞ ವಿಹಿತವಾಗಿದೆ. ಅವರಿಗೆ ರುದ್ರದೇವನೆ ಅಧಿದೇವತೆ, ರುದ್ರಾಗ್ನಿಯೆ ಅವರ ಯಜ್ಞಾಗ್ನಿ. ಅಶ್ವತ್ಥ ಪಾಲಾಶಾದಿ ಕಾಷ್ಠ ಗಳೆ ಹವ್ಯಗಳು. ಆ ಋತುಗಳಿಗನುಸರಿಸಿ ಮಾಡುತ್ತಿದ್ದರು. ಕಾರ್ಮಿಕಾದಿ ಮಲತ್ರಯ ತ್ಯಾಗವೆ ಆಜ್ಯ ಎಲ್ಲ ಲೋಕಗಳಿಗಿಂತ ಮೇಲಿನದೆ ರುದ್ರಲೋಕ ರುದ್ರನೆ ಎಲ್ಲ ದೇವರ ದೇವ. ಕಾಲಾಗ್ನಿ ರುದ್ರಭವನ" ಏಕಾದಶಭುವನವೆನಿಸಿ ಕೊಂಡು, ಕಾಲಾಗ್ನಿ ರುದ್ರನಭುವನವೈದು ಕೋಟಿ ಯೋಜನದಗಲದಿಂ ದಿ ಹುದದರ ಮಧ್ಯದರಮನೆಯಲ್ಲಿ ಎಂಡು ಕೋಟಿ ಯೋಜನದಗಲದೊಂದು ಕೋಟಿಯೋಜನದುದ್ದದಿಂ ನಾನಾರತ್ನಖಚಿತವಾದ ದಿವ್ಯ ಸಿಂಹಾಸನಾಗ್ರದ ಲ್ಲಿಯೆ ಇರುವ ಕಾಲಾಗ್ನಿರುದ್ರನು.

ಮಹಾತೇಜೋಮಯನಾಗಿ, ರಕ್ತವರ್ಣದೊಂದು ಕೋಟಿಯೋಜನ ದೀರ್ಘಶರೀರದಿಂ ಕರಾಳವದನ ಚತುಷ್ಟಯದಿಂ, ದೀರ್ಘಸ್ಮಶ್ರುಗಳಿಂ, ದ್ವಾದಶಾಕ್ಷಿಗಳಿಂ, ಖಡ್ಗ, ಖಟ್ವಾಂಗ, ಪಾಶ, ಬಾಣ, ಅಭಯವಾಂತ ವಾಮಕರ ಪಂಚಕಂಗಳಿಂದೆಸೆದು ತಾನೂರ್ಧ್ವಮುಖನಾಗೆ ಜಗತ್ ಸಂಹಾರವಾದ ಪುದೆಂಥೋ ಮುಖನಾಗಿ, ತನಗೆ ಸಮಾನಮಾದ ಕೋಟಿರುದ್ರರುಗಳಿಂದ್ರಾ ವೃತನಾಗಿರ್ಪನಾತನ ಜ್ವಾಲೆ ದಶಕೋಟಿಯೋಜನಾಂತರಮಾಗಿ ಮೇಲಾವರಿಸಿ ಹುದದರ ಧೂಮುವೈದು ಕೋಟಿ ಯೋಜನಾವಧಿಯಾಗಿ ತೀವಿರ್ಕುಂ."

—ತೃತೀಯ ಪರಿಚ್ಛೇದ

ಕೂಷ್ಮಾಂಡ ರುದ್ರಭವನ

"ಮತ್ತಮಾ ನರಕಲೋಕದತ್ತಣಿಂ ಮೂವತ್ತು ಸಾವಿರ ಯೋಜನಾಂತರದ ಮೇಲೆ ನವಲಕ್ಷಯೋಜನ ಭೂಮಿಯಿರ್ಪುದು; ಅದಾದೊಡೆ, ನಾಲ್ಕುವರೆ ಲಕ್ಷ ಯೋಜನವೆ ಸಮಭಾಗದಿಂ ಕೃಷ್ಣಮಯ ಲೋಹವಾಗಿಹುದಲ್ಲಿ, ಪೂರ್ವೋಕ್ತನರಕಂಗಳಿಗಧಿಪತಿಯಾದ ಯಮರಾಜನ ಮೇಲಿರ್ದಲೋಕ

ದಧಿಕಾರಿಯಾದ, ಕೂಷ್ಮಾಂಡನೆಂಬ ರುದ್ರನತ್ಯಂತ ಭೀಕರಾಕಾರದಿಂ ಕಾಲಾ ನಲ ಪ್ರತಿ ಪ್ರಕಾಶದಿಂ ಚಾಪ, ಬಾಣ, ಫಲಕ, ಖಡ್ಗವ್ರಾತ ಕರಚತುಷ್ಟಯದಿಂ ತನಗೆ ಸಮಾನ ಭೂತಗಣ ಕೋಟಿಗಳೊಡಗೂಡಿರ್ಪ್ಪಂ''

ಪಾಟಕೇಶ್ವರ ರುದ್ರ ಭವನ.

"ಪಾತಾಳಗಳಿಂದ ಮೇಲೆ ಭೂ ಪೃಷ್ಠಾಂತಮಾಗಿ ಎಂಬತ್ತೆಂಟ್ಟು ಲಕ್ಷಾಧಿಕಮಾದ ಎರಡುಕೋಟಿ ಯೋಜನ ಪ್ರಮಾಣಿನಲ್ಲಿ ಸಪ್ತಪಾತಾಳಂಗಳಧಿಪತಿಯಾದ ಪಾಟಕೇಶ್ವರನೆಂಬ ರುದ್ರನಾದೊಡೆ ಸಹಸ್ರಯೋಜನ ವಿಸ್ತಾರಮಾದ ಮಣಿಖಚಿತ ದಿವ್ಯ ಸಿಂಹಾಸನದ ಮೇಲೆ ಕೋಟಿ ಕಂದರ್ಪ ಲಾವಣ್ಯದಿಂದೆಸೆದು, ಸಮಸ್ತ ಸುರಸಿದ್ಧರುಗಳಿಂದೋಲೈಸಿಕೊಳುತಿರ್ಪ್ಪಂ"

"ಮತ್ತಮಾ ಕಾಲಾಗ್ನಿ ಪೊದಲು ಪಾಟಕೇಶ್ವರಾಂತಮಾದ ಸಪ್ತ ಪಾತಾಳಂಗಳಲ್ಲಿ ಆಯಾಯ ಭುವನವಾಸಿಗಳ ಕಾಯಕಾಂತಿ, ರತ್ನಾಭರಣಂಗಳ ಪ್ರಕಾಶಂಗಳೆ ಸಕಲ ವಿಷಯಂಗಳಂ ಬೆಳಗುವವಲ್ಲದೆ ಚಂದ್ರಾರ್ಕರಸಪೇಕ್ಷಿಸಲಿಲ್ಲವೆಂದರಿಯಲ್ವೇಳ್ಕುಂ."

"ಬಳಿಕಿಂತು ನೋಡಲಾ ಬ್ರಹ್ಮಾಂಡದಡಿಯಣ ಖರ್ಪ್ಪರದೊಳವಳಯದ ಕಾಲಾಗ್ನಿರುದ್ರ ಭುವನವೊಂದು ಕೋಟಿಯೋಜನವಾತನ ಜ್ವಾಲೆ ದಶಕೋಟಿಯೋಜನವದರ ಧೂಮವೈದುಕೋಟಿಯೋಜನವದರ ಮೇಲೆ ನರಕಲೋಕವೆರಡು ಲಕ್ಷಾಧಿಕಮಾದ ಮೂವತ್ತು ಕೋಟಿಯೋಜನವದದರ ಮೇಲೆ ಕೂಷ್ಮಾಂಡರುದ್ರಭುವನ, ಒಂಬತ್ತು ಲಕ್ಷದ ಮೂವತ್ತು ಸಾವಿರಯೋಜನವದರ ಮೇಲೆ ಸಪ್ತ ಪಾತಾಳಂಗಳಂತರಾಳ ಸಹಿತಮಾಗಿ ಎಪ್ಪತ್ತುಸಾವಿರ ಯೋಜನವದರ ಮೇಲೆ ಪಾಟಕೇಶ್ವರ ರುದ್ರಭುವನಂ ಭೂಪೃಷ್ಠಾಂತಮಾಗಿ ಎಂಬತ್ತೆಂಟು ಲಕ್ಷಾಧಿಕಮಾದೆರಡು ಕೋಟಿ ಯೋಜನವದರ ಮೇಲೆಮುಂದೆ ಪೇಳ್ವ ಭೂಮಿಯೊಂದು ಕೋಟಿ ಯೋಜನವಂತು ಬ್ರಹ್ಮಾಂಡದಧಃ ಕೂಟಾಹದಿಂ ಭೂಮ್ಯಂತಮಾಗಿ ಪಂಚಾಶತ್ಕೋಟಿ ಯೋಜನೋನ್ನತವೆಂದು ನಿಶ್ಚಯಿಸಲ್ವೇಳ್ಕುಂ"

— ತೃತೀಯ ಪರಿಚ್ಛೇದ.

ಹೀಗೆ ಭೂಲೋಕದ ಕೆಳಗಿರುವ ಪಾತಾಳಲೋಕ ನಾಗಲೋಕಗಳ ಲ್ಲಿಯೂ ರುದ್ರರು ವ್ಯಾಪಿಸಿರುವರು.

ವೀರಭದ್ರಾದಿ ಏಕಾದಶ ರುದ್ರಗಣ ಸ್ಥಾನಂಗಳು

ಪುತ್ತಮಲ್ಲಿಂದಂ ಮೇಲೆ ಹತ್ತುಸಾವಿರ ಯೋಜನಾಂತರದ ಹತ್ತನೆಯ ನೂರುತಾಧಾರದ ವಿಮಾನ ಸ್ಥಾನವೆನಿಸುವ ಸೂರ್ಯನ ಭುವರ್ಲೋಕವಿಹು ದಲ್ಲಿ ಮಹೇಶ್ವರನ ಮಾನಸೋದ್ಭವರಾದ ವೀರಭದ್ರ, ಶಂಭು, ಗಿರೀಶ, ಅಜ ಏಕಪಾತ್ತು, ಅಹಿರ್ಬುಧ್ನ್ಯ, ಪಿನಾಕಿ, ಸ್ಥಾಣು, ಪಶುಪತಿ, ಭವ, ತ್ರಿಷಾಂಪ ತಿಗಳೆಂಬ ಏಕಾದಶರುದ್ರರತಿ ಪೂಜ್ಯರಾಗಿರ್ಪರಲ್ಲಿಯೆ ಧಾತ್ರಾದಿ ಪ್ರಭಾವಾಂತ ನಾಪ ಅಷ್ಟವಸುಗಳಂ ದ್ವಾದಶಾದಿತ್ಯರ್ ಮೊದಲಾದವರೆಲ್ಲಂ ಕೂಡಿ ವರ್ತಿ ಸುತಿರ್ಪ್ಪಂ.''

ಶ್ರೀ ರುದ್ರಲೋಕ

"....ಬಳಿಕಲ್ಲಿಂದ ಮೇಲೆ ಪುರು ಕೋಟಿ ಯೋಜನಾಂತದಲ್ಲಿ ಜ್ಯೋತಿ ಸ್ಥಾನಮಪ್ಪ ರುದ್ರಲೋಕವಿಹುದಾದೊಡೆ: ಕೈಲಾಸವೆಂದು ಪ್ರಮಥಸ್ಥಾನ ವೆಂದು ಪೆಸರ್ವಡೆದತಿ ಶೋಭನವತಿ ಚಿತ್ರವತಿ ಆಶ್ಚರ್ಯವತಿ ಮಂಗಲಮಯ ವಾಗಿ ಕಂಗೊಳಿಸಿರ್ಪುದಲ್ಲಿಅಂತಃ ಸತ್ವಬಹಿಸ್ತಮೋ ಗುಣದಿಂ ಜಗತ್ತಿನ ಸೃಷ್ಟಿ ಸ್ಥಿತಿಲಯ ಕೃತ್ಯ ಕರ್ತೃವಪ್ಪ ರುದ್ರನಾದೊಡೆ, ಗೋಕ್ಷೀರ ಧವಲದ್ಯು ತಿಮಯ ಶರೀರದಿಂ ಜಟಾಮಕುಟ, ಚಂದ್ರಕಲೆ, ಏಕಮುಖ, ತ್ರಿನೇತ್ರ, ನೀಲಗ್ರೀವಂಗಳಿಂ ಪರಶು, ಮೃಗ, ವರಾಭಯಂಗಳುಳ್ಳ ವಾಮದಕ್ಷಿಣ ಕರ ಚತುಷ್ಟಯದಿಂ ಸ್ವಾತ್ಮಾರಾಮನಪ್ಪುದರಿಂ ಬಾಹ್ಯವಿಷಯ ವ್ಯಾಮೋಹವಿ ಲ್ಲಾಗಿಯುಂ, ದುಷ್ಟನಿಗ್ರಹತ್ವಮಂ ಸೂಚಿಸಲೋಸುಗವಾಗಿಯುಂ ಪೊದೆ ದುಟ್ಟ ಗಜ ವ್ಯಾಘ್ರಾಜಿನ ಸರ್ಪಾಭರಣ, ಭಸ್ಮೋದ್ಧೂಳನ, ಅಕ್ಷಮಾಲೆ, ಶಿರೋಮಾಲೆಗಳಿಂದಲಂಕೃತನಾಗಿ ಕಾಳೀ ಸಮೇತನಾಗಿ ಸಕಲದೇವತಾ ಸಾರ್ವ ಭೌಮನೆನಿಸಿ, ಸತ್ಯ ಕ್ಷಮೆ ಧೃತಿ ಅಧಿಷ್ಠಿತಿ ಆತ್ಮಬೋಧ ಸೃಷ್ಟಿ ವಿರಾಗ ತಪ

ಷ್ಟು ಮತಿ ಈಶ್ವರತ್ವವೆಂಬ ದಶಕಲ್ಯಾಣಗುಣಯುಕ್ತನಾಗಿ ಸರ್ವಜ್ಞತ್ವಾದಿ ಷಡಂಗಜ್ಞಾನಾದಿ ಸದ್ಗುಣಗಳಿಂ ಅಣಿಮಾದಿ ಮಹದೈಶ್ವರ್ಯಂಗಳಿಂ ಸಂಪನ್ನನೆನಿಸಿ ಗಂಗಾವಾಳುಕ ಸಮರುದ್ರರಿಂ ಬ್ರಹ್ಮೇಂದ್ರೋಪೇಂದ್ರ ಮನು ಮುನಿ ಸುಮನಸಾದಿ ಸಕಲದೇವ ಶ್ರೇಷ್ಠರಿಂದೋಲೈಸಿಕೊಳುತ್ತಿರ್ಪ್ಪಂ"

—ವಿ. ಚಿಂ. ಷ. ಪರಿಚ್ಛೇದ

ಅದೆಂತೆಂದೊಡೆ ಆವಾತನಿಂದಾವಾತನಧಿಕವಹಾದ ಜ್ಞಾನ ತೇಜೋಬಲೈಶ್ವರ್ಯಾದಿ ಗುಣವಿಶಿಷ್ಟನವನೂರ್ಧ್ವ ಲೋಕಸ್ಥಿತವೆಂಬಾಗವು ಪ್ರಮಾಣದಿಂದಿಲ್ಲಿಂದಂ ಮೇಲೆ ಪೇಳ್ವಭುವನಪತಿಗಳನುತ್ತರೋತ್ತರ ಸುಖಭೋಗಿಗಳೆಂದರಿಯಲ್ತಕ್ಕುದಾಗಿ, ಪೂರ್ವೋಕ್ತ ಪಾಂಚಭೌತಿಕ ಬ್ರಹ್ಮಾಂಡವನುಳಿದದರ ಬಹಿರ್ಭಾಗದ ಕೇವಲ ಪೃಥ್ವೀತತ್ತ್ವದ ಇಂದ್ರಾದಿ ದಶದಿಕ್ಕಿನೊಳಿರ್ದ್ದ ಇಂದ್ರಾದಿಗಳ್ಗೆ ನಿಯಂತೃಗಳಾಗಿ ಪರಮೈಶ್ವರ್ಯಸಂಪನ್ನರಾಗಿ, ತಮ್ಮೊಡನೆ ವಿಚಿತ್ರ ವೇಷಧಾರಿಗಳಾದ ಮಹಾಪರಾಕ್ರಮಿಗಳಪ್ಪ ನಾನಾಶಸ್ತ್ರಪಾಣಿಗಳಾದ ಗಂಗೆವಾಳುಕ ಸಮಾನ ರುದ್ರರುಗಳೊಡಗೂಡಿ ತಪ್ಪ ್ರಹ್ಮಾಂಡ ಶಿಕ್ಷಕರಾದ ಶತರುದ್ರರ ನಾಮಧೇಯಂಗಳಾವಾವೆಂದೊಡೆ,

ನೂರು ರುದ್ರರು:

ಕಪಾಲೀತ, ಅಜ, ಬುದ್ಧ, ವಜ್ರದೇಹ, ಪ್ರಮರ್ದ್ದನ, ಪ್ರಭೂತಿ, ಅವ್ಯಯ, ಶಾಸ್ತೃ, ಪಿನಾಕಿ, ತ್ರಿದಶವಂದಿತರೆಂಬ ದಶರುದ್ರರು ಇಂದ್ರದಿಕ್ಕಿನಲ್ಲಿಹರು. ಅಗ್ನಿರುದ್ರ, ಹುತಾಶಿ, ಪಿಂಗಲ, ಬಾಧಕ, ಹತ, ಜ್ವಲನ, ದಹನ, ಬಭ್ರು, ಭಸ್ಮಾಂತಕ, ದಶರುದ್ರರು ಅಗ್ನಿದಿಕ್ಕಿನಲ್ಲಿಹರು. ಯಾಮ್ಯ, ಮೃತ್ಯು, ಹರ, ಧಾತೃ, ವಿಧಾತೃ, ಕರ್ತೃ, ಕಾಲ, ಧರ್ಮ, ಅಧರ್ಮ, ಸಂಯೋಕ್ತೃ, ವಿಯೋಕ್ತರೆಂಬ ದಶರುದ್ರರು ಯಮದಿಕ್ಕಿನಲ್ಲಿಹರು. ನೈರುತ, ಮಾರಣ, ಹಂತೃ, ಕ್ರೂರದೃಷ್ಟಿ, ಭಯಾನಕ, ಊರ್ಧ್ವಕೇಶ, ವಿರೂಪಾಕ್ಷ, ಧೂಮ್ರ, ಲೋಹಿತ, ದಂಷ್ಟ್ರಿಂಗರೆಂಬ ದಶರುದ್ರರು ನೈರುತ್ಯದಿಕ್ಕಿನಲ್ಲಿಹರು. ಬಲಿ, ಅತಿಬಲ, ಪಾಶಹಸ್ತ, ಮಹಾಬಲ, ಶ್ವೇತ, ಜಯರುದ್ರ, ದೀರ್ಘಬಾಹು,

ಜ್ವಲಾಂತಕ, ಬಡಬಾಮುಖ, ಭೀಷುರೆಂಬ ದಶರುದ್ರರೆ ವರುಣದಿಕ್ಕಿನಲ್ಲಿಹರು. ಶೀಘ್ರ, ಲಘು, ವಾಯುವೇಗ, ಸೂಕ್ಷ್ಮ, ತೀಕ್ಷ್ಣ, ಕ್ಷಯಾಂತಕ, ಪಂಚಾಂತಕ, ಪಂಚಶಿಖಿ, ಕಪರ್ದಿ, ಮೇಘವಾಹನರೆಂಬ ದಶರುದ್ರರೆ ವಾಯು ದಿಕ್ಕಿನಲ್ಲಿಹರು. ಜಟಾಮುಕುಟಧಾರಿ, ನಾನಾರತ್ನಧರ, ನಿಧೀಶ, ರೂಪವಾನ್, ಧನ್ಯ ಸಾಮ್ಯದೇಹ, ಪ್ರಸಾದಕೃತ್, ಪ್ರಕಾಶ, ಲಕ್ಷ್ಮೀವಾನ್, ಕಾಮರೂಪರೆಂಬ ದಶರುದ್ರರೆ ಕುಬೇರದಿಕ್ಕಿನಲ್ಲಿಹರು. ವಿದ್ಯಾಧರ, ಸರ್ವಜ್ಞ, ವೇದಪಾರಗ, ಮಾತೃವೃತ್ತ, ಪಿಂಗಳಾಕ್ಷ, ಭೂತಪಾಲ, ಬಲಪ್ರಿಯ, ಸರ್ವವಿದ್ಯಾವಿಧಾತೃ ಸುಖದುಃಖಕರರೆಂಬ ದಶರುದ್ರರೆ ಈಶಾನ್ಯದಿಕ್ಕಿನಲ್ಲಿಹರು. ಅನಂತ, ಪಾಲಕ ಧೀರ, ಪಾತಾಳೇಶ, ವೃಷಭ, ವೃಷಭಧರ, ಸುವೀರ್ಯ, ಗ್ರಸನ, ಶುಭ, ಲೋಹಿತರೆಂಬ ದಶರುದ್ರರು ಆ ಬ್ರಹ್ಮಾಂಡದಧೋಭಾಗದಲ್ಲಿಹರು. ಶಂಭು, ವಿಭು, ಗಣ, ಅಧ್ಯಕ್ಷ, ತ್ರ್ಯಕ್ಷ, ತ್ರಿದಶವಂದಿತ, ಸಂವಾಹ, ವಿವಾಹ, ನಭೋಲಿಪ್ಸು, ವಿಚಕ್ಷಣರೆಂಬ ದಶರುದ್ರರೆ ಊರ್ಧ್ವಪ್ರದೇಶದಲ್ಲಿಹರು. ಇಳಿಕೀ ಪ್ರಕಾರದಿಂದ್ವಾದಿ ಲೋಕಪಾಲಿಪ್ಪಕರಿಂ ಬ್ರಹಾಚ್ಯುತರಿಂ ದಿಕ್‌ಪದ ವಿಡಿದು ಪೂಜ್ಯರಾದ-ತನ್ನ ನಾಮೋಚ್ಚರಣಾರಾಧನೆಗಳಿಂದಿಷ್ಟಾರ್ಥಪ್ರರಾದ-ಸರ್ವಜ್ಞರಾದ ಶತರುದ್ರರಿಗೆ ಕರ್ತೃವಾದ ವೀರಭದ್ರನಾದೊಡೆ."

ಶತರುದ್ರಪತಿ ವೀರಭದ್ರ

"ನೀಲವರ್ಣಮಯ ಶರೀರದಿಂ, ಜಟಾಮುಕುಟದಿಂ, ಏಕಮುಖ, ತ್ರಿನೇತ್ರ, ದೀಪ್ತದಂಷ್ಟ್ರಂಗಳಿಂ, ಖಡ್ಗ-ಫಲಕ-ಚಾಪ-ಬಾಣಂಗಳಾಂತ ವಾಮ. ದಕ್ಷಿಣ ಕರಚತುಷ್ಟಯದಿಂ, ವಸ್ತ್ರ-ಗಂಧ-ಮಾಲ್ಯ-ಆಭರಣಾದಿಗಳಿಂದಲಂಕೃತನಾಗಿ, ಭದ್ರಕಾಳೀಸಹಿತನಾಗಿ ದುಷ್ಟನಿಗ್ರಹ-ಶಿಷ್ಟಸ್ರತಿಪಾಲಕನೆನಿಸಿ, ಪೃಥಿವ್ಯಾದಿ ಸೂಕ್ಷ್ಮಭೂತವರ್ಗದಲ್ಲಿರ್ಪಂ."

೧ ತತ್ವಗಳಿಗಭಿಮಾನಿ ರುದ್ರರು

"ಅನಂತರದೊಳಾ ಸ್ಥೂಲರೂಪ ಪೃಥ್ವೀ ತತ್ವದತ್ತಣಿಂ ದಶಗುಣಾಧಿಕಮಾಗಾವರಿಸಿರ್ದ ಅಪ್ಪುತತ್ವದಲ್ಲಿ ಅವರೇಶ, ಪ್ರಭಾಸ, ನೈಮಿಷ, ಪುಷ್ಕರ,

ಆಷಾಢಿ, ಡಿಂಡ್ಡಿ, ಭಾರಭೂತಿ,ನಾಕುಲರೆಂಬ ಗುಹ್ಯಾಷ್ಟಕರಿಹರು. ಮತ್ತಮಾ ಅಪ್ಪುತತ್ವದತ್ತಣಿಂ ದಶಗುಣಾಧಿಕಮಾಗಾವರಿಸಿರ್ದ ತೇಜಸ್ತತ್ವದಲ್ಲಿ ಹರಿಶ್ಚಂದ್ರ, ಶ್ರೀಶೈಲ, ಕಲ್ಪಮಾನ್, ಮಾತರೇಶ್ವರ, ಮಹಾಕಾಳ, ಮಧ್ಯಮ ಕೇತಾರ, ಭೈರವರೆಂಬ ಆದಿಗುಹ್ಯಾಷ್ಟಕರಿಹರು. ಮತ್ತಮಾ ತೇಜಸ್ತತ್ವದತ್ತಣಿಂ ದಶಗುಣಾಧಿಕಮಾಗಾವರಿಸಿದ್ದ ವಾಯುತತ್ವದಲ್ಲಿ ಗಯೆ, ಕುರುಕ್ಷೇತ್ರ, ನಾಖಲಂಡ, ಖಲ, ವಿಮಲ, ಆಟ್ಟಹಾಸ, ಮಹೇಂದ್ರ ಭೀಮರೆಂಬ ಗುಹ್ಯಾದ್ಗುಹ್ಯಾಷ್ಟಕರಿಹರು- ಮತ್ತಮಾ ವಾಯುತತ್ವದತ್ತಣಿಂ ದಶಗುಣಾಧಿಕಮಾಗಾವರಿಸಿರ್ದ ವ್ಯೋಮತತ್ವದಲ್ಲಿ ವಸ್ತ್ರಾಪದ, ರುದ್ರಕೋಟಿ, ಅವಿಮುಕ್ತ ಮಹಾಬಲ, ಗೋಕರ್ಣ, ಭದ್ರಕರ್ಣ,ಸ್ವರ್ಣಾಕ್ಷ, ಸ್ಥಾಣುಗಳೆಂಬ ಪವಿತ್ರಾಷ್ಟಕರಿಹರು. ಬಳಿಕಿಂತು ಪೂರ್ವೋಕ್ತಲೋಕಪಾಲಾಷ್ಟಕರೊಡಗೂಡಿದೀ ಪಂಚಾಷ್ಟಕಪಾದ ನಾಲ್ವತ್ತು ಭುವನಪತಿಗಳೇ ಸರ್ವಜ್ಞತ್ವ ಸರ್ವಕರ್ತೃತ್ವ ಸಹಿತರಾಗಿ ಭೂಲೋಕದೊಳಾಯಾ ನಾಮಧೇಯಂಗಳಿಂದವತರಿಸಿ, ಸಕಲಲೋಕಾಭಿಮತ ಫಲಪ್ರದಾಯಕರಾಗಿರ್ಕುಂ.''

೨ ಪಂಚತನ್ಮಾತ್ರ ರುದ್ರರು

"ಮತ್ತಮಾ ಪೃಥಿವ್ಯಾದಿ ಪಂಚಮಹಾ ಭೂತಂಗಳಿಗೆ ಕ್ರಮದಿಂ ಕಾರಣಮಾದ ಗಂಧಾತಿ ತನ್ಮಾತ್ರಂಗಳೆಂಬೈದರಲ್ಲಿ ಪರವಿಡಿದು ಮಂತ್ರರೂಪಿ ಸುಬಾಹು, ಭಾಸುರ, ಸರ್ವವಿತ್, ಅಗಜೇಶ್ವರರೆಂಬ ಪಂಚಭುವನಾಧಿಪತಿಗಳೊಡನೆ ಗಂಧಾಂಗ, ಜಲೋದರ, ಭಾನುಮಾನ್, ಬಲವತ್ತರು ಸೂಕ್ಷ್ಮನಾದರುಗಳೆಂಬ ರುದ್ರರುಗಳಾ ಕ್ರಮದಿಂದಿಹರು."

೩ ಕರ್ಮೇಂದ್ರಿಯ-ಜ್ಞಾನೇಂದ್ರಿಯ ರುದ್ರರು

"ಮತ್ತಮಾ ತನ್ಮಾತ್ರೆಗಳಿಂ ಮೇಲೆ ವಾಗಾದಿ ಕರ್ಮೇಂದ್ರಿಯ ಪಂಚಕದಲ್ಲಿ ಕ್ರಮದಿಂ ಕಾಲದಂಷ್ಟ್ರ, ಪಿಂಗಳಾಕ್ಷ, ಕಾದ್ರ, ಜಟಿಲ, ವಿಶಾಲರೆಂಬ ಪಂಚಭುವನ ಪತಿಗಳೊಡನೆ ದುಂದುಭಿ, ಸಮಾಧಾನ, ತೂರ್ಣಕ,ರುದ್ರಪ್ರಣವ, ಘನಾನಂದರುಗಳೆಂಬ ರುದ್ರರುಗಳಾ ತರುವಾಯಿಯಿಂದಿಹರು. ಬಳಿಕಾ

ಕರ್ಮೇಂದ್ರಿಯದಿಂ ಮೇಲೆ ಶ್ರೋತ್ರಾದಿ ಜ್ಞಾನೇಂದ್ರಿಯ ಮನಸ್ಸುಗಳೆಂಬಾತ ರಲ್ಲಿ ಕ್ರಮದಿಂ ಕಾಮರೂಪಿ, ಹುತಾಶನ,ಪ್ರಜಾಪತಿ,ಘೋರಕ, ವಿಧೂಕರ, ಅನುಪಮಗುಣಯುತರೆಂಬ ಭುವನಪತಿಗಳೊಡನೆ ವ್ಯೋಮಾಚಾರ,ಸರ್ವಾಂಗಪ್ರಕಾಶಕ, ಮಹಾವಕ್ತ್ರ, ವಿಲುಂಪಕ, ಸಂಕಲ್ಪಕರೆಂಬ ರುದ್ರರುಗಳಾ ಪರಿ ವಿಡಿಯಿಂದಿಹರು.''

೪ ಅಹಂಕಾರ ಭುವನ ರುದ್ರರು

''ಬಳಿಕ ಗಂಧತನ್ಮಾತ್ರಾದಿ ಮಾನಸಾಂತಮಾದ ಷೋಡಶ ವಿಕಾರಂಗಳಿಗೆ ಕಾರಣವಾಗಿ ಪೂರ್ವೋಕ್ತಮಾದಾಕಾಶದತ್ತಣಿಂ ದಶಗುಣಾಧಿಕಮಾಗಾವರಿಸಿರ್ದ ಅಹಂಕಾರ ತತ್ತ್ವದಲ್ಲಿ ಭಾಗಲಂಡ, ಮತಂಡ, ರೋಮಕೋಟಿ ಮಂಡಲೇಶ್ವರ, ಕಾಳಾಂಜನ, ಶಂಖಕರ್ಣ, ಸ್ಥಲೇಶ್ವರ, ಸ್ಥೂಲೇಶ್ವರರೆಂಬ ಸ್ಥಾಣ್ವಷ್ಟಕರಿಹರು.''

೫ ಬುದ್ಧಿತತ್ವ ಗುಣತತ್ವ ರುದ್ರರು

''ಬಳಿಕಾಹಂಕಾರ ತತ್ವದತ್ತಣಿಂ ದಶಗುಣಾಧಿಕಮಾಗಾವರಿಸಿರ್ದ ಬುದ್ಧಿ ತತ್ವದಲ್ಲಿ ಪಿಶಾಚ, ರಾಕ್ಷಸ, ಯಕ್ಷ, ಗಂಧರ್ವ, ಇಂದ್ರ, ಸಾಮ್ಯ, ಪ್ರಜೇಶ, ಬ್ರಹ್ಮರೆಂಬ ದೇವಾಷ್ಟಕರಿಹರು. ಬಳಿಕ ಬುದ್ಧಿ ತತ್ವದತ್ತಣಿಂ ದಶಗುಣಾಧಿಕ ಮಾಗಾವರಿಸಿರ್ದ ಗುಣತತ್ವದಲ್ಲಿ ಅಕೃತ, ಕೃತ, ಭೈರವ, ಬ್ರಹ್ಮ, ವಿಷ್ಣು, ಕುಮಾರ, ಉಮೆ, ಶ್ರೀಕಂಠರೆಂಬ ಯೋಗಾಷ್ಟಕರಿಹರು.''

೬ ಪ್ರಕೃತಿತತ್ವರುದ್ರರು

''ಬಳಿಕಾ ಗುಣತತ್ವದತ್ತಣಿಂ ದಶಗುಣೋತ್ತರಮಾಗಾವರಿಸಿರ್ದ ಪ್ರಕೃತಿತತ್ವದಲ್ಲಿ ಕ್ರೋಧೇಶ, ಚಂಡ, ಸಂವರ್ತ, ಜ್ಯೋತಿಪಿಂಗ, ಸೂರಗ, ಪಂಚಾಂತಕ ಏಕವೀರ, ಶಿಖೋದರೆಂಬ ಮಹಾದೇವಾಷ್ಟಕರಿಹರು. ಬಳಿಕಿಂತು ಬ್ರಹ್ಮಾಂಡಾದಿ ಪ್ರಕೃತಿ ಕಡೆಯಾದ ತತ್ವಂಗಳೆ ದಶಗುಣೋತ್ತರ ಮಾಗಿರ್ಪವೆಂಬು ತಿಳಿಯಲ್ವೇಳ್ಕುಂ.''

೭ ಪುರುಷತತ್ವರುದ್ರರು

"ಮತ್ತಮಾ ಪ್ರಕೃತಿ ತತ್ವದತ್ತಣಿಂ ನೂರು ಮಡಿಯಾಗಾವರಿಸಿರ್ದ ಪುರುಷತತ್ವದಲ್ಲಿ ಸರ್ವೇಂದ್ರಿಯ, ಸರ್ವತನು, ಸರ್ವಾಂತಃಕರಣಾಶ್ರಯರೆಂಬ ರುದ್ರರಿರ್ಪ್ಪರಲ್ಲಿಪುರುಷನಾದೊಡೆ ನಿತ್ಯವ್ಯಾಪಕ ಚೈತನ್ಯಮಯನಾಗಿ ಕಾರ್ಯ ರೂಪನಲ್ಲದೊಡಂ ಮುಂದೆ ಪೇಳ್ವರಾಗಾದಿ ಕಲಾಂತಮಾದ ಪಂಚಕಂಚುಕ ಯುಕ್ತನಪ್ಪುದರಿಂದುಪಚಾರದಿಂ ತತ್ವಂಗಳೊಡನೆ ಗಣನೆಗೆ ಬಹನಾಗಿ ಭುವ ನಾಶ್ರಯನಲ್ತು ಮತ್ತೇನೆನೆ: ಗಂಗೆಯಲ್ಲಿ ಹಳ್ಳಿಯಿದ್ದಿತೆಂಬುದರಂತೆ ಲಕ್ಷಣಾ ವೃತ್ತಿಯಿಂ ತತ್ಸಮೀಪದ ಪ್ರಕೃತಿ ಮಸ್ತಕದೊಳಾ ಭುವನಂಗಳಿಹವೆಂದು ವಿಭಾಗಿಸವೇಳ್ಕುಂ.'

೮ ರಾಗವಿದ್ಯಾನಿಯತಿತತ್ವರುದ್ರರು

"ಬಳಿಕಾ ಪುರುಷ ತತ್ವದತ್ತಣಿಂ ನೂರುಮಡಿಯಾಗಾವರಿಸಿರ್ದ ರಾಗತ ತ್ವದಲ್ಲಿ ವಾಮದೇವ, ಭೀಮ, ಉಗ್ರ ಭಯ, ಸರ್ವೇಶಾನ, ಏಕವೀರ, ಪ್ರಚಂಡ ಈಶ್ವರ, ಉಮಾಭರ್ತೃ, ಜಯ, ಅನಂತ, ಏಕಶಿವರೆಂಬ ರುದ್ರರುಗಳಿಹರು. ಬಳಿಕಾ ರಾಗತತ್ವದತ್ತಣಿಂ ಸಾವಿರ ಮಡಿಯಾಗಾವರಿಸಿರ್ದವಿದ್ಯಾತತ್ವದಲ್ಲಿ ಮಹಾತೇಜ, ಮಹಾದೇವ, ಭವ, ಉದ್ಭವ, ಜ್ಯೋತಿ, ಪಿಂಗೇಕ್ಷಣ, ಈಶಾನ ಭುವನೇಶ್ವರ, ಅಂಗುಷ್ಠಮಾತ್ರರೆಂಬ ರುದ್ರರಂ ಸಂಹೃಷ್ಟ, ಸುಹೃಷ್ಟ, ಸುರೂ ಪ, ರೂಪವರ್ಧನ, ಮನೋನ್ಮನರೆಂಬ ಶಿಷ್ಯಪಂಚಕಂ ಗೂಡಿ, ಮಹಾವೀರ, ಕಲ್ಯಾಣ, ಪಿಂಗಲ, ಬಭ್ರು, ವೀರ, ಪ್ರಭವ, ಮೇಧಾತಿಥಿ, ಮಂದಕ, ದಾಹಕ ಶಾಸ್ತ್ರಕಾರಕರೆಂಬಾಚಾರ್ಯ ದಶಕವಿರ್ಕ್ಕುಂ. ಮತ್ತಮಾ ವಿದ್ಯಾತತ್ವದತ್ತಣಿಂ ಲಕ್ಷ ಮಡಿಯಾಗಾವರಿಸಿರ್ದ ನಿಯತಿತತ್ವದಲ್ಲಿ ಶೂಲಧರ, ವಟರುದ್ರ, ಬಲಿ ಭುಕ್, ನೀಲಲೋಹಿತ, ಜ್ಯೋತಿರೂಪ, ಪರಮೇಶ್ವರ, ಪರಮ ಪಿಂಗೇಕ್ಷಣ ವಾಮದೇವ, ಶರ್ವ, ಭವ, ಉದ್ಭವ, ವಜ್ರದೇಹ, ಪ್ರಭು, ಕ್ರಮ, ವಿಕ್ರಮ, ಸುಪ್ರಭರೆಂಬ ರುದ್ರರುಂ ಸ್ಥಾಪಕ, ವಾಲುಕಾಕ್ಷ, ಯಮ, ತ್ರಿಶಿರ, ಚಿರಪು ಷ್ಟಿಗಳೆಂಬ ಶಿಲ್ಪಿರುದ್ರರುಗಳೈವರು ಈ ಜಗತ್ತಿನಲ್ಲಿ ಅಸಿ ಮಸಿ ಕೃಷಿ ವಾಣಿ ಜ್ಯ ದೇವನಿರ್ಮಾಣವೆಂಬ ಪಂಚಕೃತ್ಯ ನಿಯಾಮಕರಾಗಿರ್ಪ್ಪರಂ."

೯ ಕಾಲತತ್ವ ಕಲಾತತ್ವ ಮಾಯಾತತ್ವ ರುದ್ರರು

"ಮತ್ತಮಾ ನಿಯತಿತತ್ವದತ್ತಣಿಂ ಲಕ್ಷಮಡಿಯಾಗಾವರಿಸಿರ್ದ ಕಾಲತತ್ವದಲ್ಲಿ ಮಾಯಿೀಯು, ಹಾಲಾಹಲ, ಕ್ರೋಧನ, ಬಡಬಾಮುಖ, ಉಚ್ಛುಷ್ಮ ಪಾಖರ, ಚಂಡಮಾತಂಗ, ಘೋರರೂಪ, ಶುದ್ಧ, ಬುದ್ಧ, ಪ್ರಬುದ್ಧ ಪ್ರಶಾಂತ ಪರಮಾತ್ಮ, ಶಿವ, ಸುಶಿವ, ಬಭ್ರು, ಅಕ್ಷರಾಟ್, ಶಂಭುಗಳೆಂಬ ರುದ್ರರಿಹರು. ಮತ್ತಮಾ ಕಾಲತತ್ವದತ್ತಣಿಂ ದಶಲಕ್ಷ ಗುಣಾಧಿಕವಾಗಾವರಿಸಿರ್ದ ಕಲಾತತ್ವದಲ್ಲಿ ಗಹನೇಶ, ಸಾಧ್ಯ, ವಿಷ್ಣು, ಹರ, ದಶೇಶಾನ, ಮಹಾವೀರ್ಯ, ತ್ರಿಕಲ, ಗೋಪತಿಗಳೆಂಬ ರುದ್ರರಿಹರು. ಮತ್ತಮಾ ಕಲಾತತ್ವದತ್ತಣಿಂ ಕೋಟಿಗುಣಾಧಿಕವಾಗಾವರಿಸಿರ್ದ ಮಾಯಾತತ್ವದಲ್ಲಿ ಅನಂತ, ತ್ರಿಕಲ, ಗೋಪ್ತ, ಕ್ಷೇಮೇಶ, ಬ್ರಹ್ಮಪತಿ, ಧ್ರುವ, ತೇಜೋಧಿಪ, ಸಹನೇಶರೆಂಬ ರುದ್ರರಿರ್ಪ್ಪರ್ಕುಂ."

೧೦ ರುದ್ರ ಪ್ರಪಂಚ

"ಮತ್ತಮೀ ಪ್ರಕಾರವಾದ ಪೃಥಿವ್ಯಾದಿ ಮಾಯಾಂತವಾದ ಸಮಸ್ತ ತತ್ವಂಗಳಲ್ಲಿರ್ಪ್ಪರೆಂದು ಪೇಳ್ವ ರುದ್ರರುಗಳ ನಾಮಧೇಯಂಗಳಿಂದವೆ ಅಲ್ಲಲ್ಲಿಯ ಭುವನಂಗಳಿರ್ಪ್ಪವಾ ಭುವನಂಗಳಸಂಖ್ಯಾತಂಗಳಪ್ಪವಲ್ಲಿ ಮುಖ್ಯ ಭುವನಂಗಳೆ ಪವಣಿಸಿ ಪೇಳಲ್ಪಟ್ಟವಾ ಭುವನಂಗಳೆಲ್ಲಂ ವಿಚಿತ್ರನದಿ, ನಂದನ, ಸಂಸ್ಥಿ, ಪುರ, ಪ್ರಕಾರ, ದ್ವಾಸ, ವೀಥಿ, ಮಂದಿರ, ಪ್ರಾಸಾದಾದಿ ರಚನೆಗಳಿಂ ಗೀತ ವಾದ್ಯನೃತ್ಯಂಗಳಿಂ ವನಿತಾದಿ ಸುಖಭೋಗ ಸಾಧನಂಗಳಿಂ ಸಂಪನ್ನರುಗಳಾಗಿ ಯಜ್ಞ, ದಾನ, ತಪೋವ್ರತ ಸತ್ಕ್ರಿಯಾನಿಷ್ಠರಿಂದೈದಲ್ ತಕ್ಕವಾಗಿರ್ಕುಂ. ಆ ಸರ್ವ ಭುವನಂಗಳುಂ ರುದ್ರರಿಂ ಪಾಲಿತವಾಗಿ ರುದ್ರಾಧಿಷ್ಠಿತವಾಗಿ ರುದ್ರಶಕ್ತ್ಯುತ್ಕರದಿಂ ರುದ್ರಪ್ರಪಂಚವಾಗಿ ರುದ್ರಮಯಮೆನಿಸಿರ್ಕುಂ."

—ವಿ, ಚಿಂ; ೭ ನೆ ಪರಿಚ್ಛೇದ.

ವಿದ್ಯಾತತ್ವ ರುದ್ರರು

"...ಆ ಪೂರ್ವೋಕ್ತ ಮಾಯಾತತ್ವದತ್ತಣಿಂ ದಶಕೋಟಿ ಮಿಗಿಲಾಗಾವರಿಸಿರ್ದ ಶುದ್ಧವಿದ್ಯಾತತ್ವದಲ್ಲಿ ವಾಮ, ಜ್ಯೇಷ್ಠ, ರುದ್ರ, ಕಾಲ, ಕಲವಿಕರಣ, ಬಲಪ್ರಮಥನ, ಸರ್ವಭೂತದಮನ, ಮನೋನ್ಮನ, ತ್ರಿಗುಣಿ ಬ್ರಹ್ಮವೇಶಾಳ, ಸ್ಥಾಣುಮತಿ, ಅಂಬಿಕೆ, ರೂಪಿಣಿ, ನಂದಿಸಿ, ಜ್ವಾಲೆ, ವಿದ್ಯಾಧಿಪತಿಯೆಂಬ ಭುವನಂಗಳಿರ್ಪವಲ್ಲಿ ಕಾಮಿಕಾಧಿ ವಾತುಲಾಂತವಾದಿಪ್ಪತ್ತೆಂಟು ಆಗಮಂಗಳುಂ ಮನನ ತ್ರಾಣಧರ್ಮಮುಳ್ಳ ಜ್ಞಾನಶಕ್ತ್ಯಧಿಕಮಾದ ಕ್ರಿಯಾಶಕ್ತಿನ್ಯೂನಮಾದ ಸಪ್ತಕೋಟಿ ಮಹಾ ಮಂತ್ರಂಗಳಿಪ್ಪವವರೊಳಗೆ ಮೂರುವರೆಕೋಟಿ ಮಂತ್ರಂಗಳೆ ಪರಮೇಶ್ವರನ ನಿರಧಿಕರಣ ದೀಕ್ಷೆಗೆ ಸಾಧನಂಗಳಾಗಿಹವು ಮಿಕ್ಕ ಮೂರುವರೆಕೋಟಿ ಮಂತ್ರಂಗಳೆ ಶ್ರೀಗುರು ಸ್ವರೂಪನಾದೀಶ್ವರನ ಸಾಧಿಕರಣದೀಕ್ಷೆಗೆ ಸಾಧನಂಗಳಾಗಿರ್ಕುಂ. ಮತ್ತಮಾ ವಿದ್ಯಾತತ್ವದಲ್ಲಿಯೆ ಶ್ರೀಕಂಠ, ಅನಂತ, ಸೂಕ್ಷ್ಮ, ತ್ರಿಮೂರ್ತಿ, ಅಮರೇಶ್ವರ, ಅರ್ಘೀಶ ಭಾರಭೂತಿ, ತಿಥೀಶ, ಸ್ಥಾಣುಕ, ಹರ, ಝುಂಟೇಶ, ಭೌತಿಕ, ಸದ್ಯೋಜಾತ ಅನುಗ್ರಹೇಶ್ವರ, ಅಕ್ರೂರ, ಮಹೇಶಾನ, ಕ್ರೋಧೀಶ, ಚಂಡೇಶ, ಪಂಚಾಂತಕ, ಶಿವೋತ್ತಮ, ಏಕರುದ್ರ, ಕೂರ್ಮ, ಏಕನೇತ್ರ, ಚತುರಾನನ, ಅಜೇಶ, ಶರ್ವ, ಸೋಮೇಶ್ವರ, ಲಾಂಗುಲಿ, ದಾರುಕ, ಅರ್ಧನಾರೀಶ್ವರ, ಉಮಾಕಾಂತ, ಆಷಾಢಿ, ಡಿಂಡಿ, ಅತ್ರಿ, ಮೀನ, ಮೇಷ, ಲೋಹಿತ, ಶಿಖಿ, ಸ್ಥಗಲಂಡ, ದ್ವಿಲಂಡ, ಮಹಾಕಾಳ, ವಾಲಿ, ಭುಜಂಗೇಶ, ಪಿನಾಕೇಶ, ಖಡ್ಗೀಶ, ಬಕ, ಶ್ವೇತ, ಭೃಗು, ಲಕುಲಿ, ಶಿವ, ಸಂವರ್ತಕರೆಂಬ ಅಕಾರಾದಿ ಕ್ಷಕಾರಾಂತಮಾದೈವತ್ತೊಂದು ಮಾತೃಕಾ ಮೂರ್ತಿಗಳಪ್ಪ ರುದ್ರರಾದೊಡೆ ಪೂರ್ಣೋದರಿ, ವಿರಜೆ, ಶಾಲ್ಮಲಿ, ಲೋಲಾಕ್ಷಿ, ವರ್ತುಲಾಕ್ಷಿ, ದೀರ್ಘಮುಖಿ, ಗೋಮುಖಿ, ದೀರ್ಘಜಿಹ್ವೆ, ಕುಂಡೋದರಿ, ಅರ್ಧಕೇಶಿ, ವಿಕೃತಮುಖಿ, ಜ್ವಾಲಾಮುಖಿ, ಉಲ್ಕಾಮುಖಿ, ಶ್ರೀಮುಖಿ, ವಿದ್ಯಾಮುಖಿ, ಮಹಾಕಾಳಿ, ಸರಸ್ವತಿ ಸರ್ವಸಿದ್ಧಿ, ಸಮನ್ವಿತೆ, ಗೌರಿ, ತ್ರೈಲೋಕ್ಯ ವಿದ್ಯೆ, ಮಂತ್ರಶಕ್ತಿ, ಆತ್ಮಶಕ್ತಿ, ಭೂತಮಾತೆ, ಲಂಬೋದರಿ, ದ್ರಾವಿಣಿ, ನಗರಿ, ಖೇಚರಿ, ಮಂಜರಿ, ರೂಪಿಣಿ, ವಿರಜೆ, ಕಲೋದರಿ, ಪೂತನಿ, ಭದ್ರಕಾಳಿ, ಯೋಗಿಣಿ, ಶಂಕಿಣಿ, ಗರ್ಜಿನಿ

ಕಾಳರಾತ್ರಿ, ಮೂರ್ಧನ್ಯೆ, ಕಪರ್ದಿನಿ, ವಾಙ್ಮಯಿ, ಜಯೆ, ಸುಮುಖ್ಯೈಶ್ವರ್ಯೆ, ರೇವತಿ, ಮಾಧವಿ, ವಾರುಣಿ, ರಕ್ಷೋವಧಾರಿಣಿ, ಸಹಜೆ, ಲಕ್ಷ್ಮೀ, ವ್ಯಾಪಿನಿ ಮಾಯಾನ್ವಿತೆಯರೆಂಬೈವತ್ತೊಂದು ಶಕ್ತಿಯರೊಡನೆ ಕ್ರಮದಿಂ ಕೂಡಿ ರಕ್ತಾಂಗಚ್ಛವಿಯುಳ್ಳವರಾಗಿ ಶೂಲ ಕಪಾಲ ಪಾಣಿಗಳೆನಿಸಿಕೊಂಡು ತಮ್ಮ ಮೂರ್ತಿಧ್ಯಾನ ನಾಮೋಚ್ಚಾರಣ ಮಾತ್ರದಿಂ ಸರ್ವಸಿದ್ಧಿ ಪ್ರದಾಯಕರಾಗಿರ್ಪ್ಪಂ."

ಹೀಗೆ ರುದ್ರರು ಅಸಂಖ್ಯಾತರು; ಗಂಗೆವಾಲುಕ ಸಮುದ್ರರು. ವೀರ ಭದ್ರನ ವೀರಗಣರಿಗೂ ಲೆಕ್ಕವಿಲ್ಲ. ಅವರನ್ನೆಲ್ಲ ಇಲ್ಲಿ ನಿರೂಪಿಸಿಲ್ಲ. ಇಲ್ಲಿ ಐವತ್ತೊಂದು ಶಕ್ತಿಯರ ಹೆಸರುಗಳು ಮಾತ್ರ ನಿರೂಪಿತರಾಗಿದ್ದಾರೆ. ಇವರು ಮಾತೃಕಾ ಮೂರ್ತಿಗಳೆಂದು ಹೆಸರಾಗಿದ್ದಾರೆ. ಅಂದರೆ ಮೂಲ ಶಕ್ತಿಯರು ಮತ್ತು ಮಾದರಿ ಶಕ್ತಿಯರು ಆಗಿದ್ದಾರೆ. ಉಳಿದ ಶಕ್ತಿಯರಿಗೆ ಮಾತೃ ಸ್ವರೂಪರೂ ಆಗಿದ್ದಾರೆ. ವಿಶ್ವಮಾತೃಕೆಯರೂ ಆಗಿದ್ದಾರೆ.

———

೨೦. ರಸೋತ್ಪಾದಕರು ರುದ್ರ ವೀರ ಶಿವರು

೧) ರುದ್ರ, ವೀರೇಶ, ಶಿವರು ನವರಸೋತ್ಪಾದಕರು. ರುದ್ರನು ರೌದ್ರರಸ ಭಯಾನಕ ರಸಗಳ ಉತ್ಪಾದಕನು. ಈತನ ಕಾಳಿಕಾತಾಂಡವ, ತ್ರಿಪುರ ತಾಂಡವ, ಸಂಹಾರ ತಾಂಡವಗಳನ್ನು ಮಾಡಿ ಜನರನ್ನು ನಲಿಸಿ ಜಗತ್ತನ್ನು ರಕ್ಷಿಸುವನು. ಕಾಳಿಯೊಡನೆ ನರ್ತಿಸುವುದೆ ಕಾಳಿಕಾತಾಂಡವ ವೆನಿಸುವುದು. ಇದರಿಂದ ಸಭಿಕರನ್ನು ಸಹೃದಯರನ್ನು ಆನಂದಿಸುವಂತೆ ಮಾಡುತ್ತಿದ್ದನು. ತ್ರಿಪುರ ತಾಂಡವದಿಂದ ದುಷ್ಟರನ್ನು ದಂಡಿಸುತ್ತಿದ್ದನು. ದುಷ್ಟರ ದಾಳಿಗಳನ್ನು ಎದುರಿಸುತ್ತಿದ್ದನು. ಶಿಷ್ಟರನ್ನು ಸಂರಕ್ಷಿಸುತ್ತಿದ್ದನು. ಸಂಹಾರ ತಾಂಡವದಿಂದ ಮುಪ್ಪಿನವರನ್ನು ಲಯ ಗೊಳಿಸುವನು. ಇದರಿಂದ ಜೀವರಿಗೆ ಹಳೆಯ ಜನ್ಮವನ್ನು ನೀಗಿ ಹೊಸ ಜನ್ಮ ತಳೆಯಲು ಸಾಧ್ಯವಾಗುವುದು. ಇವುಗಳಿಂದ ರೌದ್ರರಸ ಭಯಾನಕ ರಸಗಳು ಉತ್ಪನ್ನವಾಗಿವೆ.

೨) ರುದ್ರ ತನಯ ವೀರೇಶ ಈತನು ಉದ್ದಂಡ ತಾಂಡವ ಊರ್ಧ್ವ ತಾಂಡವ, ಚಂಡತಾಂಡವ, ಸನ್ಮತಾಂಡವಾದಿಗಳನ್ನು ಮಾಡುತ್ತಿದ್ದನು. ಇವುಗಳಲ್ಲಿ ನೈಪುಣ್ಯ ಪಡೆದಿದ್ದನು. ಉದ್ದಂಡ ತಾಂಡವಕ್ಕೆ ಅನೇಕ ಮುಖಗಳು ಅನೇಕ ಫಲಗಳು ಉದ್ಭಲದ ತಾಂಡವವಿದು. ಧೈರ್ಯದ ಪ್ರತೀಕವಿದು ಇದು ಉದ್ಧತತನವನ್ನು ಪ್ರದರ್ಶಿಸುವುದಲ್ಲ; ಪ್ರತಿಯಾಗಿ ತನ್ನ ತಂದೆಯಲ್ಲಿ ಮತ್ತು ಶಿವನಲ್ಲಿ ಅಷ್ಟಾಂಗನಮನಪೂರ್ವಕ ವಿನಯ ಪ್ರದರ್ಶನ ವಿಶಿಷ್ಟಕಲೆ. ಸಂದರ್ಭವೊದಗಿದಲ್ಲಿ ವೈರಿಗಳಲ್ಲಿ ಉದ್ಧತತನವನ್ನೂ ತನ್ನದೆ ಆದವೀರ ಭಂಗಿಗಳಿಂದ ತೋರುತ್ತಿದ್ದನು. ಸ್ವಬಲದಿಂದ, ದೋರ್ಬಲದಿಂದ ನಟಿಸಿ ಭೀಕರತೆಯನ್ನು ತೀವ್ರತೆಯನ್ನು ತೋರುತ್ತಿದ್ದನು. ಉದ್ದಂಡ ನರ್ತನ ಬಿಸಿಯೇರಿ ಉಗ್ರತೆಯನ್ನು ತಳೆದಾಗ ಚಂಡ ತಾಂಡವವೆನಿಸುತ್ತಿತ್ತು. ಉದ್ರಿಕ್ತವೂ ಉತ್ತೇಜಿತವೂ ಆಗಿರುತ್ತಿದ್ದಿತು. ಕ್ರೋಧಾವೇಶದಿಂದ ಮೈ ಕೊಡವಿ ತಲೆಕೆದರಿ ತೀವ್ರಗತಿಯಲ್ಲಿ ತೀಕ್ಷ್ಣನೂ ಉಗ್ರನೂ ಕ್ರೂರನೂ ಆಗಿ ನಟಿಸುತ್ತಿದ್ದನು. ಭಯಂಕರನಾಗಿ ತೋರುತ್ತಿದ್ದನು. ಆಗ ಆ ನಟನೆ ಚಂಡತಾಂಡವವಾಗಿ ಭಯಾನಕರಸೋತ್ಪಾದಕವಾಗಿ ಪರಿಣಮಿಸುತ್ತಿದ್ದಿತ ಇವಲ್ಲದೆ ಊರ್ಧ್ವರೇತಸ್ಕನಾಗಿ ಊರ್ಧ್ವಶ್ವಾಸವುಳ್ಳವನಾಗಿ ಊರ್ಧ್ವಗತಿಯಿಂದ ನರ್ತಿಸಿ ವಿಶ್ವದವರ ಮೇಲೆ ವೈರಿಗಳ ಮೇಲೆ ಕರುಣ ರಸವನ್ನು

ಬೀರುತ್ತಿದ್ದನು. ಹೀಗೆ ವೀರರಸ ಮತ್ತು ಕರುಣರಸಗಳೆರಡನ್ನೂ ಬೀರುವ ತಾಂಡವಗಳಲ್ಲಿ ನಿಪುಣನಾಗಿದ್ದರಿಂದ ಸವ್ಯತಾಂಡವ ನೃತ್ಯ ಶಿಲ್ಪಗಳು ವಿಶ್ವವಿಖ್ಯಾತವಾಗಿವೆ. ಐಹೊಳೆ, ಬದಾಮಿ, ಶಿವಗಂಗೆ, ಅರಳಗುಪ್ಪೆ, ಕಾಳಹಸ್ತಿ, ತಂಜಾವೂರು ಗೂಳೂರು ಮೊದಲಾದ ನೂರಾರು ಊರುಗಳಲ್ಲಿವೆ. ಸವ್ಯತಾಂಡವ ಅಥವಾ ಸವ್ಯಸಾಚಿ ತಾಂಡವದಲ್ಲಿಯೂ ನಿಪುಣನೆನಿಸಿದನು. ಎರಡರಲ್ಲಿ ನಿಪುಣನಾದರೆ ಸವ್ಯನೆನಿಸುತ್ತಾನೆ ಇದರಿಂದಾಗಿ ವೀರೇಶನ ವೀರರಸ, ಕರುಣರಸ. ಅದ್ಭುತರಸಗಳನ್ನು ಉತ್ಪಾದಿಸಿದನು. ಈ ರಸಗಳಿಗೆ ಪ್ರಸಿದ್ಧನಾದನು.

ಇನ್ನು ಶಿವನು ಉಮಾತಾಂಡವ, ಗೌರೀತಾಂಡವ, ಸಂಧ್ಯಾತಾಂಡವ, ಆನಂದ ತಾಂಡವಾದಿಗಳಲ್ಲಿ ಪ್ರಸಿದ್ಧನಾಗಿ ನಟರಾಜನೆಂದು ಹೆಸರಾಗಿದ್ದಾನೆ. ಈತನು ಶೃಂಗಾರರಸ, ಶಾಂತರಸ, ಮತ್ತು ಕರುಣರಸಗಳನ್ನು ಉತ್ಪಾದಿಸುವನು. ಅರ್ಧನಾರೀಶ್ವರನಾಗಿ ತಾಂಡವವಾಡಿದನು. ಉಮೆಯೊಡನೆ ನಟಿಸಿ ಉತ್ತಮ ನಟನೆನಿಸಿದ್ದಾನೆ. ನಾಟ್ಯ ಪ್ರವರ್ತಕನೆನಿಸಿದ್ದಾನೆ. ಈತನು ತನ ತಾಂಡವ ನೃತ್ಯದಿಂದ ಪಿಶಾಚಿಗಳನ್ನು ವಶಪಡಿಸಿಕೊಂಡಾತನು. ಈತನು ಪಿಶಾಚಿಯು ಬೆನ್ನ ಮೇಲೆ ನಟಿಸುವ ಶಿಲ್ಪಗಳು ವಿಶೇಷವಾಗಿವೆ. ನಟರಾಜ ರಾಜನೂ ಎನಿಸಿದ್ದಾನೆ. ತನ್ನ ತಾಂಡವ ನೃತ್ಯದಿಂದ ಗೌರೀನಾಟ್ಯದಿಂದ ಜಗತ್ತನ್ನು ಆನಂದಗೊಳಿಸಿದನು. ಇದರಿಂದಾಗಿ ಈತನ ತಾಂಡವಕ್ಕೆ ಆನಂದ ತಾಂಡವ ಎಂದು ಹೆಸರು ಈತನು ಉದಯದಲ್ಲಿ ಸಂಜೆಯಲ್ಲಿ ನಿತ್ಯನಟಿಸುವುದರಿಂದ 'ಸಂಧ್ಯಾತಾಂಡವ'ಕ್ಕೆ ಹೆಸರಾಗಿರುವನು;

ಹೀಗೆ ರುದ್ರ ವೀರೇಶ, ಶಿವ ಈ ಮೂವರಿಂದ ನಾಟ್ಯಕಲೆ ಉದಯವಾಯಿತು. ನವರಸಗಳು ಉತ್ಪನ್ನವಾದವು. ನಾಟ್ಯಚಾರ್ಯರೆಂದು ಹೆಸರಾಂತರು. ಬ್ರಹ್ಮಾಂಡದ ಲಯ ಸ್ಥಿತಿ ಸೃಷ್ಟಿಕಾರಣರಾದರು. ಮುಖ್ಯವಾಗಿ ರುದ್ರ-ವೀರ ಶಿವರು ಪರಿಪಿಡಿದು ರೌದ್ರರಸ-ವೀರರಸ-ಶಾಂತರಸಗಳಿಗೆ ಕಾರಣರಾಗಿ ಕೀರ್ತಿಗಳಿಸಿದ್ದಾರೆ. ಬ್ರಹ್ಮಾಂಡದ ಎಲ್ಲಗತಿಗಳಿಗೆ ಸ್ಥಿತಿಗಳಿಗೆ ಕಾರಣರಾದರು. ಅಸಾಮಾನ್ಯ ಕಲಾವಂತರೂ ರಸೋತ್ಪಾದಕರೂ ಆದರು. ಶಿವನು ಎಲ್ಲ ಬಗೆಯ ಕಲೆಗಳ ಸುಂದರ ಸಮನ್ವಯಕ್ಕೆ ಕಾರಣನಾಗಿರುವನು.

ವೀರೇಶನು ಕರಡೆಮೇಳ ಸಮ್ಮೇಳ ಡೊಳ್ಳುವಾದ್ಯಗಳ ಉತ್ಪಾದಕನು. ರುದ್ರನು ವೀಣೆಯ ಉತ್ಪಾದಕನು. ಶಿವನು ಡಮರುಗ ಕಿಂದರಿ ಮೃದಂಗಾದಿಗಳ ಉತ್ಪಾದಕನು.

ತೇಜ-ಬಲ-ಐಶ್ವರ್ಯ ಪ್ರತೀಕರು:
ರುದ್ರ-ವೀರಭದ್ರ-ಶಿವರು.

ಇವು ಮೂರು ಮೂಲೋಕ ಐಸಿರಿ. ಇವಿಲ್ಲದೆ ಯಾವ ಲೋಕವೂ ಬಾಳುವಂತಿಲ್ಲ, ಬದುಕುವಂತಿಲ್ಲ; ಬೆಳಕಿಗೆ ಬರುವಂತಿಲ್ಲ. ಬೆಳಕಿಲ್ಲದೆ ಬಲವಿಲ್ಲ ಬಲವಿಲ್ಲದೆ ಬದುಕಿಲ್ಲ. ಬದುಕು (ಸಿರಿ) ಇಲ್ಲದೆ ಬಾಳಿಲ್ಲ. ಬಾಳಿನ ಪರಿಪೂರ್ಣತೆಗೆ ಈ ಮೂರೂ ಅನಿವಾರ್ಯ. ಇವುಗಳಿಂದ ಬಾಳಿಗೆ ಹೊಳಪು, ಮೆರಗು, ಹದ, ಹದನ, ಹರಿತತೆ, ಗಂಭೀರತೆ, ಗೌರವತೆಗಳು ವಿಭೂತಿತ್ವವೂ ಉಂಟಾಗುತ್ತವೆ. ತೇಜಸ್ವಿಯಾಗದೆ ತಿರೆಯಲ್ಲಿ ತಿರವಾಗಿ ಹೆಸರಾಗಿ ಬಾಳಲಾಗುವುದಿಲ್ಲ. ಅಂತೆಯೇ ಬಲಶಾಲಿಯಾಗಿರಬೇಕು. ಶಾರೀರಕ ಶಕ್ತಿಯಿಂದ ಮಾತ್ರವಲ್ಲ, ಆತ್ಮಶಕ್ತಿಯಿಂದಲೂ ಅಂತಃಕರಣ ಸಾಮರ್ಥ್ಯಗಳಿಂದಲೂ ಕೂಡಿರಬೇಕು. ಆಗ ಬಲವಂತ ಮಹಂತನಾಗುತ್ತಾನೆ. ಬಲವಂತನಾಗಿದ್ದರೂ ಜೊತೆಗೆ ಐಶ್ವರ್ಯವಂತನೂ ಆಗಿರಬೇಕು. ಸ್ಥೂಲವಾದ ಈ ಭೌತಿಕ ಸಿರಿಸಂಪತ್ತು ಮಾತ್ರವಲ್ಲ; ತನ್ನನ್ನು ಆ ವಿಭೂತಿತ್ವಕ್ಕೊಯ್ಯುವ ಆ ಪಾರಮಾರ್ಥಿಕ ಸಂಪತ್ತೂ ಇದ್ದಾಗಬೇಕು. ಆ ಬಲ ಆ ಐಸಿರಿ ಆ ತೇಜ ಅವು ಅತಿಮಾನುಷ ಶಕ್ತಿಗಳು; ಅತ್ಯಂತ ಶ್ರೇಷ್ಠವಾದವುಗಳು.

ಪರಿವಿಡಿದು ಈ ಮೂರರ ಪ್ರತೀಕರೆ ರುದ್ರ-ವೀರೇಶ-ಶಿವರು ಇವರು ಬರಿ ಪ್ರತೀಕರಲ್ಲ, ಪರಮೋತ್ಕೃಷ್ಟ ಪ್ರತೀಕರು. ತೇಜಃ ಸ್ವರೂಪ ಶ್ರೀರುದ್ರ ಬಲಾಢ್ಯ ವೀರೇಶ, ವಿಶ್ವ ಪರಾಕ್ರಮಿಯೆಂದು ಹೆಸರಾಗಿದ್ದಾನೆ. ಅಷ್ಟೈಶ್ವರ್ಯಗಳೆ ಅಷ್ಟ ತನುವಾಗಿರುವಾತ ಶಿವ. ಊರ್ಜಿತ ತೇಜೋಮೂರ್ತಿ-ತೇಜೋವಿಭೂತಿ ಶ್ರೀರುದ್ರ ದೇವ. ಉನ್ನತ ಬಲವಂತ ವೀರಭದ್ರ. ಉತ್ಕೃಷ್ಟ ಶ್ರೀಮಂತ ಶಿವ. ಈ ಮೂವರು ಆಕಾಶ ದೇವರುಗಳಲ್ಲ; ಚಾರಿತ್ರಿಕ ಹಿನ್ನೆಲೆಯುಳ್ಳವರು ಯುಗ ಯುಗಾಂತರಗಳ ಹಿಂದೆ ಲೋಕ ಕಲ್ಯಾಣಕ್ಕಾಗಿ ಸಂಸ್ಕೃತಿ ಸಂರಕ್ಷಣೆಕ್ಕಾಗಿ ದುಡಿದು ದೊಡ್ಡವರಾದವರು. ತತ್ತ್ವಕಲೆಗಳನ್ನು ಎತ್ತಿಕಾಪಿಟ್ಟವರು. ಲೋಕ ಕಂಟಕವನ್ನು ಸ್ವಾರ್ಥಿಗಳನ್ನು ಶಿಕ್ಷಿಸಿದವರು. ಇವರ ಆ ಮಹಾಮಹಿಮೆಗಳನ್ನು ಪುರಾಣಾಗಮಾದಿಗಳು ಮುಕ್ತಕಂಠದಿಂದ ಪ್ರಶಂಸಿವೆ. ಸಂಕ್ಷಿಪ್ತವಾಗಿ ನಿಗಮಗಳೂ ನಿರೂಪಿಸಿವೆ. ಅಷ್ಟೇ ಅಲ್ಲ ಆಗಸದ ನಾದದಲ್ಲಿ

ಅಣುರಣಿಸುತ್ತಿವೆ; ಗಾಳಿಯಲ್ಲಿ ಸುಳಿದಾಡುತ್ತಿವೆ; ರವಿ ಶಶಿಗಳ ಬೆಳಗಿನಲ್ಲಿ ಬೆಳಗುತ್ತಿವೆ. ಅದೋ ಆ ರುದ್ರತಾಂಡವ ಆ ಶಿವತಾಂಡವ ನಾಟ್ಯಗಳಲ್ಲಿ ಗೆಜ್ಜೆಗಳ ಉಲಿಗಳಲ್ಲಿ ಉಜ್ಜೀವಿಸಿವೆ. ಅಷ್ಟೇ ಅಲ್ಲ ಅವರ ಆ ವೀರಗಾಸೆಯನ್ನು ಧರಿಸುವ ಪುರವಂತರ ಉದ್ಘೋಷಣೆಗಳಲ್ಲಿ ವೀರನೃತ್ಯಗಳಲ್ಲಿ ಇದೋ ಇಂದಿಗೂ ಉಜ್ವಲಿಸಿವೆ- ಚೈತನ್ಯಶೀಲವಾಗಿ!

ಯಾವ ಆರ್ಯವ್ಯಕ್ತಿಯಲ್ಲಿ ಇಲ್ಲದ ತೇಜ ರುದ್ರದೇವನಲ್ಲಿತ್ತು; ಯಾವ ಆರ್ಯವ್ಯಕ್ತಿಯಲ್ಲಿ ಇಲ್ಲದ ಶಕ್ತಿ ವೀರಭದ್ರದೇವನಲ್ಲಿತ್ತು. ಮತ್ತು ಯಾವ ಆರ್ಯವ್ಯಕ್ತಿಯಲ್ಲಿ ಇಲ್ಲದ ಶಾಂತಿ ಸಂಪತ್ತು ಶಿವನಲ್ಲಿತ್ತು. ರುದ್ರದೇವನು ತನ್ನ ತೇಜೋಬಲದಿಂದ ಎಲ್ಲ ಜಾತಿಯ ಜನರನ್ನು ಆಕರ್ಷಿಸಿದನು. ಸಾವಿರವಲ್ಲ,ಲಕ್ಷವಲ್ಲ, ಕೋಟಿ ಅಬ್ಜವಲ್ಲ ಗಂಗೆವಾಲುಕಸಮರಾದ ಅಂದರೆ ಅಸಂಖ್ಯಾತ ಜನತೆಯನ್ನು ತನ್ನಂತೆ ರುದ್ರರನ್ನಾಗಿಸಿದ ವಿಶ್ವವಿಶಿಷ್ಟ ಶಕ್ತಿ ಆತನದು, ಜ್ಯೋತಿ ಆತನದು, ಕೀರ್ತಿ ಆತನದು, ಅಂತೆಯೆ ಆತನ ಔರಸಪುತ್ರನಾದ ವೀರೇಶನ ಶಕ್ತಿ ಅಂತಹದು. ಕೋಟಿ ಕೋಟಿ ಜನ ಭಕ್ತರನ್ನು ಸಂಪಾದಿಸಿದನು. ದೀನ ದಲಿತರ ಸೇವೆಯನ್ನು ನೆರವೇರಿಸಿ ಮನವೊಲಿಸಿದನು. ಇನ್ನು ಶಿವನ ಶಾಂತಿ ಕಳೆಯ ಪ್ರಿಯತೆಯ ಪ್ರಾಗಲ್ಭ್ಯವನ್ನು ವಿಸ್ತರಿಸಿ ಹೇಳಬೇಕಾಗಿಲ್ಲ.

---

೧ ವೀರಕ್ರಾಂತಿ

ಭಾರತದ ವಿಭೂತಿಪುರುಷರಲ್ಲಿ ವೀರಭದ್ರದೇವನು ಆದ್ಯನು ಮತ್ತು ಅಗ್ರಗಣ್ಯನು. ಆತನು ಅವನಿಗೆ ಅವತರಿಸಿ ವೀರಕ್ರಾಂತಿಯನ್ನು ನೆರವೇರಿಸಿ ಇಂದಿಗೆ ಎಂಟು ಸಾವಿರ ವರುಷಗಳು ಉರುಳಿವೆ. ಆದರೂ ಆ ವೀರ ಕಾಂತಿ ಇನ್ನೂ ನಂದಿಲ್ಲ. ವೀರಗಾಸಿ ಧರಿಸುವವರಲ್ಲಿ ಆ ಕ್ರಾಂತಿ ಮಿಣುಗುತ್ತಿದೆ. ಅಂತೆಯೇ ಸಾರ್ವಜನಿಕರಲ್ಲಿಯೂ ಸಾಮಾಜಿಕರಲ್ಲಿಯೂ ಒಂದಿಲ್ಲೊಂದು ಬಗೆಯಲ್ಲಿ ಬೆಳಗುತ್ತಿದೆ. ಆದರೆ ಆ ವೀರಕ್ರಾಂತಿಯ ಎಲ್ಲ ಮುಖಗಳು ಸ್ಫುಟವಾಗಿ ಕಾಣುತ್ತಿಲ್ಲ; ಸ್ಫುಟವಾಗಿ ಬೆಳಗುತ್ತಿಲ್ಲ.

ಅಂದು ವೀರೇಶನು ಒಬ್ಬ ಸಾಮಾನ್ಯವ್ಯಕ್ತಿಯಾಗಿ ಅವತರಿಸಲಿಲ್ಲ; ಒಂದು ಮಹಾ ಶಕ್ತಿಯಾಗಿ, ಒಂದು ವೀರದೀಪ್ತಿಯಾಗಿ, ಶ್ರೇಷ್ಠ ಸಮಾಜವಾದಿಯಾಗಿ, ಮಾನವತಾವಾದಿಯಾಗಿ ಅವತರಿಸಿದನು. ಅವತರಿಸಿ ಅಪ್ರತಿಮವಾಗಿ ತನ್ನ ಮಣಿಹವನ್ನು ಮಾಡಿ ಮುಗಿಸಿದನು.

ಎಲ್ಲರಂತೆ ಶ್ರೀ ರುದ್ರದೇವನ ಒಡಲಲ್ಲಿ ಹುಟ್ಟಿ ಬಂದ ವೀರೇಶನು ತನ್ನ ವೀರಶ್ರೀಯಿಂದ ಮತ್ತು ವಿಶಿಷ್ಟವಾದ ಜೀವ ಕಾರುಣ್ಯದಿಂದ, ಲೋಕದ ಅದ್ವಿತೀಯ ಮಹಾಮಹಿಮನಾದನು ಆದರ್ಶ ಯುಗನಿರ್ಮಾಪಕನಾದನು. ಪಾವನದೃಷ್ಟಿಯಿಲ್ಲದ ಪೂರ್ವಾಪರ ವಿಚಾರವಿಲ್ಲದವರಿಗೆ ಪಾವನದೃಷ್ಟಿಯನ್ನು ಹಿಂದು ಮುಂದಿನ ವಿಚಾರವನ್ನುಂಟು ಮಾಡುವನು. ಒಡಕು ಮನೋಭಾವವನ್ನು ತೊಡೆದು ಹಾಕಿ ಒಗ್ಗೂಡಿಸಿದನು. ದುರಾಚಾರದಲ್ಲಿ ದುಡುಕುತ್ತಿದ್ದವರನ್ನು ದುರ್ವಿಚಾರ ನಿರತರನ್ನು ದಂಡಿಸಿ ದಾರಿಗೆ ತರುತ್ತಿದ್ದನು. ಸಹಕಾರ ಸಹಯೋಗಗಳಿಗಾಗಿ ಹೆಚ್ಚಾಗಿ ಹೆಣಗಿದನು. ವೀರೇಶನ ಸಂಗ್ರಾಮ ಸ್ವಾರ್ಥದ್ದಾಗಿರಲಿಲ್ಲ. ಶೋಷಣಕ್ಕಾಗಿರಲಿಲ್ಲ. ಸಹಬಾಳ್ವೆಗಾಗಿ ಇತ್ತು. ಸದ್ಭಾವ ಸದ್ಗುಣಗಳ ಸಂಪಾದನೆಗಾಗಿ ಇತ್ತು. ಸತ್ಕ್ರಿಯಾ ಶೀಲರನ್ನಾಗಿಸುವುದರಲ್ಲಿ ಇತ್ತು. ಸದಾಚಾರಶೀಲರನ್ನಾಗಿಸುವುದರಲ್ಲಿ ಇತ್ತು.

ಯಾವರಾಜ್ಯಾಧಿಕಾರಕ್ಕೆ ಬಾಯ್ಬಿಟ್ಟವನಲ್ಲ. ಅಧಿಕಾರದಾಹ ಆತನಲ್ಲಿರಲಿಲ್ಲ. ಅಧಿಕಾರದ ದುರುಪಯೋಗವಾಗುವುದನ್ನು ಸಹಿಸದೆ ಆತನು ಎದುರಿಸುತ್ತಿದ್ದನು. ನಿರಂಕುಶಾಧಿಕಾರ ನಿಷಂಟಿಕವಾಗಿದೆಂದೆ ಆತನ ಅಭಿಪ್ರಾಯ

ಶಾಂತಿಯುತ ನಿರ್ಭೀತ ಸ್ವಾತಂತ್ರ್ಯವನ್ನು ಸ್ಥಾಪಿಸುವುದೆ ಆತನ ಮಣಿಹವಾಗಿತ್ತು. ಶೋಷಣೆ ನಿಂತು, ಅನ್ಯಾಯನಿಂತು, ಅನರ್ಥವಾಗದಂತೆ ಪಡಿಪದಾರ್ಥಗಳನ್ನು ಜನತೆಗಾಗಿಯೆ ಉಪಯೋಗವಾಗುವಂತೆ ಮಾಡುವುದೇ ಆತನ ಉದ್ದೇಶವಾಗಿತ್ತು. ಆತನದು ಅಂದಿನ ಅಮೃತಮಯ ಆಂದೋಲನ; ಎಲ್ಲರಿಗೂ ಸಲ್ಲುವ ಆಂದೋಲನ. ನಮ್ಮ ಆ ಪರಂಪರಾಗತ ಸತ್ ಸಂಸ್ಕೃತಿ ಇಂದಿಗೂ ಜೀವಂತವಾಗಿರಲು ಆತನ ಆ ಶಕ್ತಿಯೆ ಕಾರಣ; ಆ ಕ್ರಾಂತಿಯೆ ಕಾರಣ

ರುದ್ರಗಣ, ವೀರಗಣ, ಶಿವಗಣ, ದೇವಗಣರನ್ನು ಒಗ್ಗೂಡಿಸಿ ಆ ಗಣರಿಗೆಲ್ಲ ಗಣಪತಿತ್ವವನ್ನು ಬೆಸಕನಿಗಿತ್ತು ಗಣಪ್ರಭುತ್ವಕ್ಕೆ ಸ್ಥಿರವಾದ ಅಡಿಗಲ್ಲಿನ್ನಿಟ್ಟಾತನು ವೀರಭದ್ರದೇವನು. ಗಣರಾಜ್ಯಕ್ಕೆ ಅದುವೆ ನಾಂದಿಯಾಯಿತೆಂದರೆ ಆತನ ಉದಾತ್ತದೃಷ್ಟಿಗೆ ಉಪಮೆಯಿಲ್ಲವೆಂದ ಹೇಳಬೇಕು. ಸಾಮಾಜಿಕ ಆರ್ಥಿಕ ಏರ್ಪಾಡಗಳು ಮಾನವೀಯ ವಿಶಾಲದೃಷ್ಟಿಯಿಂದ ಆತನಿಂದ ರಚಿತವಾದವು, ಎಲ್ಲ ಜೀವರ ಹಿತವೆ ಆತನ ಧ್ಯೇಯ. ಬಲ್ಲಿದರು ಬಡವರ ಶೋಷಣೆಯನ್ನು ಯಾವ ಬಗೆಯಲ್ಲಿಯೂ ಮಾಡಬಾರದೆಂದು ಆತನ ಅಭಿಪ್ರಾಯ. ಮಾನವರಿಂದ ಮಾನವೀಯತೆ ಮಣ್ಣುಗೂಡಬಾರದು ದೇವಗಣರೆಂದು ಹೇಳಿಕೊಂಡು ದೆವ್ವಗಳಂತೆ ಕುಡಿದು ಕೊಂಡುತಿಂದು ತೇಗಬಾರದು ಎಂಬುದೇ ಆತನ ಪ್ರತಿಪಾದನೆ. ಅಂತೆಯೆ ಪರಿಪಾಲನೆ. ಮಾನವೀಯತೆ ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಪೃಥಗೊಳ್ಳಬೇಕೆಂಬುದೆ ವೀರೇಶನ ಉದ್ದೇಶ.

————

ವೀರೇಶ ಜಯಂತಿ

ವೀರೇಶ ಬರಿಯ ಯಜ್ಞಸಿರೋಥಕಾಂತಿಯೊಂದನ್ನೆ ಎಸಗಲಿಲ್ಲಿ. ಕಾಳ್ಗ ಗಕ್ಕಾಗಿಯೆ ಶ್ರಮಿಸಲಿಲ್ಲ. ಮಾನವರಿಂದ ಮಾನವರಿಗೆ ಒದಗುವ ಉಪದ್ರವಗಳ ಉಪಶಮನಕ್ಕಾಗಿ ಶ್ರಮಿಸಿದನು. ಸಾಮಾಜಿಕ ಸಭ್ಯತೆಗಾಗಿ ಸಮತ್ವಾಭಾವಕ್ಕಾಗಿ ಹೊಸ ಬಾಳಿನ ಹುಟ್ಟಿಗಾಗಿ ಹೆಣಗಿದನು. ಅವನದು ಪ್ರಚಂಡ ಪರಾಕ್ರಮ; ಸೀಮಾತೀತ ಶಕ್ತಿ. ಕುಸಿಯದ ಕಲಿತನ ಸೋಲನ್ನರಿಯದ ಚೇತನ. ಗೆಲವಿನ ಸಿರಿಯಿಂದ ಮೆರೆದ ಜೀವನ ಎಲ್ಲರ ನೆಮ್ಮದಿಗಾಗಿ ಬಾಳಿದನು. ಉಳಿದರಿವಗೆ ಬಾಳಿನ ಬಟ್ಟೆಯನ್ನು ತೋರಿದನು. ಮನ್ನಣೆಯ ಸಂಕೇತವಾಗಿ ಆತನ ಪ್ರತಿಮೆಗಳನ್ನು ಊರೂರಿಗೆ ಕ್ಷೇತ್ರ ಕ್ಷೇತ್ರಕ್ಕೆ ಸ್ಥಾಪಿಸಿದೆವು. ಒಡಪುಗಳಿಂದ ಆತನ ಆ ವೀರಶ್ರೀಯನ್ನು ಸ್ತುತಿಸಿದೆವು. ವೀರಗಾಸಿಯ ಧರಿಸಿದೆವು, ಬೀರರು ಡೊಳ್ಳು ಹೊಯ್ದರು; ಹೊಯ್ಯುತ್ತಿರುವರು. ಕರಡಿಯನ್ನು ಕಣಕಣಿಸಿದರು. ಕಹಳೆಯು ಕೂಗನ್ನು ಹಾಕುತ್ತಿರಲಾಗಿದೆ. ಆದರೇನು ಆತನ ಉದಾತ್ತ ಉದ್ದೇಶಗಳನ್ನೆ ಉದಾಶೀನ ಮಾಡಿದ್ದೇವೆ. ವೀರತನದಿಂದ ವಂಚಿತರಾಗಿದ್ದೇವೆ. ಆತನ ಸಾಮಾಜಿಕ ವೈಶಾಲ್ಯಗಳನ್ನು ಮರೆತಿದ್ದೇವೆ. ಆತನ ಸಂಸ್ಕೃತಿ ಸಂಧೃತಿ ನಮ್ಮಲ್ಲಿ ಜೀವಂತವಾಗಿಲ್ಲ. ಇದೆಂತಹ ವಿಸ್ಮೃತಿ? ಇದಾವ ಸಂಪ್ರದಾಯ ಸುಗತಿ? ಇದೇನು ಕಲಿತನ? ಇದೆಂತಹ ಕನ್ನಡತನ? ಕನ್ನಡ ನಾಡು ನುಡಿಗಳ ಮೇಲೆ ಇನ್ನಿತರರ ದಾಳಿ ಹೀಗೆ ನಡೆಯುತ್ತಿರಬೇಕೆ? ನೋಡಿಕೊಂಡು ಆಡಿಕೊಂಡು ಸುಮ್ಮನಿರಬೇಕೆ?

ಕೆಚ್ಚು ಮೆಚ್ಚು ಮತ್ತೆ ಕೂಡಿ ಬರಬೇಡವೆ? ಕನ್ನಡಿಗರು ಕನ್ನಡಿಗರಾಗಿ ಬಾಳಬೇಡವೆ? ತಮ್ಮದೇ ಆದ ಕಲೆ ಸಂಸ್ಕೃತಿಗಳನ್ನು ಉಳಿಸಿಕೊಳ್ಳಬೇಡವೆ? ಹೊಚ್ಚ ಹೊಸ ಬೆಳಗಿನಲ್ಲಿ ಬಾಳಬೇಡವೆ? ಶಕ್ತಿ ಸಂಪತ್ತಿಗಳಿಂದ ಬದುಕಬೇಡವೆ? ಎಲ್ಲಿ ನೋಡಿದರೂ ಒಡಕು; ಕೆಡಕು. ಯಾರಲ್ಲಿ ನೋಡಿದರೂ ಭಾಷಾದಾಸ್ಯ, ವೇಷದಾಸ್ಯ, ಸಾಹಿತ್ಯ ಸಂಸ್ಕೃತಿಕ ದಾಸ್ಯ. ತಾಂಡವವಾಡುತ್ತಿವೆ.

ವಿಚಾರಿಸಿದರೆ ಇಂದು ರಾಜಕೀಯ ಸ್ವಾತಂತ್ರ್ಯ ನಮ್ಮನ್ನು ದಾಸ್ಯದತ್ತ ಒಯ್ಯುತ್ತಿದೆ. ವಿಶಾಲಭಾವದ ಧಾರ್ಮಿಕಸ್ವಾತಂತ್ರ್ಯವೇ ನಿಜವಾದ ಸಾತಂತ್ರ್ಯ,'

ನಿಜನಾದ ಸ್ವರಾಜ್ಯ ಸಾಮಾಜಿಕದಾಸ್ಯ ಮತ್ತು ದ್ರೋಹಗಳನ್ನೆಸಗುವುದು ಕ್ಷಮಾರ್ಹ ಅಪರಾಧವಲ್ಲ. ವೀರವ್ರತಿಯಾಗದೆ ಈ ಅಪರಾಧವನ್ನು ಅಣಗಿಸಲು ಸಾಧ್ಯವಾಗದು

ನಮ್ಮ ನಾಡಿನ ಸಾಮೂಹಿಕ ಜೀವನದಲ್ಲಿ ವೀರೇಶ ಮತ್ತೆ ಮೈದಳೆದು ತೋರಲಿದ್ದಾರೆ; ತೋರಬೇಕಾಗಿದೆ. ನಮ್ಮ ಬುದ್ಧಿಗೆ ಬೆಳಕನ್ನು ಮೈಗೆ ಬಲವನ್ನು ಮನಕ್ಕೆ ಹುಮ್ಮಸ್ಸನ್ನು ಕರುಣಿಸಬೇಕಾಗಿದೆ. ಆತನ ಆ ಮಣಿಹಗಳಿಗೆ ಮತ್ತೀಗ ಇಂದಿಗೆ ಒಗ್ಗುವಂತೆ ಹೊಸರೂಹು ಬರಬೇಕಾಗಿದೆ; ಹೊಧಿಜೀತನ ಮೂಡಬೇಕಾಗಿದೆ. ಸಂಘಟನ ಸೂತ್ರವನ್ನು ಹಾಡಬೇಕಾಗಿದೆ. ಎಲ್ಲರ ಎದೆಗಳಲ್ಲಿ ಈ ದಿಸೆಯಲ್ಲಿ ಈ ಸಮಾರಂಭ ಪ್ರಾರಂಭ ಪಾದಾರ್ಪಣ. ಇನ್ನು ಮುಂದೆ ಪ್ರತಿವರ್ಷವು ಆತನ ಸ್ಮರಣೆಯು ಆತನ ಸಾಧನೆಯ ಸಾಸಬುವ ಸಮಾರಂಭ ಭಾದ್ರಪದ ಮಾಸದ ಮೊದಲ ಮಂಗಳವಾರ ಆಚರಣೆಗೆ ಬರಬೇಕೆಂದು ಎಲ್ಲರೂ ಅಂದು ಆತನ 'ಜಯಂತಿ'ಯಂತೆ ಆರಾಧಿಸಬೇಕೆಂದು ಕೋರುತ್ತೇವೆ

ವೀರೇಶ ಜಯಂತಿ !

ಭಗವಾನ್ ವೀರಭದ್ರದೇವ ಭಾರತದ ಜೀವಂತ ಮಹಾಭಾಗ್ಯ. ಅತೀ ಮಸ್ವತಂತ್ರ ಹೋರಾಟಗಾರ. ಬಹು ಪುರಾತನ ಕಾಲದಲ್ಲಿ ಭಾರತೀಯ ಸಮಾಜವಾದಕ್ಕೆ ನಾಂದಿ ಹಾಕಿದಾತ! ಆರ್ಯರ ಅತ್ಯಂತ ಸ್ವಾರ್ಥ ಲಾಲಸೆಯಿಂದ ತತ್ತರಿಸಿಹೋಗಿದ್ದ ದ್ರಾವಿಡರನ್ನು ನೆರವಿತ್ತು ಉದ್ಧರಿಸಿದಾತ! ಭಾರತದಲ್ಲಿ ಮೊಟ್ಟಮೊದಲಿಗೆ ಗಣತಂತ್ರವನ್ನು ರಚಿಸಿ ಬೆನಕನನ್ನು ಗಣಾಧಿಪತಿಯನ್ನಾಗಿಸುತ್ತಾನೆ, ಆರ್ಯದ್ರಾವಿಡರಲ್ಲಿ ಒಗ್ಗಟ್ಟನಿಂದ ಒಂದು ಹೊಸತಿರವನ್ನು ತರುತ್ತಾನೆ. ರುದ್ರಗಣ-ವೀರಗಣ-ಶಿವಗಣ-ದೇವಗಣ-ಮರುದ್ಗಣರಲ್ಲಿ ಐಕ್ಯಮತ್ಯವನ್ನು ತರುತ್ತಾನೆ. ಪಂಚಗಣ ತಂತ್ರವನ್ನು ನಿರ್ಮಿಸಿ ಅಂದೆ ಒಂದು ಬೃಹದಾಯಾಮವನ್ನು ತರುತ್ತಾನೆ. ವೀರೇಶ ನಿಸ್ಸ್ವಾರ್ಥಿ, ಮಹಾತ್ಯಾಗಮಯಜೀವಿ. ಆತನು ಅಪ್ರತಿಮ ವೀರಶ್ರೀಯ ಪ್ರತೀಕ. ಆರ್ಯರ ಹಿಂಸಾತ್ಮಕ ನಷ್ಟಾತ್ಮಕ ಯಜ್ಞಗಳನ್ನು ನಿರೋಧಿಸುವುದಷ್ಟೇ ಆತನ ಕಾರ್ಯವಲ್ಲ; ಜೊತೆಗೆ ಆತನ ತಂದೆ

ರಚಿಸಿಕೊಂಡಿದ್ದ ರುದ್ರಮತವನ್ನು ವೀರಶೈವ ಮತವನ್ನಾಗಿ ರೂಪಿಸುವುದೂ ಆತನ ಮಹಾಮಣಿಹವಾಗಿದ್ದಿತು; ಆತನ ಜೀವಿತೋದ್ದೇಶವಾಗಿದ್ದಿತು. ಆತ ನಿಂದ ರೂಪಿತವಾದುದೆ ಆದಿ ವೀರಶೈವ ಮತ.

ವೀರೇಶನು ಅಂದು ನಡೆಯುತ್ತಿರುವ ಏನೆಲ್ಲ ಬಗೆಯ ಅನ್ಯಾಯ ಅನೀತಿ ಅನಾಚಾರಗಳ ವಿರುದ್ಧ ಹೋರಾಡುವುದೇ ಆತನ ಜೀವನದ ಗುರಿಯಾಗಿದ್ದಿತು; ಕ್ರಾಂತಿಗೆ ಕಾರಣವಾಗಿದ್ದಿತು. ಆತನಿಂದ ಸಾಮಾಜಿಕ ಸಾಂಸ್ಕೃತಿಕ ಜೀವ ನದ ಪುನರುತ್ಥಾನವಾಯಿತು; ಪುನಶ್ಚೇತನವೇರ್ಪಟ್ಟಿತು. ಶಿವಗಣ-ದೇವ ಗಣರಾಗಿರುವ ವಿರಸಭಾವವನ್ನು ವಿಸರ್ಜಿಸಿದ ಕೀರ್ತಿ ಆತನದಾಗಿದೆ. ಆತನ ಆ ಕರ್ತೃತ್ವಶಕ್ತಿ ಕಲ್ಪನಾತೀತವಾದುದು. ಆ ನಿಟ್ಟಿನ ಆತನ ನೀಳಾದ ಆ ಕ್ರಾಂತಿ ಜೀವನವನ್ನು ಕಲಿತನದ ಕರ್ತವ್ಯಗಳನ್ನು ಕಳಾಮಯ ಚಾರಿತ್ರ ವನ್ನು ಆಳವಾಗಿ ಅಭ್ಯಾಸಮಾಡಬೇಕು. ಅವುಗಳಲ್ಲಿ ಅಡಕವಾಗಿರುವ ಎಲ್ಲ ಏಳ್ಗೆಯ ಅಂಶಗಳನ್ನು ಅರಸಿ ಆರ್ಜಿಸಿ ಆಚರಣೆಯಲ್ಲಿ ತರುವಂತಾಗಬೇಕು. ಪ್ರತಿಯೊಬ್ಬರು ಅವನ್ನು ಅಂತಃಕರಣ ಪೂರ್ವಕ ಅನುಲಕ್ಷಿಸಬೇಕು. ಉಳಿದ ವರಿಗೆ ಅರಿವಡಿಸಿಕೊಳ್ಳಲು ತಿಳಿಸಬೇಕು. ಆಡುವುದಕ್ಕಿಂತ ಮಾಡಲಿಗರು ಬೇಕು. ಆಗ ಆತನ ಆ ಉದಾತ್ತ ಆದರ್ಶದ ಸಾಕ್ಷಾತ್ಕಾರ ಸಾಧ್ಯ. ಆತ ನಂತೆ ಸ್ವಾರ್ಥ ಸಂಕುಚಿತ ಭಾವನೆಗಳನ್ನು ತೊರೆದು ವಿಧಾಯಕ ವೀಥಿಯಲ್ಲಿ ಮುನ್ನಡೆಯಲು ಅನುಕೂಲ. ಇದಕ್ಕೆ ಇದು ಒಳ್ಳೆಯ ಸುವರ್ಣಾವಕಾಶ. ಈ ದಿಸೆಯಲ್ಲಿ ಆ ಮಹಾಮಹಿಮನ ಆ ಮಹಾವೀರನ ಅವ ತಾಭಪ್ರಜೀವಿ- ಯ ಜಯಂತಿಯನ್ನು ಪ್ರತಿವರ್ಷ ಭಾದ್ರಪದ ಮಾಸದ ಮೊದಲ ಮಂಗಳವಾ ರದಂದು ಎಲ್ಲರೂ ಮಾಡಿ ಕರ್ತವ್ಯಪರರಾಗಬೇಕಾದುದು ಸೂಕ್ತವಾಗಿದೆ. ಅದೇ ಅವರ ಹುಟ್ಟು ದಿನ, ಮಂಗಳವಾರ ಆತನ ವಾರವಾಗಿ ಪರಿಗಣಿತವೂ ಆಗಿದೆ.

———

೩ ಕ್ರಾಂತಿಕಾರಣ ವೀರರಿಬ್ಬರು. ವೀರಭದ್ರ-ವಿರೂಪಾಕ್ಷರು.

ಶ್ರೀ ರುದ್ರದೇವನ ವೀರಕ್ರಾಂತಿಯನ್ನುವ ಮುಂದುವರಿಸಿದವರಿಬ್ಬರು. ಒಬ್ಬ ವಿರೇಶ, ಇನ್ನೊಬ್ಬ ವಿರೂಪಾಕ್ಷನೆನಿಸಿದ ಶಿವ. ವೀರೇಶ ರುದ್ರತನಯ, ಶಿವ ರುದ್ರಾನುಯಾಯಿ. ಇವರಿಬ್ಬರು ಶ್ರೀರುದ್ರದೇವನನ್ನು ಮೂಢರೂಢಿಯಲ್ಲಿ ಆರಾಧಿಸಿದವರಲ್ಲ; ಅನುಸರಿಸಿದವರಲ್ಲ. ಶ್ರೀರುದ್ರದೇವನ ಗಣತಂತ್ರದ ಸಮಾಜವಾದವನ್ನು ವಿಚಾರದ ಮೂಸೆಯಲ್ಲಿ ವಿಶುದ್ಧಗೊಳಿಸಿ ವೀರಶ್ರೀ ಮತ್ತು ವಿಶಿಷ್ಟಶಾಂತಿಗಳಲ್ಲಿ ಮುಂದುವರಿಸಿದವರು. ಶ್ರೀರುದ್ರನು ತನ್ನ ಕಾಲದಲ್ಲಿ ದ್ರಾವಿಡರ ಮೇಲೆ ದಾಳಿಮಾಡಿದ ಆರ್ಯರನ್ನು ಸದೆಬಡಿದು ಅಣಗಿಸಿದ್ದರೆ. ವೀರಭದ್ರನು ಆರ್ಯದ್ರಾವಿಡರ ಸಮನ್ವಯವನ್ನು ಸಾಧಿಸುತ್ತಾನೆ. ಆದರ್ಶವಾಗಿ ಯಜ್ಞಕ್ರಾಂತಿ ಯನ್ನೆಸಗುತ್ತಾನೆ.

ಶ್ರೀ ವಿರೇಶನು ಶಿವನಿಗೆ ಹೆಚ್ಚು ಅಚ್ಚು ಮೆಚ್ಚಿನವನು- ಶಿವಕಾರುಣ್ಯವನ್ನು ಪಡೆದು ಪ್ರಭೂತವಾಗಿ ಪ್ರಜ್ವಲಿಸಿದಾತನು. ಇದರಿಂದಾಗಿ ಈತನನ್ನು ನೇತ್ರಸಂಜಾತನೆಂದು ತಾತ್ತ್ವಿಕವಾಗಿ ಪರಿಭಾಷೆಯಲ್ಲಿ ಕವಿಗಳು ಹೇಳುವರು. ಶಿವನಿಗೆ ಅನಭಿಷಿಕ್ತಸೇನಾನಿಯಾಗಿ ಸೇವೆ ಸಲ್ಲಿಸಿದಾತನು. ಶಿವನಿಗೆ ಒದಗಿದ ಯುದ್ಧ ಪ್ರಸಂಗಗಳನ್ನು ಈತನೆ ಹೆಗಲ ಮೇಲೆ ಹೊತ್ತು ನಿತ್ತರಿಸುತ್ತಿದ್ದನು. ಆಜೀವವೂ ಶತ್ರುಗಳಿಗೆ ಅಜೇಯನಾಗಿ ಜೀವಿಸಿದನು. ಸೋಲು ಅಂಜಿಕೆಗಳೇ ಇವನಲ್ಲಿರಲಿಲ್ಲ.

ಇನ್ನೊಂದು ದೃಷ್ಟಿಯಿಂದ ವಿಚಾರಿಸಿದಲ್ಲಿ ವೀರಶೈವಕ್ಕೆ ನಾಂದಿಯನ್ನು ವೀರೇಶ ಈಶ ಇಬ್ಬರೂ ಒಂದಾಗಿ ಹಾಕಿದಂತಿದೆ. ಅಂತೆಯೆ ಇಬ್ಬರ ಹೆಸರೂ ಇದಕ್ಕೆ ಬಂದಿದೆಯಲ್ಲದೆ ಸಂಬಂಧವೂ ಸಂಪ್ರಾಪ್ತವಾಗಿದೆ. ವೀರ ಮತ್ತು ಶಿವರಿಂದ ಬಂದ ಮತ ವೀರಶೈವ ಮತವೆಂದು ಹೇಳುವಲ್ಲಿ ಔಚಿತ್ಯವಿಲ್ಲದಿಲ್ಲ. ಹೀಗೆ ಇಬ್ಬರೂ ವೀರಶೈವಕ್ಕೆ ನಾಂದಿ ಹಾಡಿದರೂ ಇವರಿಬ್ಬರಲ್ಲಿ ವೀರಶೈವವನ್ನು ಹೆಚ್ಚು ಮುಂದುವರಿಸಿದಾತನು ವೀರೇಶನು ತನ್ನ ವೀರಶ್ರೀಯನ್ನು ವೀರಭಕ್ತಿಯನ್ನು ಜೊತೆಗೆ ಸರ್ವಸಮನ್ವಯ ಸಿದ್ಧಾಂತವನ್ನು ಪ್ರಸ್ಥಾಪಿ

ಗಳನ್ನು ಭಗ್ನಗೊಳಿಸುವುದನ್ನು ಮಿಗಿಲಾಗಿ ಇಂದ್ರ-ಇಂದ್ರಾಣಿಯರನ್ನು ಶಿಕ್ಷಿಸಿ ದುರಾಚಾರಗಳಿಗೆ ಒಳಗಾಗದಂತೆ ಪ್ರಯತ್ನಿಸುವದನ್ನು ಗಮನಾರ್ಹವಾಗಿ ಮುಂದುವರಿಸಿದಾತನು ವೀರೇಶನು. ವೀರೇಶನು ಕೇವಲ ದಕ್ಷ-ನರಸಿಂಹರನ್ನು ಮಾತ್ರ ದಂಡಿಸಲಿಲ್ಲ; ದೇವಗಣರೆಂದು ಹೇಳಿಕೊಳ್ಳುತ್ತಿದ್ದ ದಾರಿತಪ್ಪಿದ ಆರ್ಯವರ್ಗದವರನ್ನೆಲ್ಲ ದಂಡಿಸಿದನು. ನಷ್ಟಾತ್ಮಕ ಹಿಂಸಾತ್ಮಕ ಯಜ್ಞಗಳನ್ನು ಬಲವಾಗಿ ನಿರೋಧಿಸಿದನು. ಸರ್ವರಲ್ಲಿ ಶೈವೀಭಾವವನ್ನು ಬಿತ್ತಿ ಬೆಳೆಯಲು ಪ್ರಬಲವಾಗಿ ಪ್ರಯತ್ನಿಸಿದನು. ಈ ದಿಸೆಯಲ್ಲಿ ಆತನದು ಉದಾತ್ತವೂ ಉಜ್ವಲವೂ ಆದ ಪಾತ್ರ. ದ್ರಾವಿಡರಿಗೊದಗಿದ ದಾಳಿಗಳನ್ನೆಲ್ಲ ಎದುರಿಸಿ ಜನ ಜೀವನಕ್ಕೆ ನೆಮ್ಮದಿಯನ್ನು ತಂದಾತನು. ದಾಸ್ಯ ಜೀವನವನ್ನು ಒಡಿಸಿದಾತನು. ಸರ್ವಸ್ವಾತಂತ್ರ್ಯಕ್ಕಾಗಿ ತನ್ನ ಕೈವಿಡಿದ ವೀರಪತ್ನಿಯೊಡನೆ ಹೋರಾಡಿದಾತನು. ತನ್ನ ವೀರಗಣರೊಡನೆ ವೀರಯಾತ್ರೆಯನ್ನು ವೀರಕ್ರಾಂತಿಯನ್ನು ಮಾಡಿ ವೀರಯುಗವನ್ನು ಪ್ರಸ್ಥಾಪಿಸಿದಾತನು. ಆತನ ಕ್ರಾಂತಿ ಭಾರತೀಯ ಕ್ರಾಂತಿ. ಅದಕ್ಕೆ ಶಿವನ ಸಂಪೂರ್ಣ ಬೆಂಬಲವಿದ್ದಿತು. ಪಿಡಿದು ಸತ್ಯ-ಅಹಿಂಸೆಗಳ ಪ್ರತೀಕರು ವೀರಭದ್ರ-ವಿರೂಪಾಕ್ಷರು ವೀರಭದ್ರ ದೇವನು ತನ್ನ ಜೀವತವನ್ನೆಲ್ಲ ಸತ್ಯದ ಬಗೆಗೆ ಸಮನ್ವಯದ ಬಗೆ ಹೋರಾಟದ ಕಲಿತನದಲ್ಲಿ ಕಳೆಯುವನು. ವಿಶಿಷ್ಟರೀತಿಯಲ್ಲಿ ವಿಜೃಂಭಿಸುವನು. ಅನ್ಯಾಯದ ವಿರುದ್ಧ ಹೋರಾಡುವನು. ಇವರಿಬ್ಬರು ಭಾರತದಾದ್ಯಂತ ಬೆಳಗಿದರು. ಭಾರತೀಯರನ್ನು ಭದ್ರದತ್ತ ಶಿವದತ್ತ ನಡೆಸಿದರು.

ಪಾರ್ವತೀಪತಿ ಶಿವನ ಸಂಗೀತ ನೃತ್ಯಗಳಲ್ಲಿ ನಿಪುಣನಾದಂತೆ ಒಕ್ಕಲುತನದಲ್ಲಿಯೂ ಒಲವುಳ್ಳವನು. ಬೇಸಾಯಕ್ಕೆ ಬೇಕಾದ ಕಟ್ಟಿಗೆಯ ಕಬ್ಬಿನ ಸಾಮುಗ್ರಿಗಳನ್ನು ಮುಮ್ಮೊದಲು ಕಂಡು ಹಿಡಿದವನು. ಎತ್ತುಗಳನ್ನು ಬೇಸಾಯ ಹೊಡೆಯಲು ಪಳಗಿಸಿದವನು. ಇದರಿಂದ ಈತನು 'ಪಶುಪತಿ'ಯೆನಿಸಿದನು. ಈತನ ಕೈಲಾಸಾಧಿಪತಿತ್ವ ಮತ್ತು ಸ್ಥಾಣು, ಖಂಡಪರಶು, ವೃಷಭೇಶ್ವರ, ವೃಷಭಾರೂಢ ಗಿರೀಶ ಎಂಬ ಹೆಸರುಗಳು ಇದನ್ನೆ ಸೂಚಿಸುತ್ತವೆ. ಒಮ್ಮೊಮ್ಮೆ ವೀರೇಶನಂತೆ'ಉಗ್ರ'ಸ್ವಭಾವದವನೂ ಆಗಿರುತ್ತಿದ್ದನು. ಇದನ್ನು ಸೂಚಿಸುತ್ತದೆ 'ಫಾಲನೇತ್ರ'ನೆಂಬ ಹೆಸರು.

ಇವರಿಬ್ಬರು ಜನಹಿತಕಾರ್ಯದಲ್ಲಿ ಯಾವಾಗಲೂ ನಿರತರಾಗಿರುತ್ತಿದ್ದರು. ಆರ್ಯರ ಶೋಷಣ ದುರಾಕ್ರಮಣಗಳಿಂದ ಅತಿಯಾಗಿ ರೋಸಿಹೋದ ಜನ ಇವರಿಬ್ಬರಲ್ಲಿ ಅತ್ಯಂತ ಆಸಕ್ತಿಯುಳ್ಳವರಾಗುವರು. ಇವರು ಜನಪ್ರಿಯರಾಗಿ ಜನಶಕ್ತಿಯನ್ನು ಗಳಿಸುವರು. ವೀರಗಣ-ಶಿವಗಣರು ಹೆಚ್ಚುವರು. ಆರ್ಯರ ಮಿತಿಮೀರಿದ ಅತ್ಯಾಚಾರಗಳನ್ನು ಅಲ್ಲಗಳೆಯುತ್ತಿದ್ದರು; ಅಂದರೆ ಖಂಡಿಸಿ ದಂಡಿಸುತ್ತಿದ್ದರು. ಅವರ ಆ ಸ್ವೇಚ್ಛಾಹಾರ ವಿಹಾರಗಳನ್ನು ನಿರೋಧಿಸುತ್ತಿದ್ದರು ಇದಕ್ಕಾಗಿ ಪರಸ್ಪರ ಘರ್ಷಣೆಗಳು ಆಗಾಗ ಜರಗುತ್ತಿದ್ದವು. ಇವರ ಪ್ರಬಲ ಶಕ್ತಿಗೆ ಅತ್ಯಾಚಾರದ ಆರ್ಯರು ಮಣಿಯುತ್ತಿದ್ದರು. ಇವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದರು. ಆದರೂ ಅವರು ಅಭ್ಯಸಿಸಿದ್ದ ಅತ್ಯಾಚಾರಗಳತ್ತ ಮತ್ತೆ ಮತ್ತೆ ವಾಲುತ್ತಿದ್ದರು. ಅಗ್ನಿಕುಂಡದ ಆಚರಣೆ ಯಜ್ಞದ ನೆಪದಲ್ಲಿ ಆಹಾರದ್ರವ್ಯ- ಮಾಂಸಾದಿಗಳನ್ನು ಆಹುತಿ ತೆಗೆದು ಕೊಳ್ಳುತ್ತಿದ್ದ ಅಗ್ನಿದೇವನನ್ನು ತೊತ್ತುಳಿದು ತಣ್ಣಗಾಗಿಸುವ (ದಂಡಿಸುವ) ಉಜ್ವಲಕ್ರಾಂತಿ; ಅಗ್ನಿಬಲ ದಮನಕಾಂಡ ಅದು ಇಂದಿಗೂ ನೆನಹಿಗಾಗಿ ನಡೆದು ಬರುತ್ತಿದೆ. ವೀರೇಶನ ವೀರ ಪ್ರಭಾವದ ಪ್ರತೀಕವಾಗಿ! ಮತ್ತು ವೀರಗಣರ ವಿಶುದ್ಧ ಜೀವನದ ಕುರುಹಾಗಿ!! ಇದೊಂದು ಅಗ್ನಿಪರೀಕ್ಷೆ. ವೀರೇಶನ ದಮನದಿಂದ ಅಗ್ನಿದೇವ ಬಲಹೀನವಾದುದರ ದಾಹಗುಣ ಅಣಗಿದುದರ ಸಂಕೇತ. ವೀರೇಶನ ಆದವ್ಯ ಚೇತನಕ್ಕೆ ವಿಜಯ ಅಷ್ಟೇ ಅಲ್ಲ ಎಲ್ಲದರಲ್ಲಿಯೂ ಆತನದು ದಿಗ್ವಿಜಯ. ಆತನವು ಜನರನ್ನು ಬಾಳಿಸಿ ಬದುಕಿಸುವ ಉದಾತ್ತ ಉದ್ದೇಶದ ಕ್ರಾಂತಿಗಳು. ಆದರಿಂದಾಗಿ ಅವು ಆತನಿಗೆ ಕೈಗೂಡದೆ ಇರುತ್ತಿರಲಿಲ್ಲ. ಜನತೆಯ ಬೆಂಬಲ ಸಿಕ್ಕದಿರುತ್ತಿರಲಿಲ್ಲ. ವಿಜಯದ ವೀರಧ್ವಜವನ್ನು ಬಾನೆತ್ತರಕ್ಕೆ ಎತ್ತಿ ಹಾರಿಸದಿರುತ್ತಿರಲಿಲ್ಲ. ಈ ಎಲ್ಲ ನವಕ್ರಾಂತಿಗಳಲ್ಲಿ ಶ್ರೀ ಭದ್ರಕಾಳಿಯದೆ ಮುಂಚೂಣಿ. ಅವಳು ವೀರಗಣ ಮತ್ತು ಶಿವಗಣರನ್ನು ತನ್ನ ಪ್ರತಿಭೆಯಿಂದ ಸಂಘಟಿಸುತ್ತಿದ್ದಳು. ವೀರಶ್ರೀಯನ್ನು ತುಂಬಿ ಹುರುದುಂಬಿಸುತ್ತಿದ್ದಳು. ವಿಜಯದತ್ತ ಸಾಗಿಸುತ್ತಿದ್ದಳು.

ಅತ್ಯಂತ ಪ್ರಾಚೀನಕಾಲದಲ್ಲಿ ಸಮಾಜವಾದವನ್ನು ಮಾನವತಾವಾದವನ್ನು ಪ್ರತಿಪಾದಿಸಿ ಅನುಷ್ಠಿಸಿ ಪ್ರತಿಷ್ಠಿಸಿದ ಪುಣ್ಯಪುರುಷರು. ತಂತಮ್ಮ

ನಡೆಗಳಲ್ಲಿ ಇವನ್ನು ನಿಲ್ಲಿಸಿದ್ದಾರೆ. ಮಾನವೀಯ ಧರ್ಮವನ್ನು ಎತ್ತಿ ಹಿಡಿದಿದ್ದಾರೆ. ಪೂರ್ವೇತಿಹಾಸದ ಈ ಸತ್ಯ ಸಂಗತಿಗಳನ್ನು ಇಂದಿನವರು ಅರಿಯಬೇಕಾಗಿದೆ; ಅರಿತು ಕಣ್ಣು ತೆರೆಯಬೇಕಾಗಿದೆ. ಆ ಆದರ್ಶದ ಹೆದ್ದಾರಿಯಲ್ಲಿ ಮುನ್ನಡೆಯಬೇಕಾಗಿದೆ. ಬಗೆದುಂಬಿಕೊಂಡು ಬಾಳಬೇಕಾಗಿದೆ.

ಅನ್ಯಾಯ ಅದೆಲ್ಲಿಯೆ ಇರಲಿ ಅದನ್ನು ಖಂಡಿಸಿ ನ್ಯಾಯವನ್ನು ನಿಲ್ಲಿಸಬೇಕಾಗಿದೆ. ಸಮಾನತೆಯ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕಾಗಿದೆ. ಅವರ ಆದರ್ಶಜೀವನ ನಮ್ಮ ಹೊಸ ಜೀವನದಲ್ಲಿ ಪಡಿಮೂಡಿ ನಿಲ್ಲಬೇಕಾಗಿದೆ. ನಮ್ಮಲ್ಲಿ ಒಗ್ಗಟ್ಟು ಸಮಾನತೆ ಮೂಡಿ ಬರಬೇಕಾಗಿದೆ. ಧರ್ಮನ್ಯಾಯಗಳ ಪ್ರೀತಿ ಹೆಚ್ಚಬೇಕಾಗಿದೆ. ಇವನ್ನು ಉಳಿಸಿ ಬಳಸಿಕೊಳ್ಳುವ ಕೆಚ್ಚು ಉಂಟಾಗಬೇಕಾಗಿದೆ. ಉಂಟಾದರೆ ಇದಕ್ಕಿಂತ ಹೆಚ್ಚಿನ ಒಳ್ಳೆಲಸ ಬೇರಿಲ್ಲ.

ವೀರಭದ್ರದೇವ ಸರ್ವಸ್ವತಂತ್ರ; ಸ್ವಾರ್ಥರಹಿತ ಇನ್ನೊಬ್ಬರ ಹಂಗಿಗನಲ್ಲ ಬೇರೆ ಯಾರಿಂದಲೂ ರೂಪಿಸಿದ ವ್ಯಕ್ತಿತ್ವವಲ್ಲ; ವೀರತ್ವವಲ್ಲ. ನ್ಯಾಯಬದ್ಧವಾದ ನಡತೆ. ನಿರುಪಮ ಶಕ್ತಿಸಂಪನ್ನ ಕಥೆ. ಆತನ ಚಾರಿತ್ರದಲ್ಲಿ ಆತನದೆ ಆದ ವೈಶಿಷ್ಟ್ಯವಿದೆ. ವೀರಗಾಸೆಯವರೂ ಇಂದಿಗೂ ಉದ್ಘೋಷಿಸುತ್ತಿರುವ "ಭಲರೇವೀರ, ನಿನಗಾರು ಸರಿಬರಿ?" ಎಂಬುದು ಆತನ ಬಗೆಗೆ ವಾಸ್ತವಕ್ಕೆ ವಾಸ್ತವ ಆತನದು ವೀರಕ್ರಾಂತಿ; ವೀರಕಾಂತಿ; ಭದ್ರ ಚರಿತೆ: ಭದ್ರ ಮಹಾನುಭಾವತೆ ಆತನ ಕ್ರಾಂತಿಯಲ್ಲಿತ್ತು. ನೀತಿಸಂಹಿತೆ ನ್ಯಾಯ ಬದ್ಧತೆ 'ವೀರಭದ್ರ' ಈ ಚತುರಕ್ಷರ ನಾಡಿಗರಿಗೆ ಮಾತ್ರವಲ್ಲ ಇಡೀ ಭಾರತೀಯರಿಗೆ ಅದೊಂದು ಅಪಾರ ಸ್ಫೂರ್ತಿಮಂತ್ರ, ಡಿಕ್ಕುತೋಚದ ಜನ ಜೀವನಕ್ಕೊಂದು ಆಧಾರಸ್ತಂಭ.

ಆತನ ಆಯಜ್ಞಕ್ರಾಂತಿಯಿಂದ ಆರ್ಯದ್ರಾವಿಡ ಸಮನ್ವಯವುಂಟಾಯಿತು. ಆರ್ಯರು ಮಾನವೀಯ ಜೀವನದ:ದೃಕ್‌ಪಥಕ್ಕೆ ಬರುವತು. ನವೀನ ವಾತಾವರಣ ನಿರ್ಮಾಣವಾಗುವುದು; ಸಾಮ್ಯವಾದದ ನವ ಜೀವನ ನಿರ್ಮಾಣವಾಗುವುದು. ದೇವಗಣರ ಮುಗಿದು ಹೋದ ಬಾಳು ಮರಳಿ ಪ್ರಾಣದಾನದಿಂದ ವೀರೇಶನ ಅನುಗ್ರಹದಿಂದ ಮೊದಲಾಗುವುದು. ತಾವು ಮೊದಲಿದ್ದ

ಮೇಲುಪ್ಪರಿಗೆಯಿಂದ ಕೆಳಕ್ಕಿಳಿಸು ಎಲ್ಲರೊಡಗೂಡಿ ಬಾಳಗಲಿತರು. ದಕ್ಷಾದಿಗಳು ಪಶುಪತಿಗಳನ್ನು ಧರಿಸಿ ವೀರೇಶನಿಂದ ಪುನರ್ಜೀವನ ಪಥಗಾಮಿಗಳಾದರು, ಮಾಂಗಾಣದ ದೇವಸ್ತ್ರೀಯರಿಗೆ ಅನವರತ ಪತಿದಾನ ಮಾಡಿ ಮುನ್ನಡೆಯಿಸಿದ ಕೀರ್ತಿಯುತ ಕರುಣಾಳುತ್ವ ವೀರೇಶನದು. ಇದಕ್ಕೆ ಸಹಾಯಕಳಾದ ಶ್ರೀಭದ್ರಕಾಳಿಯ ಹೃದಯ ಶ್ರೀಮಂತಿಕೆ ಎಂದೆಂದಿಗೂ ಸ್ತುತ್ಯರ್ಹ; ಎಂದೆಂದಿಗೂ ಗಮನಾರ್ಹ.

ವೀರೇಶ ಯಜ್ಞವೀರ, ಆತನದು ವೀರಯಜ್ಞ; ಆತನ ಆ ಲಿಂಗಪೂಜೆಯೇ ಆತ್ಮಯಜ್ಞ; ಪೂಜೆಯಲ್ಲಿನ ಧೂಪಾರ್ತಿಸೇವೆಯೆ ಸತ್ಯಯಜ್ಞ. ಆತನು ಆತ್ಮ ವೀರ. ಭಾವಭದ್ರ; ಭದ್ರಾಚಾರಿ ವೀರ ವಿಚಾರಿ ಆಚಾರ-ವಿಚಾರ ನೀತಿ ರೀತಿ ಶಿವಭಾವಗಳಲ್ಲ ಆತನದು ಭದ್ರತೆ. ಧರ್ಮ ಧೃತಿಯಲ್ಲಿ ದೃಢತೆ. ಸದ್ಗುಣ ಸುಸ್ವಭಾವಗಳಿಗಾಗಿ ಸಹಿಷ್ಣು-ಸಹಕಾರಿ ಆದೇ ದುರ್ಗುಣದುರಾಚಾರ ದುಸ್ವಭಾವಗಳಿಗೆ ಅಸಹಿಷ್ಣು, ಸಂಹರಿಷ್ಣು. ದೀನ ದುಃಖಿತರ ಸೇವೆ ಸಹಕಾರಗಳಲ್ಲಿ ನಿರತ, ಆಶ್ರಯದಾತ ಸತ್ಯದಲ್ಲಿ ಶಿವ(ದ)ಲ್ಲಿ ಆಸಕ್ತಿ. ಸತ್ಯಶಿವ ಸೇವೆಯಲ್ಲಿ ಅತ್ಯಾಸಕ್ತಿ. ಆತನು ಶಿವಾಚಾರದಲ್ಲಿ ಶುದ್ಧ-ಸಂಸಿದ್ಧ; ಶೈವೀ ವಿಚಾರದಲ್ಲಿ ಛಲ-ಪ್ರಬುದ್ಧ. ಆಂಜನೇಯಾದಿಗಳು ಆತನಿಂದ ಶಿವಾಚಾರ ನಿರತರಾದರು. ಅಂತೆಯೆ ದಕ್ಷಾದಿಗಳೂ ಆದರು. ಆತ ಕ್ರಾಂತಿಗೆ ನಾಂದಿ ಹಾಡಿದ. ಬುದ್ಧಾದಿಗಳು ಆತನ ಕ್ರಾಂತಿಯನ್ನು ಅನುಸರಿಸಿದರು. ರಾವಣಾದಿಗಳೂ ಅನುಕರಿಸಿದರು; ಯಜ್ಞಕ್ರಾಂತಿ ಶಿವಾಚಾರ ಕ್ರಾಂತಿ ನಿರತರಾದರು. ವೀರೇಶನು ಅಶಕ್ತಿಯಿರುವಲ್ಲಿ ಶಕ್ತಿಯನ್ನು ಅಶಿವವಿರುವಲ್ಲಿ ಶಿವವನು ಅಭದ್ರತೆಯನ್ನು ತುಂಬಿ ತಂದನು ಚಾರಿತ್ರ, ಪರೀಕ್ಷಣವೆ ಆತನ ಆಚಾರ ಧ್ಯೇಯ; ಆತ್ಮನಿರೀಕ್ಷಣವೆ ಆತನ ವಿಚಾರ ಗುರಿ. ಶಿವಾನುಶೀಲನವೆ ಆತನ ನಿತ್ಯಾನುಷ್ಠಾನ.

'ವೀರ-ಭದ್ರ-ಶಿವ' ಈ ಆರು ಷಡಕ್ಷರ. ಎಲ್ಲ ಷಟ್‌ತತ್ತ್ವಸ್ವರೂಪ; ಷಟ್‌ಸ್ಥಲಾತ್ಮಕ. ಅವುಗಳಲ್ಲಿ ವೀರ ಸತ್, ಭದ್ರಚಿತ್, ಶಿವ ಆನಂದವೆಂಬ ಸ್ವರೂಪ ಲಕ್ಷಣ ಲಕ್ಷಿತಗಳು. ಅಂತೆಯೆ ಮೂವಿಡಿದು ನಿತ್ಯ-ಪೂರ್ಣ-ಅಖಂಡ ಸ್ವರೂಪಗಳೂ ಆಗಿವೆ.

ರುದ್ರಾನುಯಾಯಿಯಾದ ಶಿವನು ನೃತ್ಯಪ್ರಿಯ, ಸಂಗೀತಾದಿ ಕಲಾಪ್ರಿಯ ನಟರಾಜರಾಜನೆಂಬ ಹೆಸರಾಂತಿರುವನು. ಆತನ ತಾಂಡವ ನೃತ್ಯ ಸಸ್ತ್ರೀಯದವರಿಲ್ಲ. ಆತ ಶಶಿಕಲಾಧರ, ಶಂಕರ, ಮಹೇಶ್ವರ, ಶ್ರೀಕಂಠ, ಲೀಲಾವಿನೋದ ಮೂರ್ತಿ; ಪ್ರಣವ ಪಂಚಾಕ್ಷರ ಮೂರ್ತಿ. ಗೌರೀ-ಗಂಗೆಯರ ಪತಿ, ಪಶುಪತಿ. ಆತನಿಂದ ಆಚಾರ್ಯರು ಶಿವಾಚಾರ್ಯರಾದರು. ಶರಣರು ಶಿವಶರಣರಾದರು. ಆತನಿಂದ ಗಜಾನನ ಷಡಾನನರು.

ವಚನಕಾರರ ರುದ್ರ-ಭದ್ರರು.

ಕ್ರಾಂತದರ್ಶಿಗಳ ಊರ್ಜಿತ ಉಜ್ವಲ ಪ್ರಭಾವ ತ್ರೈಕಾಲಿಕ ಸತ್ಯ. ಅದೆಂದಿಗೂ ಕಾಲಬಾಧಿತವಲ್ಲ; ದೇಶ ಸೀಮಿತವಲ್ಲ ವಸ್ತುಪರಿಚ್ಛಿನ್ನವಲ್ಲ, ತೇಜೋನ್ವಿತ ಸಾಮರ್ಥ್ಯ, ವರ್ಚಸ್ಸುಳ್ಳ ಮಹಿಮೆ, ವೈಭವಾನ್ವಿತ ಘನತೆ, ವರ್ಚಸ್ವೀ ಯಶಸ್ಸು, ಘನ ಮಹಿಮಾನ್ವಿತ ಕೀರ್ತಿ ಇವು ಪ್ರಭಾವ ಗರ್ಭ ಕೋಶಗಳು. ಪ್ರಭಾವ ಸ್ವಭಾವಗಳು ಪ್ರತಿಭೆಯನ್ನು ಪ್ರಕಾಶ ಪಡಿಸುವ ಅಸಾಮಾನ್ಯ ಶಕ್ತಿ. ಅದಿಲ್ಲದೆ ಕ್ರಾಂತದರ್ಶಿತ್ವಬಾರದು. ಸಾರ್ವಕಾಲಿಕ ಸತ್ತೆ ಯುಂಟಾಗದು.

ರುದ್ರ-ಭದ್ರರು ಪ್ರಭಾವಾನ್ವಿತ ಕ್ರಾಂತದರ್ಶಿಗಳು. ಅವರಲ್ಲಿ ತೇಜೋನ್ವಿತ ಸಾಮರ್ಥ್ಯವಿತ್ತು; ವೈಭವಾನ್ವಿತ ಘನತೆಯಿತ್ತು. ಅವರು ವರ್ಚಸ್ಸುಳ್ಳ ಮಹಿಮರು; ಘನ ಮಹಿಮಾನ್ವಿತ ಕೀರ್ತಿವಂತರು. ಅಂತೆಯೇ ಅವರು ಅಂದಿಗೂ ಇಂದಿಗೂ ಹೆಸರಾಂತಿದ್ದಾರೆ. ಅಪರಿಚ್ಛಿನ್ನ ಶಕ್ತಿ ಸಂಪನ್ನರಾಗಿದ್ದಾರೆ. ವಿಭು ವಿಭವ ನಿಷ್ಪನ್ನರಾಗಿದ್ದಾರೆ. ಅವರನ್ನು ಮನು ಮುನಿಗಳು ಕವಿ ಕಲಾವಿದರು ಹೊಗಳಿರುವಂತೆ ವಚನಕಾರರೂ ಉಲ್ಲೇಖಿಸಿ ವರ್ಣಿಸಿದ್ದಾರೆ. ಅಂಗೀಕರಿಸಿ ಸಂಗಡಿಸಿದ್ದಾರೆ;

ರುದ್ರನೆಂಬಾತನೊಬ್ಬ ಗಣೇಶ್ವರನು,
ಭದ್ರನೆಂಬಾತನೊಬ್ಬ ಗಣೇಶ್ವರನು.
ಶಂಕರನೆಂಬಾತನೊಬ್ಬ ಗಣೇಶ್ವರನು
ಶಶಿಧರನೆಂಬಾತನೊಬ್ಬ ಗಣೇಶ್ವರನು.
ಪೃಥ್ವಿಯೇ ಪೀಠ, ಆಕಾಶವೇ ಲಿಂಗ-ಅಂತಹನೊಬ್ಬ ಗಣೇಶ್ವರನು.
ಬಲ್ಲಾಳನ ವಧುವ ಬೇಡಿದಾತನೊಬ್ಬ ಗಣೇಶ್ವರನು.
ಸಿರಿಯಾಳನ ಮಗನ ಭಿಕ್ಷವ ಬೇಡಿದಾತನೊಬ್ಬ ಗಣೇಶ್ವರನು.
ಕಾಮದಹನವ ಮಾಡಿದಾತನೊಬ್ಬ ಗಣೇಶ್ವರನು
ಬ್ರಹ್ಮಕಪಾಲ-ವಿಷ್ಣು ಕಂಕಾಳವನಿಕ್ಕಿ ಆಡುವಲ್ಲಿ ನೀಲಕಂಠನೆಂಬಾತನೊಬ್ಬ ಗಣೇಶ್ವರನು
ಇವರೆಲ್ಲರು ನಮ್ಮ ಗುಹೇಶ್ವರನ ಲಿಂಗದಲ್ಲಿ ಅಡಗಿಪ್ಪರು

— ಪ್ರಭುದೇವನ ವಚನ, ಪು-೨೪೪, ವ-೨೦೨.

ರುದ್ರದೇವನ ಆದಿತ್ವ ಇಲ್ಲಿ ಈ ಪರಿಗಣನೆಯಲ್ಲಿ ಅಭಿವ್ಯಕ್ತಿಯಾಗಿದೆ. ಆತನ ಪರಿವಿಡಿಪು ಭದ್ರ ಬರುತ್ತಾನೆ. ಇಲ್ಲಿ ಭದ್ರನೆಂದರೆ ವೀರಭದ್ರನು. ರುದ್ರ-ಭದ್ರರ ಬಳಿಕ ಶಂಕರ ಶಶಿಧರಾದಿ ಗಣೇಶ್ವರರ ಗಣನೆಯಿದೆ. ಈ ಕ್ರಮ ಗಮನಾರ್ಹವಾದುದು. 'ಇವರೆಲ್ಲರೂ ನಮ್ಮ ಗುಹೇಶ್ವರ ಲಿಂಗದಲ್ಲಿ ಅಡಗಿಪ್ಪರು' ಎಂಬುದು ಮತ್ತೂ ಮನನೀಯ.

ಹೇಗೆ ರೇಣುಕಾದಿ ಆಚಾರ್ಯರು, ಬಸವಾದಿ ಶರಣರು ಗಣೇಶ್ವರರೋ ಹಾಗೆ ರುದ್ರ-ಭದ್ರಾದಿಗಳೂ ಗಣೇಶ್ವರರು; ಲಿಂಗೋಪಾಸಕರು.

ಗಣೇಶ್ವರತ್ವ ರುದ್ರದೇವನಿಂದಲೆ ಮೊದಲಾಗುತ್ತದೆ. 'ಗಣ'ಪದ ಸಮೂಹ ವಾಚಿಯಾದಂತೆ ಧರ್ಮ-ಸಂಗಡ-ಪಂಥವಾಚಿಯೂ ಆಗಿದೆ. ಮಾತ್ರೆಗಳ ಎಣಿಕೆಗೂ ಗಣವೆನ್ನುತ್ತಾರೆ. ಇವರೆದರೂ ಗಣೇಶ್ವರರು. ಇವರೆಲ್ಲ ಹೇಗೆ ಗಣರಿಗೆ ಈಶ್ವರರೋ ಹಾಗೆ ವೀರಶೈವ ಧರ್ಮಕ್ಕೂ ಈಶ್ವರರು.

ಕಾಮನ ಕಣ್ಣ ಮುಳ್ಳುಕಳೆದು,
(ಮನೋ) ಭೂಮಿಯ ತೈಲ (ಮೋಹ)ದ ಸೀಮೆಯ ಕೆಡಿಸಿ,
ಹೋಮವನುರುಹಿ ದಕ್ಷನ ತಲೆಯ ಹರಿದ-
ನಿಸ್ಸೀಮ ತರುಣನ ನಿಲವನರಿಯಬಹುದೆ?
ಅರಿವಿಂಗಸಾಧ್ಯ, ಉಪಮೆಗೆ ಕಡೆ ಮುಟ್ಟರು-
ಗುಹೇಶ್ವರನ ಶರಣರೆಂತೆಹರೆಂಬುದ ಕಂಡಾ ಬಸವಣ್ಣ! ॥ ೪೧ ॥
—ಶೂ. ಸಂ. ಮ. ಶಂ. ದೇವರ ಪ್ರಕರಣ

ಇದ್ದುದ ಹೇಳಲಿಲ್ಲ, ಇದ್ದುದ ತೋರಲಿಲ್ಲ;
ಹೊದ್ದಿದಾಶ್ರಮವ ನಾನೇನೆಂಬೆನು ಶಿವನೆ?
ಭದ್ರಕಾಳಿಯ ಬಸಿರೊಳಗಿದ್ದ ಬಾವಿಯ ಸರ್ಪನು-
ಸಿದ್ಧರಸದ ಘುಟಿಕೆಯ ನುಂಗಿ ಎದ್ದು ಆಡಿತ್ತು ನೋಡಾ!
ಹದ್ದಿನ ಹೆಡೆಯಲ್ಲಿ ಮಾಣಿಕವಿದ್ದಿಹುದು.
ಇಲ್ಲೆಂಬ ಎದ್ದು ಹೇಳುವ ಕನಸು ತಾನಲ್ಲ ಗುಹೇಶ್ವರಾ!
—ಪ್ರಭುದೇವರ ವಚನ.

ಅಲ್ಲಮಪ್ರಭುವಿನ ಈ ಎರಡು ವಚನಗಳಲ್ಲಿ ವೀರಭದ್ರ-ಭದ್ರಕಾಳಿಯರು ವಿಶಿಷ್ಟರೀತಿಯಲ್ಲಿ ಉಕ್ತರಾಗಿದ್ದಾರೆ. ವೀರ ಭದ್ರದೇವರದು 'ನಿನ್ನೀಮ ಶರಣ ನಿಲವು' ಕಾಮ ಮೋಹಗಳ ಕಳೆದ ನಿಲವು. ಅಂತೆಯೆ ಅದಿವಿಗೆ ಉಪಮೆಗೆ ನಿಲುಕದ ನಿಲವು. ಅಂತೆಯೇ ಭದ್ರಕಾಳಿಯ ಒಸಗೆ ಕನಸುವು ಕಡಿಮೆಯದೇನಲ್ಲ. ಅವಳಿದ್ದೂ ಇಲ್ಲೆಂದು ಹೇಳುವಿಕೆ ಅದೊಂದು ಎಚ್ಚರದ ಕನಸು.

ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡಾತನು ಬ್ರಹ್ಮನು
ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡಾತನು ವಿಷ್ಣುವು
ಉತ್ತಮಾಂಗದಲ್ಲಿ ಲಿಂಗವ ಧರಿಸಿಕೊಂಡಾತನು ರುದ್ರನು.
ಅಮಳೋಕ್ಯದಲ್ಲಿ ಲಿಂಗವ ಧರಿಸಿಕೊಂಡಾತನು ಈಶ್ವರನು.
ಮುಖ ಸಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತನು ಸದಾಶಿವನು
ಅಂಗ ಸೆಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತನು ಉಪಮಾತೀತನು.
ಇವರೆಲ್ಲರು ಬಯಲನೆ ಪೂಜಿಸಿ, ಮಿಥ್ಯವನಳಿದ ಇರವಿನಲ್ಲಿ
ಸುಖಿಯಾದೆನು ಗುಹೇಶ್ವರಾ!- ಐಕ್ಯಸ್ಥಲ

"....ಬಳಿಕ ಶೂನ್ಯ ವರ್ತಿಸುತ್ತಿದ್ದಿತೊಂದು ಕೆಲವು ಕಾಲ
ಅದು ತೊಡೆದು ಹೋಯಿತ್ತು.
ಬಳಿಕ ಕಾಳಾಂಧರ ವರ್ತಿಸುತ್ತಿದ್ದಿತೊಂದು ಕೆಲವು ಕಾಲ;
ಅದು ತೊಡೆದು ಹೋಯಿತ್ತು.
ಬಳಿಕ ಮಹಾ ಪ್ರಕಾಶದ ಮಹಾ ಬೆಳಗು.
ಇಂತಹ ಕಾಲಂಗಳು ಈ ಪರಿಯಲ್ಲಿ ತಿರುಗಿ ಬರುತ್ತಿಹವ ಕಾಣಿರೇ !....
ಗುಹೇಶ್ವರಲಿಂಗ ನಿರಂಜನ ನಿರಾಳ ನಿರಾಮಯ"

ಮೇಲಿನ ವಚನದಲ್ಲಿ ಆಗಿ ಹೋದ ಲಿಂಗಧಾರಿಗಳ ನಾಮ ನಿರೂಪಣೆಯಿದೆ. ರುದ್ರ ಭದ್ರನ ತಂದೆ. ರುದ್ರನು ಲಿಂಗವಂತನಾದ ಬಳಿಕ ಭದ್ರನೂ ಲಿಂಗವಂತನೆಂದು ಬೇರೆ ಹೇಳ ಬೇಕಾಗಿಲ್ಲ.

ಎರಡನೆಯ ವಚನದಲ್ಲಿ ಶೂನ್ಯದ ಬಳಿಕ ಕಾಳಾಂಧರನ ಅಸ್ತಿತ್ವ ಬರುವುದನ್ನು ಭಾವಿಸಬೇಕು. ನಿರಾಕಾರ ಶೂನ್ಯದ ಬಳಿಕ ಸಾಕಾರ ಪ್ರಪ್ರಥಮ ದೇವ ಶ್ರೀ ರುದ್ರನೆ ! ಈ ದಿಸೆಯಲ್ಲಿ ಬಸವಣ್ಣನವರ ವಚನಗಳು ಹೀಗಿವೆ.

ವಿಶ್ವಾಧಿಕೋ ರುದ್ರನ ಹೊಗಳುವ ಶ್ರುತಿಗಳು:
ವಿಶ್ವರೂಪಾಯ ವೈ ನಮಃ, ಪರಮರೂಪಿಣೇನಮಃ,
ಪರತತ್ತ್ವಾಯ ನಮಃ, ಆದಿಯಾಘೋರ ಭಯಂಕರಾಯನಮಃ
ಹರಿಯುನ ಹರಿಸಿದನೆಂದು ಶ್ರುತಿ ಸಾರುತಿರಲು ಸಂಹಾರಕಾರಣಾಯ ನಮಃ
ನಮ್ಮ ಕೂಡಲ ಸಂಗಮದೇವರ ಮಹಾ ಮಹಿಮ್ನೇ ನಮಃ
ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮ ಮಹಿಮಂಗೆ ಪ್ರತಿಯುಂಟೆ?
'ಸೋಮಃ ಪವತೇ' ಎಂಬ ಶ್ರುತಿಯನರಿದು
'ಶಿವ ಏಕೋ ದೇವ ರುದ್ರ ನದ್ವಿತೀಯ'ನೆಂದು ನಂಬೂವುದು ಕಾಣಿರಣ್ಣಾ!
ಕೂಡಲಸಂಗಮ ದೇವನೇ ದೇವನಲ್ಲದೆ ಇಲ್ಲವೆಂದು
ಎತ್ತಿದೆ ಬಿರುದ ಜಗವೆಲ್ಲರಿಯಲು!
ನೀವು ಹಿರಿಯರೆಂಬಿರಿ; ಕರ್ಮಿಗಳು ನೀವು ಕೇಳಿರಿ:
ನಿಮ್ಮ ವೇದ ಶಾಸ್ತ್ರಂಗಳು ಆರ ಹೊಗಳುತ್ತಿಹವು ?
ಓಂ ದ್ಯಾವಾ ಭೂಮೀ ಜನಯನ್ ದೇವ ಏಕ ಏವ ರುದ್ರೋ
ನದ್ವಿತೀಯ'ನೆಂದು ಶ್ರುತಿ ಸ್ಮೃತಿಗಳು ಸಾರುತ್ತಿದ್ದಾವೆ.
"....ಕೂಡಲಸಂಗಮದೇವನು ದಕ್ಷನ ಯಜ್ಞವ
ಕೆಡಿಸಿದುದ ಮರೆದಿರಲ್ಲಾ!"

ಇನ್ನು ವೀರಶೈವ ಅನಾದಿ ಎಂಬುದಕ್ಕೆ ಚನ್ನಬಸವಣ್ಣನ ಈ ಚಿನ್ಮಯ ವಾಣಿಗಳನ್ನು ಆಲಿಸಿ:

"ಆದಿಲಿಂಗ, ಅನಾದಿ ಶರಣ, ಇವರಿಂದಾಚೆಯುವ ಗುರುದೇವ-ಗುರು-ಲಿಂಗ-ಶರಣರು, ಮೀನಜ-ರೋಮಜ ಋಷಿಗಳಿಗಿಂತ ಮುನ್ನಿನವರು...."

"ಮೀನಜ ರೋಮಜ ಋಷಿಯರು ಮೊದಲಾದ
ಅನಂತಕೋಟಿ ಹರಿಬ್ರಹ್ಮರಿಲ್ಲದಂದು,
ಅಲ್ಲಿಂದತ್ತತ್ತ ನೀನೇಕೊ ಲಿಂಗ, ಒಬ್ಬನೇ ಶರಣ,
ಗುರುವೇ, ಪರಮಗುರುವೇ ನೀನೇ ಗತಿಯಯ್ಯಾ!
ಆದಿ ಕುಳಕ್ಕೆ ಮೂಲಿಗನಾಗಿ ಸುಳುಹುದೋರಿ
ಪಾವನವ ಮಾಡ ಬಂದಿರಿ...."

— ಚನ್ನಬಸವಣ್ಣ.

"ಭುವನಸ್ಯ ಪಿತರಂ ಗರ್ಭೈ ರಾಭೀ ರುದ್ರಂ
ದಿವಾರ್ದಯಾ ರುದ್ರಮವ್ರಕ ಬೃಹಂತಮೃಷ್ವಮಜರಂ
ಸುಷುಮ್ನ ದೃಗ್‌ಭುವೇ ಮಕಮಕವಿನೇಷಿವಾಸಃ ...
ಎಂಬ ಶ್ರುತಿಯ ವಿಚಾರಿಸಲರಿಯದೆ
ಒಲಿದಂತೆ ನುಡಿವುತ್ತಿಪ್ಪರು ನೋಡಯ್ಯ....
ಬಸವ ಪ್ರಿಯ ಕೂಡಲ ಚನ್ನಸಂಗಮದೇವ!"

ಈ ವಚನದಲ್ಲಿ ಸಂಗಮೇಶ್ವರ ಅಪ್ಪಣ್ಣಗಳು ರುದ್ರದೇವನೇ ಲೋಕದ ತಾಯಿ-ತಂದೆಗಳೆಂದು ತಿಳಿಹೇಳಿದ್ದಾರೆ.

"ರುದ್ರತತ್ತ್ವ ಲಿಂಗಮೂರ್ತಿಯಾಗಿ,
ಈಶ್ವರತತ್ತ್ವ ಶರಣ ಮೂರ್ತಿಯಾಗಿ,
ಸದಾಶಿವತತ್ತ್ವ ಐಕ್ಯಕೂಟಸ್ಥನಾಗಿ
ನಾಮರೂಪು ಭಾವವಳಿದಲ್ಲಿ ಪರಶಿವಮೂರ್ತಿ ಪರಾಪರದೊಳಗಾಯಿತ್ತು...."

ಎಂದು ಮುಂತಾಗಿ ನೋಳಿಗೆ ಮಾರಯ್ಯ ಆ ಒಂದು ನೂರ ಆರು ನೂರೊಂದು ಆದಾತ ರುದ್ರದೇವನೆಂದು ಹೇಳಿದ್ದಾನೆ.

"ಅತ್ತ ಪ್ರಾಣಾಭಿಮಾನದ ಮೇಲೆ ಬಂದಡೂ ಬರಲಿ,
ವ್ರತಹೀನನ ನೆರೆಯಲಾಗದು,
ನೋಡಲು ನುಡಿಸಲು ಎಂತೂ ಆಗದು.

ಹರಹರಾ, ಪಾಶವಶದಿಂದೆ ನೋಡಿದಡೆ
ರುದ್ರಜಪ–ಮಹೇಶ್ವರಾರಾಧನೆಯ ನೂಳ್ಪುದು.
ಇಂತಲ್ಲದವರ ಉರಿಲಿಂಗಪೆದ್ದಿಗಳರಸ ನಕ್ಕು ಕಳೆವನವ್ವಾ !"

ಎಂದು ಗುರುದೇವನಾದ ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಗುರುದೇವಿ ಕಾಳವ್ವೆ ನಿರೂಪಿಸಿ 'ರುದ್ರಜಪ'ಕ್ಕೆ ಹೆಚ್ಚಿನ ಹಿರಿಮೆಯನ್ನಿತ್ತಿದ್ದಾಳೆ.

"ಭಾವನೇಕೆ ಬಾರನೆನ್ನ ಮನೆಗೆ ?
ಹರಿಯ ಮಗನ ನುರುಹಿದ ಗಡುವದ
ಭಾವನೇಕೆ ಬಾರನೆನ್ನ ಮನೆಗೆ?
ಅಸುರರ ಪುರವ ಸುಟ್ಟ ವೀರಭಾವನೇಕೆ ಬಾರನೆನ್ನ ಮನೆಗೆ?
ದಕ್ಷನ ಶಿರವನರಿದು, ಯಾಗವ ಕೆಡಿಸಿ,
ಕುರಿದಲೆಯ ಹತ್ತಿಸಿ ಬಿನ್ನಣದ ಬಲುಹ ಮೆರೆವ
ಏಕೋಭಾವನೇಕೆ ಬಾರನೆನ್ನ ಮನೆಗೆ?
ಹರಿಯ ನಯನದ ಪೂಜೆ ಚರಣದಲೊಪ್ಪಿತ್ತೆಂಬ
ಮರುಳತನವು ತನಗೆ ಬೇಡವ್ವಾ,
ಆತನ ಕರೆದು ತಾರವ್ವಾ,
ಶಂಭುಜಕ್ಕೇಶ್ವರನ ನೆರೆದು ನೋಡುವೆನು"

ಎಂದು ಸತ್ಯಕ್ಕ ಶರಣೆ ಆ ವೀರೇಶ ಭಾವನ ಬರುವಿಕೆಗೆ ಭಾವಾವೇಶದಿಂದ ಬಗೆದು ಹಾಡಿದ್ದಾಳೆ. ಇದರಂತೆ ಮಹಾದೇವಿಯಕ್ಕಗಳೂ ಹಾಡಿದ್ದಾರೆ:

"ಕೆಂಜಡೆಯವನ, ಕರ್ಣ ಮಣಿಕುಂಡಲದವನ, ರುಂಡ ಮಾಲೆಯವನ
ಕಂಡರೆ ಬರಹೇಳಿರವ್ವಾ! ಗೋವಿಂದನ ನಯನ ಉಂಗುಟದ
ಮೇಲಿಪ್ಪವನ ಕಂಡರೆ ಬರಹೇಳಿರವ್ವಾ !...."
"ಉಪಮಾತೀತರು ರುದ್ರಗಣಂಗಳು; ಅವರೆನ್ನ ಬಂಧು ಬಳಗಂಗಳು...."
ಲಿಂಗಮೆಂದಿಸಿ ಲಿಂಗವಿಡಿದಿಪ್ಪ ಪುರಾತನರ
ಇಂಗಿತವನೇನೆಂದು ಬೆಸಗೊಂಬಿರಯ್ಯಾ?

ಅವರ ನಡೆಯೇ ಆಗಮ, ಅವರ ನುಡಿಯೇ ವೇದ,
ಅವರ ಲೋಕದ ಮಾನವರೆಂದೆನ್ನಬಹುದೆ ಅಯ್ಯಾ?
ಅದೆಂತೆಂದಡೆ ಸಾಕ್ಷಿ:
"ವೃಕ್ಷಾದ್ಭವತಿ ಬೀಜಂ ಹಿತದ್ ವೃಕ್ಷೇ ಲೀಯತೇ ಪುನಃ।
ರುದ್ರಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತಿ॥"ಎಂದ್ದು
ದಾಗಿ!....,,

ಈ ನಲ್ನುಡಿಗಳನ್ನಾಡಿದ ಮಾದೇವಿಯಕ್ಕ ಸಾಕ್ಷಾತ್ತಾಗಿ ರುದ್ರಕನ್ನಿಕೆ! ಇದಲ್ಲದೆ ನೀಲಮ್ಮ, ಅಕ್ಕಮ್ಮ, ಅಮುಗೆರಾಯಮ್ಮ, ಕದಿರೆ ರೆಮ್ಮವ್ವೆ ಮೊದಲಾದ ಶಿವ ಶರಣೆಯರೂ ರುದ್ರದೇವನನ್ನು ಗಂಗೆವಾಳುಕ ಸಮರುದ್ರ ಗಣರನ್ನು ತಂತಮ್ಮ ವಚನಗಳಲ್ಲಿ ಉಗ್ಗಡಿಸಿದ್ದಾರೆ. ವಿಸ್ತಾರ ಭಯದಿಂದ ಅವನ್ನೆಲ್ಲ ಇಲ್ಲಿ ಎತ್ತಿ ಉದ್ಧರಿಸಿಲ್ಲ.

ಕೊನೆಯದಾಗಿ ಸರ್ವಜ್ಞನ ಈ ನಲ್ನುಡಿಗಳನ್ನು ಆಲಿಸಿರಿ.

ಇದ್ದಿಲಿಂ ಕರಿದಿಲ್ಲ, ಬುದ್ಧಿಯಿಂ ಹಿರಿದಿಲ್ಲ
ಸಿದ್ಧರಿಂದಧಿಕ ಬಲವಿಲ್ಲ, ಪರದೈವ-
ರುದ್ರನಿಂದಿಲ್ಲ ಸರ್ವಜ್ಞ.

ರುದ್ರನಕ್ಷಿಯ ಮಣಿಯ ಹೊದ್ದಿ ಧರಿಸಿಪ್ಪರಿಗೆ
ಹೊದ್ದವು ಪಾಪಭವಮಾಲ್ಕೆ, ಸಾಕ್ಷಾತು
ರುದ್ರನೆ ಅಕ್ಕು ಸರ್ವಜ್ಞ.

ವೀರೇಶನ 'ವಡಬು'ಗಳು ಬಹಳ ಪುರಾತನದವು ಕೆಲವಿವೆ. ಅವುಗಳಲ್ಲಿ ವೀರೇಶನ ವೀರಶ್ರೀಯು ಪರಿಚಯವಾಗುತ್ತದೆ. ವೀರಕ್ರಾಂತಿಯ ಪರಿಚಯವಾಗುತ್ತದೆ. ವಚನಕಾರರ ವಚನ ರಚನೆಗೆ ಆ ವೀರೇಶನ ವಡಬುಗಳೆ ಹಿನ್ನೆಲೆಯಾಗಿರಬೇಕೆಂದು ಹೇಳಿದರೆ ತೆಗೆದು ಹಾಕುವ ಮಾತೇನಾಗದು. ಈ ದಿಸೆಯಲ್ಲಿ ಇನ್ನು ಹೆಚ್ಚಿನ ಪರಿಶೋಧನೆ ಆಗಬೇಕು

ಶ್ರೀ ವೀರಭದ್ರೇಶ್ವರ ಅಷ್ಟ ಸಹಸ್ರೋತ್ಸವಕ್ಕೆ ಅನಂತ
ಪ್ರಣಾಮಗಳು.

Phone 7095
ತಾರ:- Hoskerico

ಮೆಸರ್ಸ. ಹೊಸಕೇರಿ &

ಪಾಟೀಲ ಕಂಪನಿ

ಕಮೀಶನ್ ಎಜಂಟ & ಜನರಲ್ ಮರ್ಚಂಟ್ಸ
ನ್ಯೂ ಕಾಟನ್ ಮಾರ್ಕೆಟ ಹುಬ್ಬಳ್ಳಿ.

ಶ್ರೀ ವೀರಭದ್ರೇಶ್ವರ ಅಷ್ಟ ಸಹಸ್ರೋತ್ಸವವು ನಾಡಿಗೆ
ಅನಂತ ಸುಖ-ಶಾಂತಿಯ ಸಮೃದ್ಧಿ ತರಲಿ.

Phone ಆಫೀಸ 20166
ಮನೆ 20677
ತಾರ Uppin

ಮೆಸರ್ಸ. M. M. ಉಪ್ಪಿನ

ಕಮೀಶನ್ ಎಜಂಟ್ಸ, ರವಿವಾರ ಪೇಟ ಬೆಳಗಾಂವ.

ಶ್ರೀ ವೀರಭದ್ರೇಶ್ವರ ಅಷ್ಟಸಹಸ್ರೋತ್ಸವ ಸಮಾರಂಭವು
ಯಶಸ್ವಿಯಾಗಲಿ.



ಮೆ. ಬಿ. ಪಿ. ಹಿರೇಮಠ

ಕಾಗದ ವ್ಯಾಪಾರಿಗಳು, ವಿಜಾಪೂರ.

ಶ್ರೀ ವೀರಭದ್ರೇಶ್ವರ ಅಷ್ಟಸಹಸ್ರೋತ್ಸವ ಸಮಾರಂಭಕ್ಕೆ
ನಮ್ಮ ಹಾರ್ದಿಕ ಶುಭಾಶಯಗಳು.

ಶ್ರೀಶೈಲಪ್ಪ ಶಿವಲಿಂಗಪ್ಪ
ಕೋಲಾರ

ಕಾಟನ್ ಕಮೀಶನ್ ಎಜಂಟ, ಗೋಕಾಕ.

ಶ್ರೀ ವೀರಭದ್ರೇಶ್ವರ ಅಷ್ಟ ಸಹಸ್ರೋತ್ಸವವು ಯಶಸ್ವಿಯಾಗಿ
ನೆರವೇರಿ ನಾಡಿಗೆ ಸೌಭಾಗ್ಯ ತರಲಿ.

||

Phone } ಆಫೀಸ 351
ಗೋಡಾನ 521

ಶ್ರೀ ಚನ್ನಪ್ಪ ಚನಬಸಪ್ಪ ಅಥಣಿ
ಆಡತಿ ಅಂಗಡಿ, ಬಾಗಲಕೋಟ.

ಶ್ರೀ ವೀರಭದ್ರೇಶ್ವರ ಅಷ್ಟ ಸಹಸ್ರೋತ್ಸವವು ನಾಡಿನ
ಮಂಗಳಕ್ಕೆ ನಾಂದಿ ಹಾಡಲಿ.

Phone } ಆಫೀಸ 29
ಮನೆ 89

ಮೆ॥ ಜಿ. ಜಿ. ಕೋರಿ

ಕಾಟನ್ ಮರ್ಚಂಟ & ಕಮೀಶನ್ ಎಜಂಟ್ಸ
& ಜಿನ್ನಿಂಗ ಫ್ಯಾಕ್ಟರಿ ಓನರ್ಸ, ನರಗುಂದ.

★ ಬಾಳ ತೊಡಕಿನ ಪರಿಹಾರಕ್ಕೆ-
★ ಮಾನಸ ಮಲಿನದ ತಿಳಿಗೆ-
★ ಪರಿಪೂರ್ಣ ಜೀವನಕ್ಕೆ-
★ ಆಧ್ಯಾತ್ಮ ಸಾಧನೆಗೆ-
★ ಜಗದ ಉದ್ಧಾರಕ್ಕೆ-

} ಮಹಾತ್ಮರ ಮಾರ್ಗದರ್ಶನವೇ ಮಾಧ್ಯಮ.

ಆ ಮಾರ್ಗದರ್ಶನ ಚಿರಕಾಲದ ಬೆಳಕನ್ನು ನೀಡುತ್ತದೆ.

- ಇಂದಿನ ನವಜಗದ ನಿರ್ಮಾಣದಲ್ಲಿ
  ಮುದ್ರಣವೇ ಮಹತ್ತಮ ಮಾಧ್ಯಮ
- ವ್ಯಾಪಾರದ ಯಶಸ್ಸಿಗೆ
  ಖಾತೆ-ಕಿರ್ದಿಗಳೇ ಮುಖ್ಯ ಮಾಧ್ಯಮ.

ಸುಂದರ ಮುದ್ರಣ
ಉತ್ತಮ ಖಾತೆ-ಕಿರ್ದಿಗಳಿಗೆ
ನಮ್ಮ ಮುದ್ರಣಾಲಯವೇ
ಮಾಧ್ಯಮ.

ಒಮ್ಮೆ ಸಂದರ್ಶಿಸಿರಿ.



ಮಾಲಕರು.
ಎಸ್. ಕೆ. ನಾಗಠಾಣ

ಶ್ರೀ ವೀರಭದ್ರೇಶ್ವರ ಪ್ರಿಂಟಿಂಗ ಪ್ರೆಸ್
ನರಗುಂದ. ಫೋನ ನಂ. ೮೮
(ಜಿಲ್ಲಾ. ಧಾರವಾಡ)